ಸಾಹಿತ್ಯ ದಾಸೋಹ – ೧೯೪

೧೯೪ನೇ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಿದ ಕತೆ, ಕವನ, ಲೇಖನ, ವರದಿ ಇತ್ಯಾದಿ



ಸಮನ್ವಯ ಸಮಿತಿ ★ ನೋಡಿಯೋ ಸಾಹಿತ್ಯ ವೇದಿಕೆ ★ ಕನ್ನಡವೇ ಸತ್ಯ

ಸಾಹಿತ್ಯ ದಾಸೋಹ 194

ಪ್ರಸ್ತಾವನೆ

೨೫ನೇ ಸೆಪ್ಟೆಂಬರ್ ೨೦೨೧ರಂದು ಅಂತರಜಾಲದ ಮೂಲಕ ನಡೆದ ನೋಡಿಯೋ ಸಾಹಿತ್ಯ ದಾಸೋಹ ೧೯೪ರಲ್ಲಿ ವಿವಿಧ ಪ್ರತಿಭಾನ್ವಿತರು ವಾಚಿಸಿದ ಪ್ರಸ್ತುತಿಗಳನ್ನು ಪಿಡಿಎಫ್ ರೂಪದಲ್ಲಿ ಓದುಗರ ಕೈಗಿರಿಸಲು ಸಂತಸವೆನಿಸುತ್ತದೆ.

ಪ್ರತಿ ಬಾರಿಯಂತೆ ಈ ಸಂಚಿಕೆಯಲ್ಲೂ ಪ್ರಸ್ತುತಿಗಳು ಗುಣಮಟ್ಟ ಹಾಗೂ ವೈವಿಧ್ಯದ ಹೊಸತನ ಕಾಯ್ದುಕೊಂಡಿವೆ ಎಂಬ ವಿಶ್ವಾಸ ನಮ್ಮದು.

ಸಾಹಿತ್ಯ ದಾಸೋಹ ೧೯೪ರ ಅಧ್ಯಕ್ಷತೆ ವಹಿಸಿ ಪ್ರಸ್ತುತಿಗಳ ಬಗ್ಗೆ ಸಮಗ್ರ ವಿಶ್ಲೇಷಣೆ ನೀಡಿದ ಶ್ರೀ ಮನೋಹರ ಗೋಖಲೆ ಅವರಿಗೆ ವಂದನೆಗಳು. ತಮ್ಮ ಸ್ವರಚಿತ ಬರಹಗಳನ್ನು ಪ್ರಸ್ತುತಿಪಡಿಸಿದ ಎಲ್ಲ ದಾಸೋಹಿ ಸಾಹಿತ್ಯಾಸಕ್ತರಿಗೂ ಕೃತಜ್ಞತೆಗಳು.

ಎಂದಿನಂತೆ ಈ ಬಾರಿಯೂ ಪಿಡಿಎಫ್ ರೂಪವನ್ನು ಅಚ್ಚುಕಟ್ಟಾಗಿ ಹಾಗೂ ಆಕರ್ಷಕವಾಗಿ ಸಿದ್ಧಪಡಿಸಿದ ಶ್ರೀ ಎಸ್. ಶೃಂಗೇಶ್ವರ ಶರ್ಮ ಅವರಿಗೂ ನಮ್ಮ ನಮನಗಳು.

ದಾಸೋಹ ಅಭಿಯಾನ ಇನ್ನೂರರ ಗಡಿ ತಲುಪುತ್ತಿರುವುದು ಸಂತಸದ ಸಂಗತಿ. ಇದಕ್ಕೆ ಕಾರಣಕರ್ತರಾದ ಎಲ್ಲರಿಗೂ ಧನ್ಯವಾದಗಳು.

ಇದರಲ್ಲಿನ ಕೃತಿಗಳನ್ನು ಓದಿ ಸಸಕಸ ವೇದಿಕೆಗಳಲ್ಲಿ ನಿಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಕೋರಿಕೆ.

ವಂದನೆಗಳೊಂದಿಗೆ,

ಸಂಚಾಲಕ ಸಮಿತಿ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ........

ಮುಖಚಿತ್ರ: ಕೃಪೆ ಅಂತರ್ಜಾಲ

ನೋಡಿಯೋ ಸಾಹಿತ್ಯ ದಾಸೋಹ ೧೯೪ – ಕಾರ್ಯಕ್ರಮ ವರದಿ

- ಹು.ವಾ.ಶ್ರೀಪ್ರಕಾಶ

ದಿನಾಂಕ ೧೮.೦೯.೨೦೨೧ ಶನಿವಾರ ೩.೩೦ಕ್ಕೆ ಕಾರ್ಯಕ್ರಮ ಆರಂಭವಾಯ್ತು. ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್ ಮಹಾಬಲರವರು ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ಹು.ವಾ.ಶ್ರೀಪ್ರಕಾಶ್ ರವರು ಎಲ್ಲರಿಗೂ ಸ್ವಾಗತ ಬಯಸಿ



ಕಾರ್ಯಕ್ರಮದ ಅಧ್ಯಕ್ಷರ ಕಿರುಪರಿಚಯ ಮಾಡಿಕೊಟ್ಟರು. ಶ್ರೀ ಮನೋಹರ ಎಂ ಗೋಖಲೆಯವರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ತಮ್ಮ ಬ್ಯಾಂಕಿಂಗ್ ವೃತ್ತಿ ಆರಂಭಿಸಿ ೩೮ ವರ್ಷಗಳ ಅವಧಿಯಲ್ಲಿ ಬಳ್ಳಾರಿ, ಮೈಸೂರು, ಬೆಂಗಳೂರಿನಲ್ಲಿ ಸೇವಾವಧಿ ಮುಗಿಸಿ ಮೈಸೂರು ಬ್ಯಾಂಕ್ ವಿಲೀನದ ನಂತರ ಭಾರತೀಯ ಸ್ಟೇಟ್ ಬ್ಯಾಂಕಿನಿಂದ ನಿವೃತ್ತಿ ಪಡೆದಿದ್ದಾರೆ. ಸಾಹಿತ್ಯ ಓದು, ನಾಟಕಗಳಲ್ಲಿ ಅಭಿನಯ, ಮೈಸೂರು ಬ್ಯಾಂಕ್ ಕನ್ನಡ ಬಳಗದ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿದ್ದರಲ್ಲದೆ ಹಲವಾರು ರಸಪ್ರಶ್ನೆ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಬ್ಯಾಂಕಿನ ನಾಟಕ ತಂಡದಲ್ಲಿದ್ದುಕೊಂಡು ರಾಜ್ಯಮಟ್ಟದ, ರಾಷ್ಟ್ರಮಟ್ಟದ ನಾಟಕ ಸ್ಪರ್ಧೆಗಳಲ್ಲಿ ನಟರಾಗಿ, ರಂಗಕರ್ಮಿಯಾಗಿ ಭಾಗವಹಿಸಿದ್ದಾರೆ. ಕನ್ನಡ ಬಳಗದ ವಿಶೇಷ ಸಂದರ್ಭಗಳ ನೆನಪಿನ ಸಂಚಿಕೆಗಳು, ಹುಟ್ಟೂರು ಶಿಶಿಲ ಶ್ರೀ ಶಿಶಿಲೇಶ್ವರ ದೇವಸ್ಥಾನ ಬ್ರಹ್ಮಕಲಶೋತ್ಸವದ ಬಗ್ಗೆ, ಓದಿದ ಶಾಲೆಯ ಬಗ್ಗೆ, ಊರಿನ ಯಕ್ಷಗಾನ ಮೇಳದ ಸುವರ್ಣ ಮಹೋತ್ಸವಗಳ ಸಂಸ್ಮರಣ ಸಂಚಿಕೆಗಳನ್ನು ರೂಪಿಸಿ ಸಂಪಾದಿಸಿ ಪ್ರಕಟಿಸಿದ್ದಾರೆ. ಮೈಸೂರು ಬ್ಯಾಂಕಿನ ಇತಿಹಾಸವನ್ನು ಪರಿಚಯಿಸುವ "ಮೈಸೂರು ಬ್ಯಾಂಕ್ ನೆನಪಿನಂಗಳ" ಮ್ಯೂಸಿಯಂ ನಿರ್ಮಾಣದಲ್ಲಿ ಕಾರ್ಯಗೈದ ಅಪರೂಪದ ಅನುಭವ ಇವರದು.

ಸಮನ್ವಯ ಸಮಿತಿಯು ಏರ್ಪಡಿಸುತ್ತಿದ್ದ ಬ್ಯಾಂಕಿಂಗ್ ಕಮ್ಮಟಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಇಂಗ್ಲಿಷ್-ಕನ್ನಡ ಅನುವಾದ ಕಾರ್ಯದಲ್ಲಿ ಅಪಾರ ಆಸಕ್ತಿ. ಸೇವಾ ನಿವೃತ್ತಿಯ ನಂತರ ಸ.ಸ.ಕ.ಸ. ವೇದಿಕೆಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿದ್ದು, ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಎಚ್ಚೆಸ್ಕೆ ಜನ್ಮಶತಾಬ್ದಿ ಸವಿನೆನಪಿನ ಸಂದರ್ಭ "ಎಚ್ಚೆಸ್ಕೆ ಅಕ್ಷರ ನಮನ" ದಲ್ಲಿ ತಮ್ಮ ಹುಟ್ಟೂರಿನ ಪ್ರಕೃತಿ, ನೆಲ, ಜಲ, ಸಾಧಕರು ಪ್ರತಿಯೊಂದನ್ನೂ ಸಮಗ್ರವಾಗಿ ಪದ್ಯರೂಪದಲ್ಲಿ ಪರಿಚಯಿಸುವ "ಶಿಶಿಲ ನನ್ನೂರು ನೆನಪು ನೂರಾರು" ಕೃತಿ ಇತ್ತೀಚೆಗೆ ಬಿಡುಗಡೆ ಆಗಿದೆ.

ಈ ದಿನದ ವಿಶೇಷವೆಂದರೆ ಶ್ರೀ ಗೋಖಲೆಯವರು ಇಂದು ತಮ್ಮ ೭೫ ನೇ ವರ್ಷಕ್ಕೆ ಕಾಲಿರಿಸುತ್ತಿದ್ದಾರೆಂದು ಹೇಳಿದ ಶ್ರೀ ಹು.ವಾ. ಶ್ರೀ ಪ್ರಕಾಶ್, ವೇದಿಕೆಯ ಎಲ್ಲರ ಪರವಾಗಿ ಶ್ರೀ ಮನೋಹರ ಗೋಖಲೆಯವರಿಗೆ ಶುಭಾಶಯಗಳನ್ನು ಕೋರಿ, ಇಂದಿನ ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲರ ಪ್ರಸ್ತುತಿಗಳ ಅವಲೋಕನ ನಡೆಸಿಕೊಡಬೇಕೆಂದು ಗೋಖಲೆಯವರನ್ನು ವಿನಂತಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ವೇದಿಕೆಯ ಸಂಚಾಲಕರಾದ ಶ್ರೀ ಬೆಂ.ಶ್ರೀ ರವೀಂದ್ರರವರು, ಅಕ್ಟೋಬರ್ ೨ ರಂದು ಆಯೋಜಿಸಬೇಕೆಂದಿದ್ದ ಸ್ವಾತಂತ್ರ್ಯ ಪೂರ್ವದ ದೇಶಭಕ್ತಿ ಗೀತೆಗಳ ಗಾಯನ ಕಾರ್ಯಕ್ರಮವನ್ನು ಸದಸ್ಯರಿಗೆ ಗೀತೆಗಳನ್ನು ಆಯ್ದುಕೊಳ್ಳಲು ಹೆಚ್ಚು ಸಮಯಾವಕಾಶ ನೀಡುವುದಕ್ಕಾಗಿ ಮುಂದೂಡಲಾಗಿದೆ, ಸ್ವಾತಂತ್ರ್ಯ ಕಾಲದ ಕವಿಗಳನ್ನು ಜ್ಞಾಪಿಸಿಕೊಂಡು ಅವರ ಗೀತೆಗಳನ್ನು ಹಾಡುವುದು ಪವಿತ್ರವಾದ ಕಾರ್ಯ. ಈ ಕಾರ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಹೇಳಿದರು.

೫೦ ನೋಡಿಯೋ ಸಾಹಿತ್ಯ ದಾಸೋಹಗಳ ಮುಕ್ತ ವೇದಿಕೆಯ ಕಾರ್ಯಕ್ರಮ '೫೦ರ ಕಲರವ' ನಡೆಸಲಾಗುವುದು. ಕಾರ್ಯಕ್ರಮ ಸುಧಾರಿಸುವುದು ಹೇಗೆಂದು ಮಾತಾಡಲು ಅಂದು ಎಲ್ಲರಿಗೂ ಅವಕಾಶವಿರುತ್ತದೆ ಎಂದರು.

ಶ್ರೀ ಶೃಂಗೇಶ್ವರ ಶರ್ಮರವರು ನೋಡಿಯೋ ಸಾಹಿತ್ಯ ದಾಸೊಹ ೧೯೩ರ ಪಿಡಿಎಫ್ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ತದನಂತರ ಲೇಖಕರು ತಮ್ಮ ಪ್ರಸ್ತುತಿಗಳನ್ನು ಮಂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಮನೋಹರ ಗೋಖಲೆಯವರು ಮಾತನಾಡಿ ೨೦೧೭ರಿಂದೀಚೆಗೆ ಸಮನ್ವಯ ಸಮಿತಿಯ ಸಾಹಿತ್ಯ ದಾಸೋಹಗಳಲ್ಲಿ ಭಾಗಹಿಸುತ್ತಾ ಬಂದಿದ್ದೇನೆ. ಅನೇಕ ಸಾಹಿತಿ ಮಿತ್ರರ ಪರಿಚಯವಾಗಿದ್ದು, ಈ ವೇದಿಕೆಯಲ್ಲಿ ನನ್ನ ಮೊದಲ ಪುಸ್ತಕವೂ ಪ್ರಕಟವಾಯಿತು. ಮುಂದಿನ ಮಾರ್ಚ್ ತಿಂಗಳಿಗೆ ೨೦೦ ನೇ ದಾಸೋಹ ಎಲ್ಲರೂ ಸೇರಿ ಸಾಹಿತ್ಯ ಹಬ್ಬವಾಗಿ ಆಚರಿಸುವ ಸುದಿನ ಬರಲಿ ಎಂದು ಆಶಿಸಿ, ನಾವೆಲ್ಲರೂ ಸಮಾನ ಸಾಹಿತ್ಯಾಸಕ್ತರು. ನನ್ನನ್ನು ಇಂದು ಅಧ್ಯಕ್ಷ ಸ್ಥಾನದ ಎತ್ತರಕ್ಕೇರಿಸಿದ್ದೀರಿ. ನಿಮ್ಮೆಲ್ಲರ ಆಶೀರ್ವಾದ ನನ್ನ ಮೇಲಿರಲಿ ಎಂಬ ಪ್ರಾಸ್ತಾವಿಕ ನುಡಿಗಳನ್ನಾಡಿ ಎಲ್ಲರ ಪ್ರಸ್ತತಿಗಳ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿ ಮೆಚ್ಚುಗೆಯ ಮಾತನಾಡಿದರು.

ಕಾರ್ಯಕ್ರಮದ ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಶ್ರೀಮತಿ ಶೀಲಾ ಅರಕಲಗೂಡು ರವರು ವೇದಿಕೆಯನ್ನು ದೇವಾಲಯಕ್ಕೆ ಹೋಲಿಸಿ ಇಲ್ಲಿ ನಿತ್ಯ ಪೂಜೆ ನಡೆಯುತ್ತಿದ್ದು, ಹಬ್ಬದಂತೆ ವಿಶೇಷ ಕಾರ್ಯಕ್ರಮಗಳು ನಡೆಯುತ್ತವೆ. ಸದಸ್ಯರು ತನ್ನ ಕೃತಿಯನ್ನು ನೈವೇದ್ಯದ ಹಾಗೆ ಒಪ್ಪಿಸುತ್ತಾರೆ ಎಂದು ಹೇಳಿ ಎಲ್ಲರಿಗೂ ವಂದಿಸಿದರು.

(ಈ ಕಾರ್ಯಕ್ರಮ ಯೂಟ್ಯೂಬ್ ನಲ್ಲಿ ಲಭ್ಯವಿದೆ)

ಭಾಷಾ ಕಲಿಕೆ

ಜೀವಿ ಹೆಗಡೆ

'ಗುಡಿಯಾ ಖಾನಾ ಖಾಯಾ?', ಸಾಯಂಕಾಲ ನಾಲ್ಕೂವರೆಗೆ ಮೊಮ್ಮಗಳನ್ನು ಟ್ರೋಲಿಯಲ್ಲಿ ಕೂಡ್ರಿಸಿ ಕೊಂಡು ಅಪಾರ್ಟ್ ಮೆಂಟಿನ ಸುತ್ತಲೂ ತಿರುಗಾಡಲು ತೆಗೆದುಕೊಂಡು ಹೋದಾಗ ಗೇಟಿನ ಬಾಗಿಲಿನಲ್ಲಿ ಕಾಯುತ್ತಿರುವ ಕಾವಲುಗಾರ ಮೊದಲು ನನ್ನ ಮೊಮ್ಮಗಳಲ್ಲಿ ಕೇಳುವುದು ಈ ವಾಕ್ಯ. ಪಾಪ ಅವಳೇನು ಹೇಳಿಯಾಳು. ಹತ್ತು ತಿಂಗಳ ಎಳಗೂಸು ಅವಳು. 'ತಿಂದಾತಾ'? ಅವನು ಕೇಳಿದ ಪ್ರಶ್ನೆ. ಅವಳಿಗೆ ಅರ್ಥವಾಗಲಿ ಅಂತ ನಾನು ಅದನ್ನೇ ಕನ್ನಡದಲ್ಲಿ ಕೇಳುತ್ತಿದ್ದೆ. ಆಗ 'ಹೂಂ' ಎನ್ನುತ್ತಿದ್ದಳು. ಕಾವಲುಗಾರನಿಗೂ ತಾನು ಕೇಳಿದ ಪ್ರಶ್ನೆಗೆ ಉತ್ತರ ಸಿಕ್ಕಿದ ಸಮಾಧಾನ.

ಈ ಅಪಾರ್ಟ್ಮೆಂಟಿನಲ್ಲಿ ಸುಮಾರು ಇನ್ನೂರು ಮನೆಗಳಿವೆ. ಅಪಾರ್ಟ್ಮೆಂಟ್ ಕರ್ನಾಟಕದಲ್ಲಿದ್ದ ಮಾತ್ರಕ್ಕೆ ಅಪಾರ್ಟ್ ಮೆಂಟಿನ ಭಾಷೆ ಕನ್ನಡವೇ ಆಗಬೇಕೆಂಬುದು ಯಾವ ನ್ಯಾಯ? ಕನ್ನಡ, ತಮಿಳು, ತೆಲುಗು, ಕೊಂಕಣಿ, ತುಳು, ಹಿಂದಿ ಭಾಷೆಯನ್ನು ಮಾತೃಭಾಷೆಯಾಗುಳ್ಳ ಜನರು ಸೌಹಾರ್ದಯುತರಾಗಿಯೇ ಇದ್ದಾರೆ ಇಲ್ಲಿ. ಅವರವರ ಮನೆಯವರಲ್ಲಿ ಪರಸ್ಪರ ಮಾತನಾಡುವಾಗ ಈ ಭಾಷಾ ವೈವಿಧ್ಯತೆಗಳನ್ನು ಗಮನಿಸಬಹುದು.

ಮೂರು ವರ್ಷಗಳನ್ನು ಕಳೆದ ಕೂಡಲೇ ಮಕ್ಕಳು ಪರಸ್ಪರ ಇಂಗ್ಲೀಷಿನಲ್ಲೇ ಮಾತನಾಡಿಕೊಳ್ಳುತ್ತಾರೆ. ಬಹುಶಃ ಇಲ್ಲಿ ವಾಸಿಸುವವರು ಮಧ್ಯಮ ಅಥವಾ ಮೇಲುಮಧ್ಯಮ ವರ್ಗದವರಾದುದರಿಂದ ಇಂಗ್ಲೀಷ್ ಮಾಧ್ಯಮದ ಹುಡುಗ ರಾದುದರಿಂದ ಇದು ಸಹಜ. ಆದರೆ ನಾವು ಅಜ್ಜ ಮತ್ತು ಮೊಮ್ಮಗಳು ಕನ್ನಡದಲ್ಲಿಯೇ ಮಾತನಾಡಿಕೊಳ್ಳುವದರಿಂದ ಬಹುಶಃ ನಾವು ಶುದ್ಧ ಕನ್ನಡಿಗರೆಂದು ಇಲ್ಲಿ ಓಡಾಡುವ ಮಕ್ಕಳಿಗೆ ಹಾಗೂ ಹಿರಿಯರಿಗೆ ಗುತ್ತಾಗಿದೆ. ಇಲ್ಲಿಯ ಮಕ್ಕಳು, ಮೊಮ್ಮಗಳ ಜೊತೆ ಕನ್ನಡದಲ್ಲಿ ಮಾತನಾಡಿ ಕೆಲವೊಮ್ಮೆ ನನ್ನ ಜೊತೆ ಇಂಗ್ಲೀಷಿಗೆ ವರ್ಗವಾಗಿ ಬಿಡುತ್ತಾರೆ. ಆಮೇಲೆ ನಾನು ಕನ್ನಡದಲ್ಲಿ ಮಾತನಾಡಿದಾಗ ನನ್ನಲ್ಲಿಯೂ ಕನ್ನಡದಲ್ಲಿಯೇ ಮಾತನ್ನು ಮುಂದುವರಿಸುತ್ತಾರೆ. ಕನ್ನಡ ಭಾಷೆ ಗೊತ್ತಿಲ್ಲದ ಮಕ್ಕಳ ಜೊತೆ ನಾನು ಇಂಗ್ಲೀಷಿಗೆ ಜಾರುತ್ತೇನೆ.

ಕೆಲವು ಯುವಕ/ಯುವತಿಯರಲ್ಲಿ, ಮಕ್ಕಳಲ್ಲಿ ಹಾಗೂ ವಯಸ್ಸಾದವರಲ್ಲಿ ನಾನು ಮಾತನಾಡುವಾಗ ಹಿಂದಿ ಅಥವಾ ಇಂಗ್ಲೀಷ್ ಬಳಸದೆ ಅವರು ಬೇರೆ ಭಾಷೆಯಲ್ಲಿ ಮಾತನಾಡಲು ತೊಡಗಿದಾಗಲೂ ನಾನು ಉದ್ದೇಶಪೂರ್ವಕವಾಗಿ ಕನ್ನಡದಲ್ಲಿಯೇ ಉತ್ತರಿಸತೊಡಗಿದೆ. ಬಹಳಷ್ಟು ಜನರು 'ಅರ್ಥವಾಗುವ ಕನ್ನಡದಲ್ಲಿ' ಮಾತನಾಡತೊಡಗಿದರು. ಅವರು ಮೊಮ್ಮಗಳ ಜೊತೆಯಲ್ಲಿಯೂ ಕನ್ನಡವನ್ನೇ ಬಳಸುತ್ತಿದ್ದರು. ಕೆಲವೇ ಹಿರಿಯ ಜೀವರಿಗೆ ಅವರ ಮಾತೃಭಾಷೆ ಬಿಟ್ಟು ಬೇರೆ ಭಾಷೆ ಬರುವದಿಲ್ಲವೋ ಏನೋ? ಮೊಮ್ಮಗಳ ಜೊತೆ ಕೇವಲ ಹಾಯ್, ಬಾಯ್ ಅಂತ ಕೈಯಾಡಿಸು ತ್ತಿದ್ದರು ಅಷ್ಟೇ. ಉಳಿದ ಭಾಷಿಗರೂ ಮೊಮ್ಮಗಳ ಜೊತೆ ಹೈ, ಬಾಯ್, ಬೇಬಿ ಮುಂತಾದ ಒಂದೆರಡು ಅಕ್ಷರಗಳಿಂದಾದ ಶಬ್ದಗಳನ್ನು ಬಳಸಿ ಮಾತನಾಡುತ್ತಾರೆ. ಮೊಮ್ಮಗಳು ಕೈ ಬೀಸಿ ಹಾಯ್ ಅಂತ ಹೇಳಿ ಪ್ರತಿಕ್ರಿಯಿಸತ್ತಾಳೆ ಅಷ್ಟೇ.

ವಯಸ್ಸಾದ ಜೋಡಿಯನ್ನು ನೋಡಿದರೆ ಅವರ ಮಾತೃಭಾಷೆ ಯಾವುದು ಅಂತ ಗೊತ್ತಾಗಿಬಿಡುತ್ತದೆ. ಮಾತು ಅರ್ಥವಾಗದೇ ಇದ್ದರೂ ಯಾವ ಭಾಷೆ ಎನ್ನುವದನ್ನು ತಿಳಿಯುವದು ಕಷ್ಟವಲ್ಲ. ಅವರಲ್ಲಿ ತೆಲುಗು, ಹಿಂದಿ ಹಾಗೂ

ತಮಿಳಿನ ಹಿರಿ ಜೀವಿಗಳಲ್ಲಿ ಬಹಳಷ್ಟು ಜನರಿಗೆ ಅವರ ಮಾತೃಭಾಷೆ ಬಿಟ್ಟು ಬೇರೆ ಭಾಷೆಗಳು ಮಾತಾಡಲು ಕಷ್ಟ ಇದೆ ಅನಿಸುತ್ತದೆ. ಕೊಂಕಣಿ ಹಾಗೂ ತುಳು ಮಾತೃಭಾಷೆಯವರು ಕನ್ನಡವನ್ನು ಸಲೀಸಾಗಿ ಮಾತನಾಡುತ್ತಿದ್ದರು. ಕನ್ನಡ ಹೊರತಾಗಿ ಇಂಗ್ಲೀಷ್ ಹಾಗೂ ಹಿಂದಿಯನ್ನು ಬಿಟ್ಟು ಬೇರೆ ಭಾಷೆಯಲ್ಲಿ ಮಾತನಾಡಲು ನನಗೆ ಬರುವದಿಲ್ಲ. ಆ ಬಗ್ಗೆ ಪ್ರಯತ್ನವನ್ನೂ ಮಾಡಲಿಲ್ಲವೆನ್ನಿ.

ಆದರೆ ಈ ಲೇಖನದ ಉದ್ದೇಶ ಕಾವಲುಗಾರರ ಜೊತೆ ಮಾತನಾಡುವದು. ಇಲ್ಲಿ ಏಳೆಂಟು ಕಾವಲುಗಾರರಿದ್ದರು. ಅವರಲ್ಲಿ ಒಬ್ಬನನ್ನು ಬಿಟ್ಟು ಉಳಿದವರು ಆಸ್ಸಾಮ್ ಹಾಗೂ ಓರಿಸ್ಸಾದಿಂದ ಬಂದವರು. ಆಸ್ಸಾಮಿನಿಂದ ಬಂದವರ ಮಾತೃಭಾಷೆ ಬಂಗಾಲಿ ಅಂತ ಹೇಳಿದರು. ಓರಿಸ್ಸಾದಿಂದ ಬಂದವನದು ಓರಿಯಾ . ಒಂದು ಏಜೆನ್ಸಿಯ ಮುಖಾಂತರ ನೇಮಣೂಕಿಯಾಗಿ ಇಲ್ಲಿ ಪ್ರವೇಶ ಪಡೆದವರು. ಅವರಿಗೆ ಬೆಂಗಳೂರಿನಲ್ಲಿ ಕೆಲಸ ಮಾಡಲು ಹಿಂದಿ ತಿಳಿದಿರಬೇಕಾದುದು ಕಡ್ಡಾಯವಂತೆ. ನೆನಪಿರಲಿ ಹಿಂದಿ. ಕನ್ನಡವಲ್ಲ.

ಓಡಿಸ್ಸಾದವನಿಗೆ ಹಿಂದಿ ಕಲಿಯುವುದು ಕಷ್ಟವಲ್ಲ ಅಂತ ಹೇಳಿದನು. ಆದರೆ ಬಂಗಾಲಿ ಮಾತೃಭಾಷೆಯವರಿಗೆ ಹಿಂದಿ ಕಲಿಯುವುದು ಅಂದರೆ ಕನ್ನಡ ಅಥವಾ ಯಾವುದೇ ಇತರ ಭಾಷೆಗಳನ್ನು ಕಲಿತ ಹಾಗೆಯೇ ಕಷ್ಟಕರ. ಆದರೇನು ಅವಶ್ಯಕತೆ ಬಿದ್ದಾಗ ಭಾಷೆ ಕಲಿಯುವುದು ಕಷ್ಟವೇ? ಹೊಟ್ಟೆ ಭಾಷೆಯನ್ನು ಕಲಿಸುತ್ತದೆ. ಅವರು ಹೇಳುವ ಹಾಗೆ ಬೆಂಗಳೂರಿನಲ್ಲಿ ಹಿಂದಿ ಮಾತ್ರ ಅನಿವಾರ್ಯವಾದ ಭಾಷೆ!

ಮೊಮ್ಮಗಳ ಜೊತೆ ನನ್ನ 'ವಾಕಿಂಗ್' ಬೆಳಿಗ್ಗೆ ಹಾಗೂ ಸಂಜೆ ನಡೆದೇ ಇತ್ತು. ಇಂಗ್ಲೀಷ ಹೇಗೂ ಪಾಲಕರು ಹಾಗೂ ಶಾಲೆಯಲ್ಲಿ ಕಲಿಸೇ ಕಲಿಸುತ್ತಾರೆ ಅಂತ ನಾನು ಕನ್ನಡದಲ್ಲೇ ಅದರಲ್ಲೂ ನಮ್ಮ ಹವ್ಯಕ ಭಾಷೆಯಲ್ಲಿಯೇ ಮೊಮ್ಮಗಳ ಜೊತೆ ಮಾತನಾಡುತ್ತಿದ್ದೆ. ಕಾವಲುಗಾರರು ಮೊಮ್ಮಗಳ ಜೊತೆ ಅಭಿನಯ ಪೂರ್ವಕವಾಗಿಯೇ ಮಾತನಾಡುತ್ತಿದ್ದರು. ಮಾತನಾಡುವಾಗ ಅವರಿಗೂ ಅರ್ಥವಾಗಲಿ ಅಂತ ಅವರು ಹೇಳಿದ ಹಿಂದಿ ಶಬ್ದಕ್ಕೆ ಪರ್ಯಾಯವಾಗಿ ಕನ್ನಡ ಶಬ್ದವನ್ನು ಮೊಮ್ಮಗಳಲ್ಲಿ ಹೇಳುತ್ತಿದ್ದೆ. ಕ್ರಮೇಣ ಮೊಮ್ಮಗಳು ಹೂಂ, ಉಹೂಂ ಎನ್ನಲು ಕಲಿತಳು. ಕಾವಲುಗಾರರು ನಾನು ಕನ್ನಡದಲ್ಲಿ ಮಾತನಾಡಿದರೆ ಬೇರೆಕಡೆ ಲಕ್ಷ್ಯ ತಿರುಗಿಸುತ್ತಿದ್ದರು. ಆದ್ದರಿಂದ ಮೊಮ್ಮಗಳ ಸಲುವಾಗಿ ನಾನು ಅನಿವಾರ್ಯವಾಗಿ ಹಿಂದಿಯನ್ನು ಕನ್ನಡದ ಜೊತೆ ಕಾವಲುಗಾರರ ಜೊತೆ ಪ್ರಯೋಗಿಸುತ್ತಿದ್ದೆ.

ನಾನು ಊರಿಗೆ ಮರಳಿದೆ. ಆಮೇಲೆ ಒಂದೆರಡು ತಿಂಗಳು ಕಳೆದು ಪುನಃ ಬೆಂಗಳೂರಿಗೆ ಹೋದೆ. ಸ್ವಲ್ಪದಿನ ಅಲ್ಲಿ ಉಳಿಯಬೇಕಾಯಿತು. ಹಾಗೇ ಮೊಮ್ಮಗಳ ಜೊತೆ ವಾಕಿಂಗ್ ಮುಂದುವರಿಯಿತು.

ಗುಡಿಯಾ ಖಾನಾ ಖಾಯಾ?, ಮಮ್ಮಿ ನಹೀಂ ಆಯಾ?, ಕಲ್ ಆಓ, ಬರಸ್ ಆತಾ ಹೈ ಅಬ್ ಚಲೋ, ಬಾಲ್ ಪಕಡೊ, ಜಂಪ್ ಕರೊ, ಮುಂತಾದ ಮಾತುಗಳು ನಡೆದೇ ಇದ್ದವು. ನಾನು ಮೊಮ್ಮಗಳಲ್ಲಿ ಹೇಳಿದ ಶಬ್ದಗಳು ಕಾವಲುಗಾರರಿಗೆ ಅರ್ಥವಾಗಲಿಲ್ಲ. ಅವರಿಗೆ ಅದರ ಅವಶ್ಯಕತೆಯೂ ಬೀಳಲಿಲ್ಲ. ಆದರೆ ಮೊಮ್ಮಗಳು ಈಗ ಹಿಂದಿಯನ್ನು ಸ್ವಲ್ಪ ಸ್ವಲ್ಪ ಅರ್ಥಮಾಡಿಕೊಳ್ಳುತ್ತಿದ್ದಾಳೆ.

ಆತ್ಮ ವಿಶ್ವಾಸ ಹೆಚ್ಚಿಸಿದ ಕರೋನಾ

- ರೇಣುಕಾ ದೇಸಾಯಿ

ಬದಲಾವಣೆ ಜಗದ ನಿಯಮ" ಆದರೆ ಈ ಕೊರೋನಾ ತಂದ ಅನಾಹುತಗಳು ಸಾರ್ವತ್ರಿಕವಾಗಿ ಬದಲಾವಣೆ ತಂದಿರುವದು ನಿಜ, ಈ ಬದಲಾವಣೆಗಳು ನನ್ನಲ್ಲೂ ಪ್ರತಿಫಲಿಸಿದೆ ಸುಳ್ಳಲ್ಲ. ಈ ಸಾಂಕ್ರಾಮಿಕ ಕ್ರಿಮಿ ಜಗತ್ತಿನಾದ್ಯಂತ ಮಾನವಕುಲಕ್ಕೆ ಮಾರಕವಾಗಿ ಕಾಡಿದೆ, ಬಲವಾದ ಆರ್ಥಿಕ ಹಿನ್ನಡೆ ತಂದಿದೆ, ಸಾವು ನೋವು ಉಂಟುಮಾಡಿದೆ. ಹೀಗೆ ಪಟ್ಟಿಮಾಡಿದರೆ ಹತ್ತು ಹಲವು, ಎಲ್ಲವೂ ಮನಸ್ಸಿಗೆ ನೋವುಂಟು ಮಾಡುವವುಗಳೇ ಆಗಿವೆ ಹಾಗೆಯೇ ಇನ್ನೊಂದು ಮುಖ ಪರಿವೀಕ್ಷಣೆ ಮಾಡಿದರೆ ಮಾನವ ಸಂಬಂಧ ಬಲಗೊಂಡಿದೆ. ಲಾಕ್ ಡೌನ್ ನೆಪದಲ್ಲಿ ಕುಟುಂಬದ ಸದಸ್ಯರು ಹತ್ತಿರವಾಗಿದ್ದಾರೆ, ಒಟ್ಟಾಗಿ ನೆಮ್ಮದಿಯಿಂದ ಇರುವದನ್ನು ಕಲಿತಿದ್ದಾರೆ, ಸ್ವಚ್ಛತೆ ಕಾಪಾಡಿಕೊಳ್ಳುವದನ್ನು ಕಲಿತಿದ್ದಾರೆ. ಮನೆಯಲ್ಲಿಯೇ ತಯಾರಿಸಿದ ಶುಚಿ ರುಚಿ ಆಹಾರ ಸೇವಿಸಿ ಆರೋಗ್ಯವಂತರಾಗಿದ್ದಾರೆ. ಇದರಲ್ಲಿರುವ ಆರೋಗ್ಯ ಮತ್ತು ಹಣ ಉಳಿತಾಯದ ಎರಡು ಪ್ರಮುಖ ಗುಟ್ಟುಗಳನ್ನು ತಿಳಿದುಕೊಂಡಿದ್ದಾರೆ. ಲಾಕ್ ಡೌನ್ ಸಮಯದಲ್ಲಿ ಯಾವ ಕ್ಲಿನಿಕ್ಕೂ ತೆರೆದಿರಲಿಲ್ಲ!! ಜನರು ನೆಮ್ಮದಿಯಿಂದ ಇದ್ದರು, ಹಾಗಾದರೆ ಕೊರೋನಾಕ್ಕಿಂತ ಮೊದಲು ಪ್ರತಿ ಕ್ಲಿನಿಕ್ಕಿನಲ್ಲಿ ಕನಿಷ್ಠ ನಾಲ್ಕೈದು ಜನ ಇರುತ್ತಿದ್ದರು ಯಾಕಾಗಿ?

ಧಾವಂತದ ಬದುಕಿಗೆ ಗುಡ್ ಬೈ ಹೇಳಿದ್ದಾರೆ. ನನ್ನಿಂದಲೇ ಎಲ್ಲಾ, ನಾನು ಹತ್ತು ನಿಮಿಷ ನಿಂತರೆ ಜಗತ್ತು ನಿಲ್ಲುತ್ತೆ ಎನ್ನುವ ಅಹಂಭಾವದಿಂದ ಹೊರಗೆ ಬಂದಿದ್ದಾರೆ. ಎರಡೂ ಲಾಕ್ ಡೌನ್ ನಲ್ಲಿ ಪರಿಸರ ಮಾಲಿನ್ಯ ಕಡಿಮೆಯಾಗಿರುವ ಅರಿವಿರುವ ನಾವು ನಮ್ಮಿಂದ ಪ್ರಕೃತಿಯಡಗಿನ ಕೊಡುಗೆ ಅರಿತಿದ್ದೇವೆ.

ಎಲ್ಲಕ್ಕಿಂತ ಹೆಚ್ಚಾಗಿ ಕಷ್ಟಕಾಲದಲ್ಲಿ ನಮ್ಮಲ್ಲಿರುವದನ್ನು ಇತರರಿಗೆ ಹಂಚುವ ಬುದ್ಧಿ ಕಲಿತಿದ್ದೇವೆ, ಪರಿಸರ ಮಾಲಿನ್ಯ ನಮ್ಮ ಕೈಲಾದಷ್ಟು ಕಡಿಮೆ ಮಾಡಬೇಕು, ಜಾಗ ಸಿಕ್ಕಲ್ಲಿ ಮರಗಿಡ ಬೆಳೆಸಿ ಪ್ರಾಣವಾಯುವಿನ ಪ್ರಮಾಣ ಹೆಚ್ಚಿಸಬೇಕೆಂಬ ತುಡಿತ ಬಂದಿದೆ. ಪ್ರಾಣ ವಾಯುವಿನ ಬೆಲೆ ಅರಿತಿದ್ದೇವೆ. ಅಂಹಕಾರ ತೊರೆದು ತಗ್ಗಿ ಬಗ್ಗಿ ನಡೆಯುವದನ್ನು ಕಲಿತಿದ್ದೇವೆ.

ಇದೆಲ್ಲಾ ಮೌಲ್ಯಯುತವಾದ ಪಾಠ , ಜೊತೆಗೆ ಮೌಲ್ಯಯುತ ಬದಲಾವಣೆ ಕೂಡಾ.

ಜೀವನ ನಿತ್ಯ ಪಾಠಶಾಲೆ
ಪ್ರತಿಕ್ಷಣ ಹೊಸದೊಂದು ಕಲಿಕೆ
ಅನುದಿನ ಅನುಕ್ಷಣ ಕಲಿಯಬೇಕು
ಅನುನಯದಿಂದ ಕಲಿಯುತ್ತಾ ಸಾಗಬೇಕು

ಇನ್ನು ಕೊರೋನಾ ಕಾಲದಲ್ಲೂ ನಮ್ಮ ಬ್ಯಾಂಕು ಕೆಲಸದ ಮತ್ತು ಸಮಯದ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಎಂದಿನಂತೆ ಕಾರ್ಯನಿರ್ವಹಿಸಿದೆ. ಹೀಗಾಗಿ ಇತರರಂತೆ ಮನೆಯಲ್ಲೇ ಕುಳಿತಿಲ್ಲ. ಹೇಳಿ ಕೇಳಿ ನಾನು ಬ್ಯಾಂಕ್ ಉದ್ಯೋಗಿ, ಲೆಕ್ಕಾಚಾರದ ಮನಸ್ಥಿತಿಯುಳ್ಳವಳು, ಸಮಯದ ಅಭಾವದಿಂದ ಆಳು ಕಾಳುಗಳ ಮೇಲೆ ಅವಲಂಬಿಸದೆ ನನ್ನ ವೇಳೆಗೆ ಸರಿಯಾಗಿ ನನ್ನ ಕೆಲಸ ಮಾಡಿಕೊಳ್ಳುವುದು ಸುಲಭ ಎನ್ನುವ ವಿಚಾರಧಾರೆಯುಳ್ಳವಳು.

ಕೋರೋನಾ ಕಾಲದಲ್ಲಿ ಕೆಲಸದವರನ್ನು ಮನೆಗೆ ಕರೆಯುವಂತಿಲ್ಲ ಎಂದು ಕೊರಗಿದ ಸಹೋದ್ಯೋಗಿಗಳನ್ನು ನೋಡಿರುವೆ. ಇನ್ನು ಕೆಲಸದವರಿಂದ ಆಗುವ ಅನೇಕ ಅನಾಹುತಗಳ ಬಗೆಗೆ ಅರಿವಿರುವ, ಅವರಿಂದ ಆಗುವ ಆರ್ಥಿಕ ಹೊರೆ, ಸ್ವಚ್ಛವಾಗಿ ಪಾತ್ರೆ ಬಟ್ಟೆ ತೊಳೆಯದೇ ಆರೋಗ್ಯದ ಮೇಲಾಗುವ ದುಷ್ಪರಿಣಾಮ, ವೃಥಾ ನೀರು, ಇತರ ಸಾಮಾನುಗಳ ಪೋಲು. ಆದಾಗ್ಯೂ ಮನೆಯ ಸಂದಿಗೊಂದಿಗಳು ಕಸದ ಗೂಡು. ಮನೆಯ ಖಾಸಗಿ ವಿಷಯಗಳು ಜಗಜಾಹೀರು, ಸಮಯಕ್ಕೆ ಸರಿಯಾಗಿ ಬರದೇ, ಬೇಕಾದ ಸಮಯದಲ್ಲಿ ಕೈಕೊಡುವದು-ಹೀಗೆ ನನ್ನದೇ ಆದ ಅನೇಕ ಭಾವನೆಗಳನ್ನು ಹೊಂದಿ ಅಹೋರಾತ್ರಿ ಬ್ಯಾಂಕಿನ ಮತ್ತು ಮನೆಯ ಕೆಲಸ ನಿಭಾಯಿಸುವ ವ್ಯಕ್ತಿ. ಆರೋಗ್ಯದ ಬಗೆಗೆ, ಆಚಾರ ವಿಚಾರಗಳ ಬಗೆಗೆ ತುಂಬಾನೇ ಕಾಳಜಿ ಇದ್ದುದರಿಂದ ಮೊದಲಿನಿಂದಲೂ ಹೊರಗಿನ ಆಹಾರದ ಜಿಹ್ವಾಚಾಪಲ್ಯ ಕಡಿಮೆ. ಸಭೆ ಸಮಾರಂಭಗಳಲ್ಲಿ ಮಾತ್ರ ಸೇವನೆ. ಟಿನ್ ಫುಡ್, ರೆಡಿ ಮಿಕ್ಸ್ , ಕುಕ್ ಇನ್ ಟೂ ಮಿನಿಟ್ಸ್, ರೆಡಿ ಮೇಡ್ ಸಾಂಬಾರ ಪುಡಿ, ಚಟ್ನಿ ಪುಡಿ, ಉಪ್ಪಿನಕಾಯಿ, ಕುರುಕಲು ತಿಂಡಿ, ಸಿಹಿ ಪದಾರ್ಥಗಳ ಉಪಯೋಗ ತೀರಾ ಕಡಿಮೆ. ಹೆಚ್ಚಿನ ಹೆಣ್ಣು ಮಕ್ಕಳಿಗೆ ಕೊರೋನಾ ಈ ಪಾಠ ಕಲಿಸಿದೆ.

ಇನ್ನು ತಾಯಿಯ ಶಿಸ್ತಿನ ಜೀವನ ಸಹಜವಾಗಿ ಮೈಗೂಡಿರುವದರಿಂದ ಸ್ವಚ್ಛತೆಗೆ ಮೊದಲ ಆದ್ಯತೆ. ಹಳ್ಳಿಯಲ್ಲೇ ಹುಟ್ಟಿ ಬೆಳೆದು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಅಲ್ಲೇ ಪಡೆದದ್ದರಿಂದ ಮನೆ ಮದ್ದು ಜೀವನದಲ್ಲಿ ಹಾಸುಹೊಕ್ಕಾಗಿದೆ. ದೈವದತ್ತವಾಗಿ ಮತ್ತು ತಂದೆ ತಾಯಿಯರಿಂದ ಬಳುವಳಿಯಾಗಿ ಬಂದಿರುವ ದೃಢವಾದ ಆರೋಗ್ಯ, ಸ್ಥಿರವಾದ ಮನಸ್ಸು ಇವೆಲ್ಲಾ ನನ್ನೊಳಗೆ ಇರುವದರಿಂದ ಯಾವ ತೊಂದರೆಯನ್ನು ಅನುಭವಿಸಿಲ್ಲ.

ಕೊರೋನಾ ನನ್ನಲ್ಲಿ ತಂದ ಅತೀ ಮುಖ್ಯ ಮತ್ತು ನ್ಯಾಯಯುತ ಬದಲಾವಣೆ ಅಂದರೆ ನನ್ನ ಜೀವನದ ಕ್ರಮಕ್ಕೆ, ನಾನು ನಡಸಿಕೊಂಡು ಬಂದ ಜೀವನದ ಬದ್ಧತೆಗೆ ಮೌಲ್ಯಮಾಪನ ಹೆಚ್ಚಿಸಿದೆ, ನನಗೆ ಆತ್ಮವಿಶ್ವಾಸ ತಂದಿದೆ.

(ಪ್ರಾಫಿಟ್ ಪ್ಲಸ್ ಎನ್ನುವ ಮಾಸಪತ್ರಿಕೆ "ಕೊರೋನಾ ನಿಮ್ಮಲ್ಲಿ ತಂದ ಬದಲಾವಣೆ" ಬಗೆಗೆ ಬರೆಯಿರಿ ಎಂದು ಆಹ್ವಾನವಿತ್ತಿತ್ತು, ಅದಕ್ಕೆ ನಾನು ಬರೆದ ಲೇಖನವಿದು. ಇದು ಆಯ್ಕೆಯಾಗಿ ಪ್ರಕಟಗೊಂಡಿತ್ತು)

ಜೀವನ ವೃತ್ತದ ಭಾಮಿನಿ ಷಟ್ಪದಿ ಮಾಲೆ

ಪುರಂದರದಾಸರು

- ಶಾಂತಾ ನಾಗಮಂಗಲ

ಧರೆಗೆ ಬಂದಿತ್ತೊಂದು ಜೀವವು
ಮರೆತು ಬಿಟ್ಟಿತು ಬಂದ ಕಾರಣ
ಸರಿಯು ತಿದ್ದದು ಕಾಲ ಲೌಕಿಕ ಪಿಸುಣ ದಂಧೆಯಲಿ ।
ವರ ಸತಿಯು ಸಾಧ್ವಿಮಣಿ ಸರಸತಿ
ಪರಿಕಿಸುವ ಸೋಗಿನಲಿ ಬಂದಾ
ಹರಿಗೆ ಮೂಗುತಿ ಕೊಡಲು ಜೀವದ ಕಣ್ತೆರೆ ಸರಿದವು ॥ ೧॥

ಮರೆತು ಹರಿಯನು ಜೀವವಿದ್ದಿತು
ಮರೆಯದಿದ್ದನು ಹರಿಯು ಜೀವವ
ತಿರಿವ ನೆವದಲಿ ಬಂದು ಮುಕ್ತಿಯ ಬಟ್ಟೆ ಕಾಣಿಸಿದ ।
ತೊರೆದು ರಕ್ತಿಯ ನಡೆದನವ ಕಡ
ವರ ಲಾಭದ ಲೋಭ ಬಿಟ್ಟಿತು
ಹರಿಯ ನರಸುವ ಲೋಭ ಹಿಡಿದಿರೆ ನಡೆದ ಬೀದಿಯಲಿ ॥ ೨॥

ಜಗದ ಭೋಗವು ಹಿಂದೆ ಸರಿಯಿತು
ಹೆಗಲನೇರಿತು ಬುಟ್ಟಿ ಜೋಳಿಗೆ
ಮೊಗದಿ ಹರ್ಷವು ಚಿಟಿಕೆ ಕಾಲ್ಗೆಜ್ಜೆಗಳು ಕಿಣಿಕಿಣಿಸೆ ।
ಪೊಗಳುತಲಿ ಹರಿನಾಮವನು ದಂ
ಡಿಗೆಯ ಮೀಟುತೆ ಬೆತ್ತವೂರುತೆ
ಜಗಕೆ ಸಾರಿದ ವಿಠಲ ಭಕ್ತಿ ಮಹಿಮೆಯನು ॥ ೩॥

ವ್ಯಾಸ ರಾಯರೆ ಮೆಚ್ಚಿ ಹೊಗಳುತೆ
ನ್ಯಾಸ ವಿತ್ತರು ಪ್ರೀಯದಿಂದಲಿ
ದಾಸ ಕೂಟವ ನಡೆಸುವಂತಹ ಹಿರಿಯ ಹೊಣೆಯನ್ನು ।
ಬಿಸಜ ನಾಭನ ಪಾಡು ಪಾಡುತ
ಕಸರು ಕೊಂಕುಗಳನ್ನು ತೋರುತ
ಪಸಿಯ ಭಕ್ತಿಯ ಡಂಬವೆಲ್ಲವ ಬಯಲು ಮಾಡಿದನು ॥ ೪॥

ಪಂಚ ಭೂತದ ಗೂಡು ಪಡೆಯಿತು
ಪಂಚ ಭೂತದಿ ನೆಲೆಯ ತುದಿಯಲಿ
ಸಂಚಯಿಸಿ ಪುಣ್ಯವನು ಪುಷ್ಯ ಬಹುಳದ ದರ್ಶದಲಿ ।
ಸಾಚದಿವರೀ ಭಕ್ತಿ ದರ್ಶನ
ರೋಚಿ ತೋರಿತು ಮುಕ್ತಿ ಮಾರ್ಗಕೆ
ರೋಚಿಸುತಿಹುದು ಪುರಂದರವಿಠಲ ಪದ ಜಗದೊಳಗೆ ॥ ೫॥

(ಕಸರು=ಕೊರತೆ, ನ್ಯೂನತೆ; ಪಸಿ=ಅಪಕ್ವವಾದ್ದು; ಡಂಬ=ಡಂಭ, ಬೂಟಾಟಿಕೆ, ಸೋಗು, ಗರ್ವ; ದರ್ಶ=ಅಮಾವಾಸ್ಯೆ, ರೋಚಿ=ಬೆಳಕು; ರೋಚಿಸು=ಇಷ್ಟಪಡು, ಬೆಳಗು; ಸಾಚಾ=ಕಳ್ಳಕಪಟವಿಲ್ಲದ, ನಿಜದ)

ಹೀಗೊಂದು ವರದಿ

ಕಾಗೆಗಳ ದಿನಾಚರಣೆ

- ಹು.ವಾ.ಶ್ರೀಪ್ರಕಾಶ್

ಪ್ರಕೃತಿಯಲ್ಲಿ, ಬದುಕಿನಲ್ಲಿ ಹೇಗೆ ಒಮ್ಮೊಮ್ಮೆ ಬಿರುಸಿನ ಚಟುವಟಿಕೆ ಕಾಣುವುದೋ ಹಾಗೆ ವೇದಿಕೆಯಲ್ಲೂ ಬಿರುಸಿನ ಚಟುವಟಿಕೆ ಇರುತ್ತದೆ. ತಟ್ಟನೆ ಸಂದೇಶಗಳ ಸುನಾಮಿ ಬರುವುದೂ ಉಂಟು.

'ಕವಿಮನ'ದ ಅಂಕಣಕ್ಕೆ ಪದೇಪದೇ ನೆನಪೋಲೆ ಹಾಕಿದರೆ ಹತ್ತಾರು ಸ್ಪಂದನೆ ಬಂದರೆ ಅದೇ ಹೆಚ್ಚು. ಆದರೆ ಕೆಲವು ಸಂದೇಶಗಳು ಸುಮ್ಮನಿರುವ ಸದಸ್ಯರ ಉತ್ಸಾಹ ಹೆಚ್ಚಿಸಿ ಸ್ಪಂದನೆಯ ಮಹಾಪೂರವನ್ನೇ ಹರಿಸುವುದು ಅಚ್ಚರಿಯೇ ಸರಿ. ಇತ್ತೀಚೆಗೊಮ್ಮೆ ವೇದಿಕೆಯಲ್ಲಿ ಅಂತಹ ಸೋಜಿಗ ನಡೆಯಿತು.

ಹಾಸ್ಯ ಪ್ರಿಯರೊಬ್ಬರು ಅದೆಲ್ಲೋ ಬಾಡಿಗೆಗೆ ಸಿಕ್ಕ ಕಾಗೆಯನ್ನು ವೇದಿಕೆಯಲ್ಲಿ ತಂದು ಹಾರಿಸಿಬಿಟ್ಟರು. ಅದು ಕಾಕಾ ಅಂತ ಸಿಂಗ್ ಮಾಡುತ್ತಾ ಹಾರಾಡತೊಡಗಿದ್ದನ್ನು ಕಂಡು ಒಬ್ಬರು ಆಹಾ ಎಂದು ನೋಡಿದರೆ, ಕಗ್ಗಕ್ಕೆ ಗಂಭೀರವಾಗಿ ವ್ಯಾಖಾನ ಬರೆಯುತ್ತಿದ್ದವರಿಗೆ ಇದು ಕಿರಿಕಿರಿಯಾಯಿತು. ಕರ್ನಾಟಕದ ಕಾಗೆ ಇಂಗ್ಲೀಷಿನಲ್ಲಿ ಹಾಡುವುದನ್ನು ಒಬ್ಬರು ಪ್ರಶ್ನಿಸಿದರೆ ಮತ್ತೊಬ್ಬರು ಹಾಸ್ಯವನ್ನು ಹಾಸ್ಯವಾಗೇ ನೋಡಬೇಕೆಂದು ಬಾಣಬಿಟ್ಟರು.

ಕಾಗೆ ತನ್ನ ಬಳಗವನ್ನು ಕರೆಯುವಂತೆ ಸಾಂಗ್ ಕೇಳಿದ್ದೇ ತಡ ಎಲ್ಲ ಮೂಲೆಗಳಿಂದ ಕಾಗೆಗಳು ಹಾರಾಡತೊಡಗಿದವು. ದೇಶವೀದೇಶಗಳಲ್ಲೆಲ್ಲ ಕಾಗೆ ಹಾಡು ಪ್ರತಿಧ್ವನಿಸಿತು.

ಹುಡುಕಿದರೆ ಬಿಳಿ ಕಾಗೆಯೂ ಸಿಕ್ಕೀತು ಅಂತ ಹೊರಗೆ ಬಂದವರೊಬ್ಬರು ಕಾಗೆಯನ್ನು ನೋಡಿ ಜಯಂತ ಕಾಕಾಸುರನಾದ ಕಥೆ ನೆನಪಿಸಿಕೊಂಡು ಸುಂದರಕಾಂಡ ಮಗುಚಿದರು. ಕರ್ನಾಟಕ ಸಂಗೀತಕ್ಕೆ ತಾಳ ಹಾಕುತ್ತಿದ್ದವರು ಸಾಂಗ್ ಕೇಳಿ ಹೊರಗೆ ಬಂದು ಧನಾತ್ಮಕವೋ ಋಣಾತ್ಮಕವೋ ಪ್ರತಿಕ್ರಿಯೆ ಬರಲಿ ಎಂದು ಹೇಳಿ, ಅಂತಾರಾಷ್ಟೀಯ ಪ್ರಚಾರ ಗಿಟ್ಟಿಸಿಕೊಂಡ ಕಾಗೆಯನ್ನು ಅಭಿನಂದಿಸಿದರು.

ವೇದಿಕೆಯಲ್ಲಿ ಕಾವು ಏರುತ್ತಿರುವುದನ್ನು ತಟ್ಟನೆ ಗಮನಿಸಿದ ಅರವಳಿಕೆ ತಜ್ಞರು, ಬೆಳಕು ಹೆಚ್ಚಿರಲಿ. ಕಾಗೆಯನ್ನು ಸರಿಯಾಗಿ ಗಮನಿಸಿ ಎಂದರು.

ಈ ಕಂಗ್ಲೀಷ್ ಹಾಡಿಗೆ ನಮ್ಮ ಶಾಲಾ ಶಿಕ್ಷಣ ವ್ಯವಸ್ಥೆಯೇ ಕಾರಣ ಎಂದು ಒಬ್ಬರೆಂದರೆ, ಕಂಗ್ಲೀಷ್ ಹಾಡಿಗೆ ಮಾರು ಹೋಗಿ ಒಬ್ಬರು ತಮ್ಮ ಕೋಳಿಗೂ ಅದನ್ನು ಕಲಿಸಿದರು.

ಇದು ನಮ್ಮ ಕ್ವಾಟದ ಕಾಕಿ. ಕೊಗ್ಗ ಕಾಮತರ ಅಂಗಡಿ ಬದಿ ಹಳಸಿದ ಉಪ್ಪಿಟ್ಟು ತಿನ್ನುತ್ತಿತ್ತು. ಇದನ್ನು ಇಲ್ಲಿಗೆ ಕದ್ದು ತರಲಾಗಿದೆ ಎಂದು ಒಬ್ಬರು ಆಪಾದಿಸಿದರೆ ಮತ್ತೊಬ್ಬರು ಕಾಪುವಿನ ಪ್ರಶಾಂತ ಪೂಜಾರಿಯವರ ಬಳಿ ಈ ಕಾಗೆ

ನೋಡಿದ್ದು, ಅಲ್ಲಿಂದಲೇ ಬಾಡಿಗೆಗೆ ತಂದಿರಬೇಕು ಅಂದರು. ಈ ಕಾಗೆಯ ಚಿತ್ರ ಆರ್.ಕೆ.ಲಕ್ಷ್ಮಣ್ ಬಿಡಿಸಿದ್ದರು ಅಂತ ಒಬ್ಬರು ಹೇಳಿದರು. ಈ ಕಾಗೆ ಮೈಸೂರಿನಲ್ಲಿದ್ದಾಗ ತಮ್ಮ ಬ್ಯಾಂಕಿಗೆ ಬಂದಿದ್ದನ್ನು ಒಬ್ಬರು ನೆನಪು ಮಾಡಿಕೊಂಡರು. ಅದಕ್ಕೆ ಪುಷ್ಟಿ ಕೊಡುವಂತೆ ಹಿಂದೊಮ್ಮೆ ವೇದಿಕೆಯ ಚಿತ್ರಕವಿಯೊಬ್ಬರು ಬರೆದ ಕವನ ನೆನಪಿಸಿದರೊಬ್ಬರು. ಕಾಗೆ ಸ್ವಚ್ಛಂದವಾಗಿ ಸಾಂಗ್ ಹಾಡುತ್ತಾ, ಗೋಬಿ ಮಂಚೂರಿ ಹಾರಿಸಿ ತಂದು ನಲಿಯಿತು.

ಮಠಗಳಲ್ಲಿ ಕಾಗೆಗೆ ಬರೀ ಅನ್ನ, ಕರೀ ಎಳ್ಳು, ತುಪ್ಪದ ವಾಸನೆಯ ಪಿಂಡ ಹಾಕುವುದರಿಂದ ಬೇಜಾರಾಗಿ ಅದು ಬರುವುದಿಲ್ಲ, ೫೦ ವರ್ಷದ ಹಿಂದೆ ಮನೆಯ ಮುಂದೆ ಅಪ್ಪ ನೆಟ್ಟ ಹಲಸಿನ ಮರದಲ್ಲಿ ಈ ಕಾಗೆಯನ್ನು ಇತ್ತೀಚೆಗೆ ನೋಡಿದ್ದಾಗಿ ಹೇಳಿದರು. ಮತ್ತೊಬ್ಬರು ಮುಂಬೈನಲ್ಲಿ ತಂಗಿ ಮನೆಯಲ್ಲಿ ಕಾಗೆ ನೋಡಿದ ನೆನಪು ತೆರೆದಿಟ್ಟರು. ಅಷ್ಟರಲ್ಲಿ ಕಣ್ಣನ್ ಮಾಮ ಅಮೇರಿಕದಲ್ಲಿ ಅಜ್ಜಿ ತಿಥಿ ಮಾಡಿ ಪಿಂಡ ಕೊಡಲು ಕಾಗೆ ಹಾರಿದ ಕಡೆ ಊರೂರು ಅಲೆದಾಡಿ ಕೊನೆಗೆ ಕಾಗೆ ಕಂಡ ವಿಜ್ಞಾನಿಗೇ ಪಿಂಡ ಮುಟ್ಟಿಸಿದ್ದನ್ನು ಒಬ್ಬರು ಹೇಳಿದರು.

ಮತ್ತೊಂದು ಬದಿಯಲ್ಲಿ ಮರಕಡಿದ ಪರಿಣಾಮ, ಶ್ರಾದ್ಧ ಕರ್ಮ, ಪಿತೃ ಪಕ್ಷ, ನಂಬಿಕೆಗಳ ಬಗ್ಗೆ ಚರ್ಚೆ ಶುರುವಾಯ್ತು. ಕೆಲವರಿಗೆ ಕುಟುಂಬದ ಹಿರಿಯರು ನೆನಪಾದರೆ, ಕೆಲವರು ಮೂರು ತಲೆಮಾರನ್ನೇ ನೆನೆದರು. ಬಳಗವನ್ನು ಕೂಗಿ ಕರೆಯುವ ಕಾಗೆಯನ್ನು ಮೆಚ್ಚಿಕೊಳ್ಳುತ್ತಾ ವಾಯಸ ಪುರಾಣ ರುಚಿಕರ ಎನ್ನುತ್ತಾ ಮತ್ತೊಬ್ಬರು ಹೊರಗೆ ಬಂದರು.

ಕಾಗೆ ರಾಷ್ಟ್ರೀಯ ಪಕ್ಷಿ ಯಾಗಬೇಕೆಂಬ ಹಕ್ಕೊತ್ತಾಯ ಒಬ್ಬರು ಮಂಡಿಸಿದರೆ ಕಾಗೆಗೆ ವಿಐಪಿ ಸ್ಥಾನ ದೊರೆಯಬೇಕೆಂದರು ಮತ್ತೊಬ್ಬರು.

ಕಾಕಾಸುರನ ಕತೆಗೆ ಪೂರಕ ಮಾಹಿತಿ ಒದಗಿಸುತ್ತಾ ಕಾಗೆಗೆ ಎರಡು ಕಣ್ಣು ಒಂದೇ ಗುಡ್ಡೆ ಎಂದು ಒಬ್ಬರು ಹೇಳಿದರು. ನೇತ್ರ ವೈದ್ಯರು ಕಣ್ಣನ್ನು ಪರೀಕ್ಷಿಸಿ ಕಾಗೆಯಿಂದ ಸತ್ ಸಾಹಿತ್ಯ ಸೃಷ್ಟಿಯಾಗುತ್ತಿದೆ ಅಂದರು .

ಕಾಗೆಯ ಹಾರಾಟ ಜೋರಾಗಿರಲು ಬೇಂದ್ರೆ ಅಭಿಮಾನಿಯೊಬ್ಬರು ಆ ಕಾಗೆ ಈ ಕಾಗೆ ಏ ಕಾಗೆ ಹಾಡತೊಡಗಿದರು. ಕಾಗೆಗಳ ಗದ್ದಲ ಎಷ್ಟು ಜೋರಾಗಿತ್ತೆಂದರೆ ಎಂದೂ ನಿರ್ಧಾರ ಬದಲಿಸದ ಸಂಚಾಲಕರು ಮುಚ್ಚಿದ ಬಾಗಿಲನ್ನು ಮತ್ತೆ ತೆರೆದರು.

ಗುಬ್ಬಿ ಮನೆಯ ಕಾಗೆ ಬಳಗವೂ ಸೇರಿಕೊಂಡಿತು. ಎಲ್ಲೆಡೆ ಕಾವ್ ಕಾವ್...

ಜ್ಯೋತಿಷಿಗಳೊಬ್ಬರನ್ನು ಕುತೂಹಲಕ್ಕೆ ಕೇಳಿದೆ. ಅವರು ಪ್ರಶ್ನಾಲಗ್ನ ಹಾಕಿ ಕಾಗೆ ವೇದಿಕೆಗೆ ಕಾಲಿರಿಸಿದ ಸಮಯ ೮.೨೩ಕ್ಕೆ ಮೇಷ ಲಗ್ನ, ದಗ್ದ ರಾಶಿ, ಕೋಪತಾಪ ಅವಸರಗಳಿಗೆ ಅಧಿಪತಿಯಾದ ಕುಜನೇ ಅಧಿಪತಿಯಾಗಿದ್ದು, ಈತ ಆರನೇ ಭಾವ ಅಂದರೆ ರಿಪು ಸ್ಥಾನದಲ್ಲಿ ಕುಳಿತಿದ್ದಾನೆ ಮತ್ತು ಆರೂಢ ಲಗ್ನವು ಶನಿ ಅಧಿಪತಿಯಾಗಿರುವ ಗುಪ್ತ ರಾಶಿ ಯಾದ ಕುಂಭವಾಗಿದ್ದು ಅಲ್ಲಿ ಧರ್ಮಕರ್ಮಗಳಿಗೆ ಕಾರಣನಾದ ಗುರು ವೈರಿಯ ಮನೆಯಲ್ಕಿ ಕುಳಿತಿದ್ದಾನೆ. ಹೀಗಾಗಿ

ಧರ್ಮಕರ್ಮಗಳ ಬಗ್ಗೆ ಹೆಚ್ಚು ವಾಲಿಕೊಂಡು ಚರ್ಚೆ ನಡೆದಿದೆ. ಲಗ್ನಾಧಿಪತಿ ಜೊತೆ ಬುಧನೂ ಇರುವುದರಿಂದ ಸೃಜನಾತ್ಮಕ ರಚನೆಗಳು ಹೆಚ್ಚು ಮೂಡಿ ಬಂದಾವು ಅಂದರು.

ಕಾಕತಾಳೀಯವೆಂಬಂತೆ ಸ್ಫೂರ್ತಿ ಬಂದು ಹಲವು ಸದಸ್ಯರು ಕಾಗೆಯ ಬಗ್ಗೆ ಕವನ ಬರೆಯತೊಡಗಿದರು. "ಹೊಸ ಹಾಡು ಹಾಸ್ಯ ನಂಬಿಕೆ"- ಸೋಜಿಗ- ಕಲರ್ ಕಲರ್ ಶಬ್ದ, ಕಾಗೆ ಇಲಿ ನಾನು, ಓ ಕಾಗೆ ನಾನು ನಿನ್ನ ಹಾಗೆ, ನಿಬ್ಬು ಮುರಿದು ಹಾರು, ಪಿತೃ ರಾಯಭಾರಿಗಳು, ಕಾಖಾ ಖಗನೆ, ತಾಯಂದಿರು ಹರಸಿಹರು ನಿನಗೆ ಮುಂತಾದ ಒಳ್ಳೆಯ ಕವನಗಳು ಮೂಡಿಬಂದವು.

ವೈಜ್ಞಾನಿಕ ನೆಲೆಯಲ್ಲೂ ಚಿಂತನೆ ನಡೆಯಿತು. ಯಾವುದೂ ತಿನ್ನದ ರಾತ್ರಿ ಹೊತ್ತೂ ಅಮ್ಲಜನಕ ನೀಡುವ ಅರಳಿ ಮರದ ಹಣ್ಣು ತಿಂದು ಪ್ರಸರಣಕ್ಕೆ ಕಾರಣವಾಗುವ ಕಾಗೆಯ ಇರುವಿಕೆಯ ಅಗತ್ಯ ತಿಳಿಸಿದರು. ಜಗತ್ತಿನ ರಕ್ಷಕ ಶಕ್ತಿಗಳಲ್ಲಿ ಕಾಗೆಯೂ ಒಂದು ಎಂಬುದರಲ್ಲಿ ಎರಡು ಮಾತಿಲ್ಲ.

ಈ ಎಲ್ಲದರ ನಡುವೆ ಭೂಮಿ ಬಾಯ್ಬಿಟ್ಟಿತು ಎಂಬ ಕವಿಮನದ ಕವನದ ಸ್ಪಂದನೆಯನ್ನು ಹುಡುಕಿ ತೆಗೆಯುವುದೇ ಕಷ್ಟವಾಗಿತ್ತು. ೧೭೫ ಸದಸ್ಯರಿರುವಾಗ ಆರೇಳು ಸ್ಪಂದನೆಗಳು ಬಂದರೆ ಹೆಚ್ಚು. ಹಾಗಿರುವಾಗ ಕಾಗೆಯ ಸಾಂಗಿಗೆ ಇಷ್ಟೊಂದು ಪ್ರತಿಕ್ರಿಯೆ ಎಲ್ಲೆಡೆಯಿಂದ ಬಂತು. ನೇರ ಸ್ಪಂದನೆ ಸುಮಾರು ಮೂವತ್ತೈದು ಸದಸ್ಯರಿಂದ. ಇನ್ನು ಒಬ್ಬೊಬ್ಬರದೇ ಮೂರು ನಾಲ್ಕು ಸ್ಪಂದನೆಗಳು. ಮತ್ತಿಬ್ಬರ ಸ್ಪಂದನೆಗೆ ಸ್ಪಂದನೆ. ಹೀಗೆ ನೇರ ಅಡ್ಡ ಸ್ಪಂದನೆಗಳ ಹಾವಳಿಯಲ್ಲಿ ಬೇರೆ ಯಾವ ಸಂದೇಶಗಳೂ ಕಾಣದಾದಾಗ "ಎಲೈ ಕಾಕರಾಜನೇ, ಸಹೃದಯರು ನನ್ನ ಲೇಖನ ಓದುವವರೆಗೂ ಮರದ ಮೇಲೆ ಕುಳಿತುಕೋ" ಅಂತೊಬ್ಬರು ಬೇಡಿಕೊಂಡರು. ಈ ದಿನವನ್ನು ಕಾಗೆ ದಿನವನ್ನಾಗಿ ಆಚರಿಸಬೇಕೆಂದು ಮತ್ತೊಬ್ಬ ಸದಸ್ಯರು ಕರೆ ಇತ್ತರು.

ಕೊನೆಯಲ್ಲಿ ಎಲ್ಲರೂ ಪರಸ್ಪರ ಅಭಿನಂದಿಸಿ ಸಂತೃಪ್ತವಾಗಿ ನಕ್ಕರು.

ಹೀಗೆ ವೇದಿಕೆಯಲ್ಲಿ ಸೆಪ್ಟೆಂಬರ್ ೧೪ ರಂದು ಬಿಸಿಯಾಗಿ ಹಗುರಾಗಿ ಖುಷಿಯಾಗಿ ಕೊನೆಗೊಂಡ ಕಾಗೆಗಳ ದಿನಾಚರಣೆ ಸದಸ್ಯರ ಅತ್ಯುತ್ಸಾಹದ ಪಾಲ್ಗೊಳ್ಳುವಿಕೆಯಿಂದ ಯಶಸ್ವಿಯಾಯಿತು.

ಕೆಲವೇ ದಿನದ ನಂತರ ವೇದಿಕೆಗೆ ಬದನೆಕಾಯಿಯೂ ಬಂತು.

ಪಿತೃಪಕ್ಷದ ಈ ದಾಸೋಹದಲ್ಲಿ ಕಾಗೆಯನ್ನೂ ಜೊತೆಗೆ ಬದನೆಕಾಯಿಯನ್ನೂ ಮತ್ತೆ ತಂದದ್ದಕ್ಕೆ ಕ್ಷಮೆ ಇರಲಿ.

ಅವರಿಲ್ಲದ ಅಡುಗೆ

– ಮಾಲತಿ ಶ್ರೀನಿವಾಸನ್

ಸಂಸಾರದಲ್ಲಿ ಸಂಬಂಧಗಳನ್ನು ಒಟ್ಟಾಗಿಸಿ ಗಟ್ಟಿಯಾಗಿ ಹಿಡಿದಿಡೋ ದೈನಂದಿನ ಮುಖ್ಯ ಚಟುವಟಿಕ, ಅಡುಗೆ-ಊಟ, ಮನೆಯ ಎಲ್ಲ ಸದಸ್ಯರನ್ನು ಒಟ್ಟಾಗಿಸುವ ಕ್ಷೇತ್ರ ಅಡುಗೆ ಮನೆ, ಮತ್ತು ಊಟದ ಮೇಜು. ಮನೆಯ ಸದಸ್ಯರೆಲ್ಲರ ಜಿಹ್ವಾಚಾಪಲ್ಯಗಳನ್ನು ಅರಿತು ಸೈ ಎನ್ನುವಂತೆ ಅಡುಗೆಮಾಡುವ ಸರ್ಕಸ್ ನಲ್ಲಿ ಸದ್ಗೃಹಿಣಿ ಒಮ್ಮೊಮ್ಮೆ ಸದ್ದು ಗೃಹಿಣಿ ಆಗೋ ಸಂಭವ ಸಹ ಉಂಟು. ಮಾಮೂಲಾಗಿ ನಡೆಯುವ ಅಡುಗೆ ಊಟ ತಿಂಡಿ ತಯಾರಿ ಚಟುವಟಿಕೆಯಲ್ಲಿ ಒಮ್ಮೊಮ್ಮೆ ಬದಲಾವಣೆ ಮಾಡಬೇಕಾದ ಸಂದರ್ಭ ಬರುವುದು ಪತಿರಾಯರು ಕೆಲಸದ ಮೇಲೆ ಹೊರ ಊರುಗಳಿಗೆ ಹೊರಟಾಗ. ಈ "ಅವರಿಲ್ಲದ ಅಡುಗೆ" ತುಂಬಾ ಸ್ವಾರಸ್ಯಕರವಾದ ವಿಷಯ.

ಮದುವೆಯಾದ ಹೊಸದರಲ್ಲಿ ಭೂವಿಜ್ಞಾನಿ ಪತಿ ಪ್ರತಿ ತಿಂಗಳು ವಿದ್ಯಾರ್ಥಿಗಳೊಡನೆ ಕಲ್ಲು ಹುಡುಕುವ ಅಧ್ಯಯನಕ್ಕೆ ಪಾಂಗಿತವಾಗಿ ಬಟ್ಟೆಬರೆ, ಕಂಪಾಸು, ಹಾರೆ ಎಲ್ಲ ಜೋಡಿಸಿಕೊಂಡು ಹೊರಟಾಗ ಸಿಟ್ಟಿನೊಡನೆ ಕಣ್ಣಲ್ಲಿ ಗಂಗಾ ಕಾವೇರಿ ಧಾರೆ ಹರಿಯುತಿತ್ತು. "ಹೆಣ್ಣುಮಕ್ಕಳು ಪ್ರಯಾಣಕ್ಕೆ ಹೋಗುವಾಗ ಅಳಬಾರ್ದು, ಅಪಶಕುನ ಒಳ್ಳೇದಲ್ಲ, ನಾವಿಲ್ವೆ" ಅಂತ ಅತ್ತೆಯವರು ಗುಡುಗಿದಾಗ, ಸಮಾಧಾನ ಮಾಡ್ಕೊಂಡು, ಸರಿ ಆನ್ನುತ್ತ ಮುಂದಿನ ಕಾರ್ಯಕ್ರಮಕ್ಕೆ ಯೋಚಿಸೋದು ಅಭ್ಯಾಸ ಆಗಿತ್ತು. ಮತ್ತೆ ಸ್ವಲ್ಪ ಸಮಯದ ನಂತರ ಇದು ಮಾಮೂಲಾದಾಗ ಅತ್ತೆಯವರು, "ಹೇಗೂ ವಾಸು ಟೂರು, ಸಿಂಪಲ್ ಅಡುಗೆ ಮಾಡೋಣ ಒಂದನ್ನ, ಹುಳಿ, ಪಲ್ಯ ಆದ್ರೆ ಸಾಕು" ಅಂತ ಅಂದ್ರೆ , ಮಗರಾಯ ಕೇಳಬೇಕೆ "ಬರಿ ಹುಳಿ ತಿಂದು ಬೇಜಾರು. ಅಪ್ಪ ಇದ್ರೆ ಮಾಡೋಕೆ ಬಿಡಲ್ಲ, ಮ್ಯಾಗಿ ನೂಡಲ್ಸ್ ಮಾಡಮ್ಮ". ಸರಿ, ಶುರು ಅಲ್ಲಿಂದ ಅವರಿಲ್ಲದ ಅಡುಗೆ ಸಂಭ್ರಮ. ಅತ್ತೆ ಮಾವಂಗೆ ಮುದ್ದೆ ಹುಳಿ, ಮಕ್ಕಳಿಗೆ ನೂಡಲ್ಸ್, ನನಗಂತೂ ಎರಡೂ ಸರಿ, ಜೈ ಅನ್ನುತ್ತಾ ಅಡುಗೆ ಶುರು.

ವಯಸ್ಸಾಗ್ತಾ ಇದ್ದಂತೆ ಹಿರಿಯರ ಅಗಲಿಕೆ, ಮಕ್ಕಳು ಓದು ಕೆಲಸ ಅಂತ ದೂರಾದಾಗ, ಪತಿರಾಯರು ಅಲ್ಲಿ ಭೂಕಂಪ, ಇಲ್ಲಿ ನೀರಿನ ಕೊರತೆ ಅಂತ ತಿಂಗಳಿನಲ್ಲಿ 10-15 ದಿನ ಟೂರ್ ಹೊರಡಲು ಸಿದ್ಧರಾದಾಗ, ಇದು ಮಾಮೂಲು, ಇದನ್ನು ಅಭ್ಯಾಸ ಮಾಡ್ಕೋಬೇಕು ಅನ್ಕೊಂಡು, ಇವರು ಊರಿನಲ್ಲಿ ಇಲ್ಲದ ದಿನಗಳಲ್ಲಿ ಏನು ಮಾಡಬಹುದು ಅಂತ ಕೆಲಸಗಳ ಪಟ್ಟಿ ಮಾಡಲು ಶುರುಮಾಡುತ್ತಿದ್ದೆ. ಅದರಲ್ಲಿ ಅವರಿಲ್ಲದ ಅಡುಗೆ ವಿಶೇಷ.

ಮನೇನೋ ದೊಡ್ಡ ಸರ್ಕಾರಿ ಬಂಗ್ಲೆ, ಅತ್ತೆ ಕೋಣೆ, ಮಕ್ಕಳ ಕೋಣೆ ಎಲ್ಲ ಖಾಲಿ. ಆದರೂ ಹಳೆ ಸಾಮಾನು ಎಸೆಯೋಕಾಗದೆ ಅಲ್ಲಲ್ಲಿ ತುಂಬಿದ್ದೇ, ಒಂದು ಕಡೆಯಿಂದ ಶುಚಿ ಮಾಡೋ ಕಾರ್ಯಕ್ರಮ ಹಮ್ಮಿಕೊಂಡರೆ ಹೇಗೆ? ಒಂದು ಆಲೋಚನೆ. ಆಫೀಸರುಗಳಿಗೆ ಗ್ರೇಡು, ಹುದ್ದೆ ನೋಡಿ ಮನೆ ಕೊಡೋ ಈ ಸರ್ಕಾರಿ ವ್ಯವಸ್ಥೆ ವಿಚಿತ್ರ ಆನಿಸುತ್ತಿತ್ತು. ಚಿಕ್ಕ ವಯಸ್ಸಿನಲ್ಲಿ ಅತ್ತೆ ಮಾವ ಮಕ್ಕಳು, ನೆಂಟರು ಬಂದು ಹೋಗೋವಾಗ ತುಂಬಿದ ಮನೆ ಅವಾಗ ಕೆಳವರ್ಗದ ವಿಜ್ಞಾನಿ ಅಂತ ಕೊಡೋದು ಚಿಕ್ಕ ಒಂದು ಕೋಣೆಯ ಮನೆ. ಅಡುಗೆ ಮನೇಲಿ ಒಬ್ಬರಿದ್ದರೆ ಇನ್ನೊಬ್ಬರಿಗೆ ಜಾಗ ಇಲ್ಲ. ಅತ್ತೆ ಸೊಸೆ ಮಧ್ಯೆ ಗಲಾಟೆ ಬೇಡ ಅಂತ ಒಬ್ಬರು ಒಳಗಿದ್ರೆ ಇನ್ನೊಬ್ಬರು ಹೊರಗೆ. ಮಧ್ಯ ವಯಸ್ಸಿನಲ್ಲಿ

ಹಿರಿಯರು ನಮ್ಮಿಂದ ದೂರಾಗಿ, ಮಕ್ಕಳು ಓದು ಕೆಲಸ ಅಂತ ಬೇರೇ ಕಡೆ ಇದ್ದಾಗ ಕೊಟ್ಟಿದ್ದು ವಿಶಾಲವಾದ ಅಡುಗೆ ಕೋಣೆ, ಫುಟ್ಬಾಲು, ಕ್ರಿಕೆಟ್ ಅಡಬಹುದಾದಂತಹ ಊಟದ ಕೋಣೆ, ಹರಟಲು ದೊಡ್ಡ ಪಡಸಾಲೆ, ಮನೇಲಿ ಇಬ್ಬರೇ. ವೆಂಕ ಇಲ್ಲ ನಾನು ಸೀನ ಅಷ್ಟೆ, ಕ್ಷಮಿಸಿ (ಇದು ಸ್ವಗತ).

ಇನ್ನು ಇವರು ಟೂರ್ ಹೊರಟಾಗೆಲ್ಲ ಪಕ್ಕದ ಮನೆಯ ಕಾತ್ಯಾಯಿನಿ ದಂಪತಿಗಳಿಗೆ ನನ್ನ ಬಗ್ಗೆ ಬಾರಿ ಕಾಳಜಿ. "ಹಲೋ ಆಂಟಿ, ಅಂಕಲ್ ಮನೇಲಿ ಇಲ್ಲ, ಅವರಿಲ್ಲದ ಅಡುಗೆ ಏನ್ ಸ್ಪೆಷಲ್ಲೂ. ಒಬ್ಬಳೇ ವಾಯುವಿಹಾರಕ್ಕೆ ಕಾಲಾಡಿಸೋಣ ಅಂತ ಹೊರಟ ನಂಗೆ ಅಡ್ಡ ಹಾಕಿದಾಗ ಗಂಡ ಹೆಂಡತಿ ಇಬ್ಬರೂ ಸ್ವಲ್ಪ ಪಿನ್ನು ಅಂತ ತಿಳಿದಿದ್ರೂ ಉತ್ತರಿಸದೆ ವಿಧಿ ಇಲ್ಲ.

"ಹ್ಞೂ ಕಣೆ ಕಾತ್ಯಾ, ಅವರು ಬರೋದು ಎರಡು ಮೂರು ವಾರ ಆಗಬಹುದು. ಅವರಿಲ್ಲದ ಅಡುಗೆ" ಅಂತ ನಗ್ತಾ ಅಂದ್ರೆ, "ಯಾಕ್ ಆಂಟಿ ನಾವಿಲ್ವ, ನಾಲ್ಕು ಜನಕ್ಕೆ ಪಾಂಗಿತವಾಗಿ ಅಡುಗೆ ಮಾಡ್ತೀನಿ, ನೀವೊಬ್ಬರು ನಮಗೆ ಜಾಸ್ತಿನಾ, ಸಂಕೋಚ ಬೇಡ ಊಟದ ಟೈಂಗೆ ಹೇಳಿ ಕಳುಹಿಸ್ತೀನಿ, ಖಂಡಿತ ಬನ್ನಿ" ಅಂದಾಗ, "ಅಯ್ಯೋ ದೇವ್ರೇ ಊಟದ ಜೊತೆ ಇಡೀ ಕಾಲೋನಿ ಸುದ್ಧಿ ವರದಿ ಕೇಳಬೇಕಾಗೋದನ್ನ ನೆನೆಸ್ಕೊಂಡು, ತಕ್ಷಣ ಆಹ್ವಾನಕ್ಕೆ ಫುಲ್ ಸ್ಟಾಪ್ ಹಾಕುತ್ತ, "ಅಯ್ಯೋ! ಇಲ್ಲ ಕಣೆ, ನಂದು ಪಥ್ಯದ ಊಟ. ಸಮಯಗಳು ಸರಿ ಬರಲ್ಲ, ನಾ ಏನೋ ಮಾಡ್ಕೊಂಡು ಮ್ಯಾನೇಜ್ ಮಾಡ್ತೀನಿ ಬಿಡು, ಬೇಸರ ಆದ್ರೆ ಖಂಡಿತ ಬರ್ತೀನಿ" ಅಂತ ನುಣುಚ್ಕೊತಿದ್ದೆ.

ಮಾರನೆಯ ದಿನ ನನ್ನ ಅಡುಗೆ, ಊಟದ ವಿಚಾರದಲ್ಲಿ ರೂಢಿಸಿಕೊಂಡ ಶಿಸ್ತು, ಚಪಾತಿ ಪಲ್ಯ ಮಾಡಿ ಹಿಂದಿನ ದಿನದ ತೊವ್ವೆನ ಸಾರಾಗಿ ರೂಪಾಂತರಿಸಿ, ಇಷ್ಟವಾದ ಪುಸ್ತಕ ಹಿಡಿದು ಓದುತ್ತ ತಿನ್ನಲು ಕುಳಿತಾಗ, 'ಟ್ರಿಂ' ಅಂತ ಬೆಲ್. ಯಾರಪ್ಪ ಅನ್ನಕಂಟಕರು ಅಂತ ಬಾಗಿಲು ತೆರೆದರೆ ಕಾತ್ಯಾಯಿನಿ ಗಂಡನ ಜೊತೆ ಪ್ರತ್ಯಕ್ಷ. "ಓ! ಊಟ ಮಾಡ್ತಿದ್ದೀರ, ಕಂಪೆನಿ ಕೊಡ್ತೀವಿ ಬಿಡಿ ಆಂಟಿ" ಅನ್ನುತ್ತಾ, ಊಟದ ತಟ್ಟೆ ಕಡೆ ಕಣ್ಣು ಹಾಯಿಸಿ, "ಬಾಳೆಕಾಯಿ ಪಲ್ಯ, ಚಪಾತಿ ಸಾರು ಅನ್ನ. ಪರವಾಗಿಲ್ಲ ಆಂಟಿ ಒಬ್ಬರೇ ಆದ್ರೂ ಪಾಂಗಿತವಾಗಿ ಮಾಡ್ಕೋತೀರ." ಅಂದಾಗ ಕೆಟ್ಟ ಸಿಟ್ಟು ಬರಲ್ವೆ? "ನಿಮ್ಮ ಅಂಕಲ್ ತಿಂಗಳಾನುಗಟ್ಲೆ ಟೂರ್ ಹೋದ್ರೆ ಉಪವಾಸ ಮಾಡೋಕ್ಕೆ ಆಗುತ್ತಾ ಅಥವಾ ಹಾಳುಮೂಳು ತಿನ್ನಕ್ಕಾಗುತ್ತ ಕಾತ್ಯಾ" ಅಂದಾಗ "ನಿಮ್ಮ ಶಿಸ್ತು ಮೆಚ್ಚಬೇಕಾದ್ದೆ ಆಂಟಿ". ಇದು ವ್ಯಂಗ್ಯನೋ, ಹೋಗಳಿಕೆನೋ ಹೊಳೀಲಿಲ್ಲ, ಹಸಿವಂತೂ ದೂರಾಗಿತ್ತು.

ಈ ಅವರಿಲ್ಲದ ಅಡುಗೆ ಸೊಗಡು ಅಮ್ಮ, ಅಜ್ಜಿ ಜೊತೆ ಕಳೆದ ಬಾಲ್ಯದ ದಿನಗಳನ್ನು ಹಲವಾರು ಬಾರಿ ನೆನಪಿಸುತ್ತೆ. ಅಪ್ಪ ವೃತ್ತಿಯಲ್ಲಿ ಪಶುವೈದ್ಯರು. ಪ್ರತಿ ವರುಷ ಏಳೆಂಟು ದಿನ ಹಳ್ಳಿಗಳಿಗೆ ದನಗಳ ಜಾತ್ರೇಲಿ ಚುಚ್ಚುಮದ್ದು ಹಾಕಲು ಉಸ್ತುವಾರಿಗೆ ಹೋದಾಗ ಅಮ್ಮ ಅವರಿಗೆ ಸೇರದ ನಮಗಿಷ್ಟವಾದ ತಿನಿಸು ಹಾಲಬಾಯಿ, ಕೋವಾ ಸಿಹಿ ಮಾಡಿದಾಗ ಈ ಪದ ಬಳಸುತ್ತಿದ್ದುದು ನೆನಪಾಯ್ತು. ಅಜ್ಜಿ ಸಹ "ನಿಮ್ಮಪ್ಪ ಊರಲ್ಲಿ ಇಲ್ಲ. ಬನ್ರೋ, ಇವತ್ತು ಬಿಸಿ ಮುದ್ದೆ ಅನ್ನ ಮಾಡಿ ತುಪ್ಪದ ಜೊತೆ ಮೆಂತೆ ಹಿಟ್ಟಿನ ಪಿಡಚೆ ಅನ್ನ ಕೈ ತುತ್ತು ಹಾಕ್ತೀನಿ" ಅಂದ್ರೆ ಸಂಭ್ರಮಾನೋ ಸಂಭ್ರಮ! ಅಪ್ಪನಿಗೆ ಮುದ್ದೆ ಅನ್ನ ಸೇರ್ತಾ ಇರಲಿಲ್ಲ , ನೀರು ಹೆಚ್ಚಾಗಿ ಅನ್ನ ಸ್ವಲ್ಪ ಮುದ್ದೆ ಆದ್ರೂ ಅಮ್ಮನಿಗೆ ಅಂದು ಸಹಸ್ರನಾಮ. ಮುದ್ದೆ ಅನ್ನದ

ಜೊತೆ ತುಪ್ಪ. ಮೆಂತೆ ಹಿಟ್ಟು ಅಥವಾ ಸಾರಿನ ಚರಟ ಅಜ್ಜಿ ಕಲಸಿ ಕೈ ತುತ್ತು ಹಾಕುತ್ತಿದ್ದರೆ ಸ್ವರ್ಗ ನಮಗೆ. ಇಂದು ಸಹ ಆ ಕೈ ಘಮಲು ಮರೆತಿಲ್ಲ

ಈ ಅವರಿಲ್ಲದ ಅಡುಗೆಯ ಸಂಭ್ರಮದ ಇನ್ನೊಂದು ಸಿಹಿ ನೆನಪು ನಮ್ಮನೆ ಕೆಲಸದವಳು ಮಲ್ಲಿಯ ಮಾತು. ನಿವೃತ್ತಿಯ ನಂತರವೂ ಸದಾ ವೃತ್ತಿಯಲ್ಲಿ ತೊಡಗಿರುವ ಪತಿರಾಯರು ಕಲ್ಲು, ನೀರು ಪರೀಕ್ಷೆ ಅಂತ ಒಂದೆರಡು ದಿನ ಟೂರ್ ಹೊರಟಾಗ, ಮಲ್ಲಿಯ ವರಸೆ "ಅಮ್ಮ, ಹೆಂಗೂ ಸಾರ್ ಇಲ್ಲ ಎರಡು ದಿನ, ತಿಂಡಿಗೆ ಅವಲಕ್ಕಿ ಮಾಡ್ಬಿಡಿ. ಸಾರ್ ಇದ್ದಾಗ ಮಾಡಿದ್ರೆ ತಿಂಡಿ ಸ್ಟ್ರೈಕ್ ಮಾಡ್ತಾರೆ. ನಾವಿಬ್ರೇ ಈಗ, ಚೆನ್ನಾಗಿ ಈರುಳ್ಳಿ, ಟೊಮಾಟೋ, ಕಾಯಿತುರಿ ಹಾಕಿ ಮಾಡ್ತೀರಾ, ನೀವ್ ಮಾಡೋದನ್ನ ತಿನ್ಬೇಕು ಅನಿಸುತ್ತೆ", ಮಲ್ಲಿ ಡಿಮಾಂಡು. ಅಂತೂ ದಿನಚರಿಯಲ್ಲಿ ಸ್ವಲ್ಪ ಬದಲಾವಣೆ ತಂದು, ಹಳತಲ್ಲಿ ಹೊಸತನ ಕಾಣುವುದೂ ಈ "ಅವರಿಲ್ಲದ ಅಡುಗೆ "ಯ ಉದ್ದೇಶ.

ಪತಿರಾಯರು ಮನೇಲಿ ಇದ್ದಾಗಲೂ ಒಮ್ಮೊಮ್ಮೆ ನಮ್ಮ ಬಡಾವಣೆಯಲ್ಲಿ ಹೆಂಗಳೆಯರು ಸೇರಿ ಪಾಟ್ಲಕ್ ಅಂತ ಒಬ್ಬೊಬ್ಬರು ಒಂದೊಂದು ತಿಂಡಿ ಮಾಡಿಕೊಂಡು ಪಾರ್ಟಿ ಮಾಡಿದರೆ, ಆ ದಿನ ಎಲ್ಲ ಗಂಡಸರಿಗೂ ಸ್ವಾತಂತ್ರ. ಸಂಜೆ ನೆಮ್ಮದಿಯಾಗಿ ಕಾಲ ಕಳೆಯೋ ಅವಕಾಶ. ಬರೀ ಹೆಂಗಳೆಯರೇ ಕೂಡಿ ಟೂರ್ ಹೊರಡೋದು, ಪತಿರಾಯರು ಊರಲಿಲ್ಲದಾಗ ಎಲ್ಲ ಸೇರಿ ಅಡಿಗೆ ಊಟದ ಜೊತೆ ವಿಚಾರವಿನಿಮಯ, ಹಾಡು, ಚರ್ಚಾಕೂಟಗಳನ್ನು ಏರ್ಪಡಿಸುವುದು. ಎಷ್ಟು ಮೋಜು!

ಈ ರೀತಿಯ ಚಟುವಟಿಕೆಗಳು ಸಂಬಂಧಗಳಿಗೆ ಚೇತೋಹಾರಿ. "Distance makes heart grow fonder" ಈ ನಾಣ್ನುಡಿ ಸ್ವಲ್ಪ ದಿನ ದೂರಾಗಿ ಮತ್ತೆ ಸೇರುವ ಸಂಬಂಧಗಳ ಬೆಸುಗೆಗೆ ಈ ಬದಲಾವಣೆ ಬಾಂಧವ್ಯ ಹೆಚ್ಚಿಸುವುದಂತೂ ನಿಜ, ಏನಂತೀರಿ?

ಹಾಸ್ಯ ಲೇಖನ

ಕರೋನ ಹೇರ್ ಸ್ಟೈಲ್

– ಗೋಪಿನಾಥ್

ಈಗ್ಗೆ ಎರಡು ತಿಂಗಳ ಕೆಳಗೆ ನಾನು ಬೆಳಿಗ್ಗೆ ಏಳು ಗಂಟೆಗೆ ವಾಕಿಂಗ್ ಹೊರಟಿದ್ದೆ. ಪಾರ್ಕ್ ಸಮೀಪಿಸುವುದರಲಿದ್ದೆ. ರಸ್ತೆಯ ತಿರುವಿನ ಹತ್ತಿರ ಒಬ್ಬರು ನಿಂತುಕೊಂಡು ಕೈಕಾಲು ಆಡಿಸುತ್ತಾ exercise ಮಾಡುತ್ತಿದ್ದರು. ಇದೇನಿದು. ಈತ ತಿರುವಿನಲ್ಲಿ ನಿಂತುಕೊಂಡು exercise ಮಾಡುತ್ತಿರುವನಲ್ಲ!

ಈ ವಾಹನ ಸವಾರರಿಗೆ ತಿರುವು ಕಂಡರೆ ಬಲು ಮೋಜು. ಎರಡು ಚಕ್ರದ ಗಾಡಿಯನ್ನು ಸ್ಪೀಡಾಗಿ ಓಡಿಸಿಕೊಂಡು ಬಂದು ಗಾಡಿಯನ್ನು ಮಲಗಿಸಿ ಮೇಲೆತ್ತುತ್ತಾರೆ. ರೋಮಾಂಚನ ಅವರಿಗೆ. ಹಾಗೆ ಮಾಡುವಾಗ ಗಾಡಿಗೆ ಯಾರಾದರೂ ಅಡ್ಡ ಸಿಕ್ಕರೆ ಅವರ ಕಥೆ ಮುಗಿದ ಹಾಗೆ.

ಆತನ ಬಗ್ಗೆ ಅಯ್ಯೋ ಎನಿಸಿ. 'ಸ್ವಾಮಿ ಹಿಂದೆ ನಿಂತುಕೊಳ್ಳಿ. ನೀವು ನಿಂತಿರುವುದು ತಿರುವಿನಲ್ಲಿ. ಯಾರಾದರೂ ಗುದ್ದಿದರೆ ಹರೋ ಹರ" ಅಂದೆ. 'ತುಂಬಾ ಥ್ಯಾಂಕ್ಸ್' ಎಂದ ಅವರು ಕೈ ಕಾಲು ಆಡಿಸುವುದನ್ನು ಅಷ್ಟಕ್ಕೇ ನಿಲ್ಲಿಸಿ ನನ್ನ ಜೊಅತೆಗೆ ಹೆಜ್ಜೆ ಹಾಕತೊಡಗಿದರು. ನಾನು ಮುಂದೆ ಅವರು ಹಿಂದೆ.

'ನೀವು ಹೊಂದಿರುವ ಹೇರ್ ಸ್ಟೈಲ್ ತುಂಬಾ ಚೆನ್ನಾಗಿದೆ. ಅದಕ್ಕೆ ಏನು ಹೆಸರು?' ಕೇಳಿದರು. ನಾನು ಒಳಗೊಳಗೆ ನಕ್ಕೆ. ಯಾವುದು ಈ ಬಕ್ರ ಎಂದುಕೊಂಡೆ. ನನ್ನ ತಲೆಯ ಹಿಂದುಗಡೆ ಅಂಕೆಗೆ ಸಿಗದಷ್ಟು ಕೂದಲು ಬೆಳದಿತ್ತು, ದೋನಿಯ ಕೇಶಾಲಂಕಾರದ ಹಾಗೆ, ಅವನ ಹೇರ್ ಸ್ಟೈಲ್ ಹೋಲುವ ಹಾಗೆ ಹಿಂದೆ ಹರಡಿತ್ತು. ಸುಮಾರು ಒಂದು ಅಡಿಯಷ್ಟು ಬೆಳೆದು ಬಾಬ್ ಕಟ್ ಎನ್ನುವಂತಿತ್ತು. ದೋನಿಯ ಹೇರ್ ಸ್ಟೈಲ್ ಕತ್ತರಿಯಾಡಿಸಿ ಚಂದ ಕಾಣುವ ಹಾಗಿತ್ತು. ದೋನಿಗೆ ಪಾಕಿಸ್ತಾನದ ಆಗಿನ ಪ್ರೆಸಿಡೆಂಟ್ ಮುಷೇರಫ್ ಒಮ್ಮೆ ಮೆಚ್ಚಿಕೊಂಡು ಹೊಗಳಿದ್ದು ಜ್ಞಾಪಕ ಬಂದು, ಈ ಬಕ್ರ ನನ್ನೂ ಹಾಗೇ ಕಂಡಿರಬೇಕು ಎನಿಸದಿರಲಿಲ್ಲ.

'ಸರ್, ಏನಂದಿರಿ?'

'ನಿಮ್ಮ ಹೇರ್ ಸ್ಟೈಲ್ ತುಂಬಾ ಚೆನ್ನಾಗಿದೆ. ಈ ಸ್ಟೈಲಿಗೆ ಏನು ಹೆಸರು?'

'ಸರ್, ನಿಮ್ಮ ವಯಸ್ಸೆಷ್ಟು?

'ನಿಮ್ಮ ಪ್ರಶ್ನೆಗೂ, ನನ್ನ ವಯಸ್ಸಿಗೂ ಏನ್ರಿ ಸಂಬಂಧ?'

'ನಾನು ಹೇರ್ ಸ್ಟೈಲ್ ದೋನಿ ನೋಡಿ ಅದೇ ತರಹ ಮಾಡಿಸಿಕೊಂಡಿರುವುದು. ಇದಕ್ಕೆ ದೋನಿ ಹೇರ್ ಸ್ಟೈಲ್ ಎಂದು ಹೆಸರು'.

'ಹೌದಾ, ಬಹಳ ಚೆನ್ನಾಗಿದೆ ಯಾವ ಸಲೂನ್ ನಲ್ಲಿ ಮಾಡಿಸಿಕೊಂಡರಿ?'

'ಏಕೆ ನಿಮಗೂ ಈ ಹೇರ್ ಸ್ಟೈಲ್ ಇಷ್ಟವಾಗಿರಬೇಕಲ್ಲ?'

'ಹೌದು ಒಮ್ಮೆ ಪ್ರಯತ್ನಿಸಬೇಕೆನಿಸಿದೆ'.

'ಸರ್, ಆಗಲೇ ನಿಮ್ಮ ವಯಸ್ಸೆಷ್ಟೆಂದು ಕೇಳಿದೆ ನೀವು ರೇಗಿಕೊಂಡಿರಿ'.

'ಈಗಲೂ ಅದನ್ನೇ ಕೇಳುತ್ತೇನೆ, ಏನು ಸಂಬಂಧ'.

'ಸರ್ ಈಗಲಾದರೂ ನಿಮ್ಮ ವಯಸ್ಸು ತಿಳಿಸಿ. ನೀರು ಗೊಬ್ಬರ ಹಾಕಿ ಪೋಷಿಸಿದರೂ ನಿಮಗಿನ್ನು ತಲೆ ಕೂದಲು ಬೆಳೆಯುವುದು ಕಷ್ಟ. ಕುತೂಹಲಕ್ಕೆ ಕೇಳುತ್ತೇನೆ, ವಯಸ್ಸು ಐವತ್ತು ಮೀರಿರಬಹುದಲ್ಲ?'

'ಅಲ್ಲ ವಯಸ್ಸು ಆ ಅರವತ್ತು... ಮೇಲಾಗಿದೆ'.

'ಹಾಗೆಂದರೇನು ಅರವತ್ತಕ್ಕೆ ಜ್ವರ ಬಂದಿತ್ತೇ?'

'ಇಲ್ಲ ಅರವತ್ತಕ್ಕಿಂತ ಜಾಸ್ತಿ ಎಂದರ್ಥ'.

'ಹಾಗೆ ಹೇಳಿ ಮತ್ತೆ. ನಾನು ಅರವತ್ತು ವಯಸ್ಸಿಗೆ ಜ್ವರ ಬಂದು ಈಗ ಮೇಲಾಗಿದ್ದೀರಿ ಎಂದು ಭಾವಿಸಿದೆ!'

'ತುಂಬಾ ತಮಾಷೆಯಪ್ಪ ನೀವು. ನನ್ನ ಹೇಗೆ ಬಾಲ್ಡಿ ಎಂದು ಅಣಕ ಮಾಡಿದಿರಲ್ಲ!'

'ಮತ್ತೇನ್ ಸರ್, ಕಾಲುದಾರಿಯಲ್ಲಿ ಹುಲ್ಲು ಬೆಳೆಯುತ್ತಾ? ಅದಕ್ಕೆ ಹಾಗಂದೆ. ಅದು ಸರಿ, ನೀವು ಸಲೂನ್ ವಿಳಾಸ ಕೇಳಿದರಲ್ಲ. ನಾನು ನಿಮಗೆ ಆಗಲೇ ಹೇಳಿದ್ದು ಸುಳ್ಳು. ಇದು ದೋನಿ ಹೇರ್ ಸ್ಟೈಲ್ ಅಂತ, ಅದೆಲ್ಲ ಸುಳ್ಳು. ನಿಜವಾಗಿ ಇದರ ಹೆಸರು ಕರೋನ ಹೇರ್ ಸ್ಟೈಲ್ ಅಂತ.

'ಏನಪ್ಪ, ಈಗ ಬೇರೇನೇ ಹೇಳುತ್ತಿದ್ದೀರಿ'.

'ನೋಡಿ, ಕಳೆದ ಒಂದೂವರೆ ವರ್ಷದಿಂದ ಕರೋನ ಹಾವಳಿ. ಮನೆಯಿಂದ ಹೆಜ್ಜೆ ಇಟ್ಟಿಲ್ಲ. ಹೆದರಿಕೆ. ಹೇರ್ ಕಟ್ಟಿಂಗಿಗೆ ಹೋಗಲು ಯಾರಿಗೆ ಧೈರ್ಯ ಇರುತ್ತೆ? ಯಾರು ತಾನೇ ಸಲೂನಿಗೆ ಹೋಗುತ್ತಾರೆ? ಹಾಗೆ ಹೋದ ಕೆಲವು ಜನಕ್ಕೆ

ಕರೋನ ತಗುಲಿದ್ದು ಸುಳ್ಳಲ್ಲ. ಹಾಗಾಗಿ ನನ್ನ ತಲೆ ಸಲೂನ್ ಕಂಡಿಲ್ಲ. ತಲೆ ಕೂದಲು ಮುಂದುಗಡೆ, ಅಕ್ಕಪಕ್ಕ, ಕಿವಿ ಹಿಂದಿನ ಕೂದಲಿಗೆ ನಾನೇ ಕತ್ತರಿಯಾಡಿಸಿಕೊಳ್ಳುತ್ತಿದ್ದೆ. ತಲೆ ಹಿಂದಗಡೆ ಕೂದಲು ಸೊಂಪಾಗಿ ಬೆಳದಿದೆ. ಇದು ನಿಜವಾದ ವಿಷಯ. ನಿಮ್ಮ ಹಾಗೆ ಕೆಲವರು 'ನೋಡು ಮುದುಕನ್ನ ಈ ವಯಸ್ಸಿನಲ್ಲಿ ದೋನಿ ಹೇರ್ ಸ್ಟೈಲ್' ಎಂದು ಹೇಳಿರುವುದು ನಾನೇ ಕೇಳಿಸಿಕೊಂಡಿದ್ದೇನೆ'.

'ತುಂಬ ಸ್ವಾರಸ್ಯ ನೀವು. ಅಂದ ಹಾಗೆ ನಿಮ್ಮ ವಯಸ್ಸು?'

'ಯೋಚಿಸ ಬೇಡಿ ಬಾಲ್ಡ್ ಆಗಲು ಬಹಳ ವರ್ಷಗಳು ಬೇಕು' ಎಂದೆ.

ತಲೆ ಕೆರತ, ಬಾಚಿಕೊಳ್ಳಲು ಹೋದರೆ ಸಿಕ್ಕು, ತಲೆಗೆ ನೀರು ಹಾಕಿಕೊಂಡರೆ ಕೂದಲು ಒಣಗಕ್ಕೆ ಎರಡು ಗಂಟೆ. ಸಾಕಾಗಿ ಹೋಗಿ ಕೊನೆಗೆ ಕರೋನಕ್ಕೆ ಇನ್ನೆಷ್ಟು ದಿನ ಭಯಬೀಳುವುದೆಂದು ಹತ್ತಿರವಿದ್ದ ಪರಿಚಯದ ಸಲೂನಿಗೆ ಹೋದೆ.

'ಬನ್ನಿ ಸರ್. ಇದೀರಾ' ಅಂದ.

'ಏನಯ್ಯ ನಿನ್ನ ಪ್ರಶ್ನೆ..?' ಗಾಬರಿಗೊಂಡೆ...ಕರೋನದಲ್ಲಿ ನಾನೇದಾರೂ.... ಅಂತ...

'ಮತ್ತೇನ್ ಸರ್, ವರ್ಷವಾದರೂ ನಿಮ್ಮ ಮುಖ ದರ್ಶನವಿಲ್ಲ. ಅಲ್ಲ ತಲೆ ದರ್ಶನ ಈ ಸಲೂನಿಗಾಗಿಲ್ಲ'.

'ಹೋಗಲಿ ಈಗ ಬಂದಿರುವೆನಲ್ಲ, ಕಟ್ಟಿಂಗ್ ಮಾಡು' ಅಂದೆ.

ಕಟ್ಟಿಂಗ್ ಆದ ಮೇಲೆ 'ಎಷ್ಟಪ್ಪಾ' ಅಂತ ಕೇಳಿದೆ.

ಸಾವಿರ ಕೊಡೀಂದ.

'ಏನಯ್ಯ, ಹೃದಯ ನಿಂತು ಹೋಗುತ್ತೆ' ಅಂತ ಹೇಳಿದೆ.

'ವರ್ಷದಿಂದ ಮನೆಲೇ ಇದ್ದು ನೀವು ದುಡ್ಡು ಉಳಿಸಿದೆ ಅಂದುಕೊಂಡಿರಬಹುದು. ಆದರೆ ನೀವು ದುಡ್ಡು ಕೊಡದಿದ್ದರೆ ಅಂಗಡಿ ಬಾಡಿಗೆ ಬಿಡ್ತಾರ ? ಅದೆಲ್ಲ ನಿಮ್ಮದೇ ಬಾಬತ್ತು' ಎಂದು ಗಂಡಾ ಗುಂಡಿ ಮಾಡಿ ಐನೂರು ವಸೂಲಿ ಮಾಡಿದ !.

ಆಸೆ ಬೇಕು

– ಪಾರ್ವತಿ ವಿ. ಹೆಗಡೆ

ಆಸೆ ಬೇಕು, ಸವಿಯ ಆಸೆ ಬೇಕು।
ಆಸೆ ಯತ್ನದ ತಾಯಿ, ಆಸೆಪಡಲೇಬೇಕು ॥

ಕಂದನಿಗೆ ಅಕ್ಕರೆಯ ಬಿಸಿಯಪ್ಪುಗೆಯ ಆಸೆ ।
ತಂದೆ ತಾಯಿಗೆ ಮಗುವಿನೇಳಿಗೆಯ ಆಸೆ ।
ಕಂಜಳಿಗೆ ಬೆಂಗದಿರ ಸಂಗದಾ ಆಸೆ ।
ತಿಂಗಳಿಗೆ ನೈದಿಲೆಯ ಮುದಗೊಳಿಸುವಾಸೆ ॥

ಹಸಿದವಗೆ ಹೊಟ್ಟೆತುಂಬಿಸಿಕೊಳುವ ಮಹದಾಸೆ ।
ರಸಿಕನಿಗೆ ರಸಕವಳ ಸವಿಯುವಾ ಆಸೆ ।
ರಸಕವಿಗೆ ನವರಸವ ಉಣಬಡಿಸುವಾ ಆಸೆ ।
ಹಸನಾದ ಮೊಗವಹುದು ಸಕಲರಾ ಆಸೆ ॥

ಭಕುತನಿಗೆ ಭಗವಂತನಾರಾಧನೆಯ ಆಸೆ ।
ಭಕುತಿಯಿಂದಲಿ ಬೇಡಿಕೊಳುವ ಆಸೆ ।
ಮುಕುತಿಮಾರ್ಗದ ದಾರಿ ಕಾಣುವಾ ಆಸೆ ।
ರಕುತನಾಗದೇ ಬಾಳಿ ಬದುಕುವಾ ಆಸೆ ॥

ಬುದ್ಧನಿಗು ಜಿನನಿಗು, ಶಾಂತಿಯಾ ಆಸೆ ।
ಯತಿಗಳಿಗು ಮುನಿಗಳಿಗು ವೈರಾಗ್ಯದಾಸೆ ।
ಷಡುವೈರಿಗಳ ಗೆಲಲು ಕಠಿಣ ತಪದಾಸೆ ।
ಮುರವೈರಿಗೂ ಮೂರು ಜಗವ ಕಾಪಿಡುವಾಸೆ ॥

ಪರಸತಿಯ ಪರಧನವ ಲಪಟಾಯಿಸುವ ಆಸೆ ।
ಪರಿಜನರ ನೋಯಿಸುವ ವಿಕೃತದಾ ಆಸೆ ।
ಸರಸತಿಯ ಸೇವಿಸದೆ ಸಿರಿಯ ಪಡೆಯುವ ಆಸೆ ।
ಹರಸಾಹಸದ ಅನಾಚಾರಾ ದುರಾಸೆ ॥

ಆಸೆಗೂ ಸಾವಿಲ್ಲ ಅದು ಸಕಲರಾ ಆಸೆ ।
ಕಾಸಿನೆತ್ತರಕೇರುವತಿಯಾಸೆಯು ।
ಸಾಸಿವೆಯ ತೆರನಿದ್ದು ನಾಶಪಡಿಸುವ ಆಸೆ ।
ದಾಸನಾಗದೆ ತೂರಿಬಿಡುವುದಾ ಆಸೆ ॥

ಆಸೆ ಬಿಟ್ಟವರಿಲ್ಲ ಎಂದೆಂದಿಗೂ ದಿಟವು ।
ಆಸೆಯಿಂದಲೆ ಜಗದ ಅಳಿವು ಉಳಿವು ।
ಆಸೆಯೇ ಜನಮನದ ಏಳಿಗೆಗೆ ಕಾರಣವು ।
ಆಸೆಯನು ತೀರಿಸಲು ಬೇಕಾಗುವುದು ಅರಿವು ॥

ಆಸೆಬೇಕು, ಸವಿಯ ಆಸೆ ಬೇಕು।
ಆಸೆ ಯತ್ನದ ತಾಯಿ, ಆಸೆಪಡಲೇಬೇಕು॥

ಹೆಸರಿಗಷ್ಟೇ

- ನಾಗರತ್ನ ಎಂ.ಜಿ.

ಹೆಸರಿಗಷ್ಟೇ
ಕನ್ನಡಿಗರ ನಾಡು ಬೆಂಗಳೂರು
ಇಲ್ಲಿ ಅವರೇ ಅಪರಿಚಿತರು
ಉತ್ತರ ಪೂರ್ವ ಪಶ್ಚಿಮದವರದೇ
ಕಾರುಬಾರು
ಮಿಕ್ಕ ದಕ್ಷಿಣದವರು
ಕಂಡರು ಮೂಲೆ ಮೂಲೆಯಲ್ಲೂ

ಬಾಡಿಗೆ ಮನೆಯಲ್ಲಿ ಕಂಡಲ್ಲೆಲ್ಲಾ
ಕನ್ನಡಿಗರು
ಕಂಡ ಕಂಡ ಅಪಾರ್ಟ್ಮೆಂಟಿನಲ್ಲಿ
ಸ್ವಂತ ಫ್ಲ್ಯಾಟ್ ಕೊಂಡರು ಎಲ್ಲ
ವಲಸಿಗರು

ಆಟವಾಡುವ ಮಕ್ಕಳ
ಬಾಯಲ್ಲಿ ಕೇಳುವುದು
ಹಿಂದಿ ಇಂಗ್ಲೀಷ್
ಕನ್ನಡ ಬಾರದೇ ಎಂದರೆ
ಕೇಳುವರು ವಾಟ್ ಈಸ್ ದಟ್

ಹದಿನೈದಿಪ್ಪತ್ತು ಸಾವಿರದ
ಸರ್ಕಾರಿ ಸಂಬಳದವರು
ಕನ್ನಡಿಗರು
ಲಕ್ಷ ಲಕ್ಷ ಎಣಿಸುವ ಟೆಕ್ಕಿಗಳು
ನಾರ್ತಿಗಳು

ಕನ್ನಡ ಎಂದರೆ ಎನ್ನಡ
ಎನ್ನುವ ತಮಿಳಿಗರು
ಕನ್ನಡ್ ಗೊತ್ತಿಲ್ಲ
ಎನ್ನುವ ರಾಜ್ ಭಾಷೀಯರು
ಎಲ್ಲ ಭಾಷೆ ಕಲಿತು

ಕನ್ನಡ ಮರೆಯುವ
ಕನ್ನಡಿಗರು
ಬೆಂಗಳೂರು ನಮ್ಮದೇ ಎನ್ನುವ
ಅನ್ಯ ಭಾಷೀಯರು

ಎಪ್ಪತ್ತರ ದಶಕದ ಬೆಂಗಳೂರು
ನೆನೆ ನೆನೆದು ಸುಡುತ್ತಿದೆ
ಹಿರಿಯ ಕನ್ನಡಿಗರ ಕರುಳು
ವಾಯು ಮಾಲಿನ್ಯ ಶಬ್ಧ ಮಾಲಿನ್ಯದೊಂದಿಗೆ
ಮುಚ್ಚಿ ಹೋಗುತ್ತಿರುವ
ಉದ್ಯಾನ ನಗರಿಗರು

ಎಲ್ಲ ನಮ್ಮದೇ ಎಲ್ಲೆಲ್ಲೂ ನಾವೇ
ಎಂದು ಮೆರೆದಾಡುತ್ತಿರುವ
ಎಪ್ಪತ್ತು ಪ್ರತಿಶತರು
ನೂರಕ್ಕೆ ಮೂವತ್ತಾಗಿ
ಅಸಹಾಯಕರಾದ ಕನ್ನಡಿಗರು

ಆದರೂ ವ್ಯಾಮೋಹ ಬಿಡದು
ಇದು ನಮ್ಮ ಬೆಂಗಳೂರು
ಉಳಿದಿರಲಿ ಕನ್ನಡಿಗರ
ಪಾಲಿಗೆ ಇಷ್ಟಾದರೂ

*****

ಕನ್ನಡ ಕಥಾಲೋಕ–೯

ಪಂಚತಂತ್ರ ಕಥೆಗಳು

– ವಿಠಲ್ ಇಜೇರಿ

ಈ ಸರಣಿಯಲ್ಲಿ ವಡ್ಡರಾಧನೆ ಕಥೆಗಳು, ಕಥಾ ಸರಿತ್ಸಾಗರ ಮತ್ತು ಜಾತಕ ಕಥೆಗಳ ಬಗ್ಗೆ ಈ ಮುಂಚಿನ ದಾಸೋಹಗಳಲ್ಲಿ ಪ್ರಸ್ತುತಪಡಿಸಿದ್ದೇನೆ. ಈಗ ಇನ್ನೊಂದು ಮಹತ್ ಕಥಾ ಸರಣಿ.

ಪಂಚತಂತ್ರ ಕಥೆಗಳ ಬಗ್ಗೆ ವಿವರಗಳು.

ಪಂಚತಂತ್ರ ಕಥೆಗಳು ಪ್ರಾಣಿಗಳ ಕಥೆಗಳ ಮೇಲೆ ಆಧಾರಿತ ಕಥಾ ಸಂಗ್ರಹವಾಗಿದೆ. ಇದು ಕ್ರಿಸ್ತಪೂರ್ವ 3ನೇ ಶತಮಾನದಲ್ಲಿ ರಚಿಸಲ್ಪಟ್ಟಿದೆ. ಇದನ್ನು ಸಂಸ್ಕೃತ ಭಾಷೆಯಲ್ಲಿ ವಿಷ್ಣುಶರ್ಮ ಅವರು ರಚಿಸಿದ್ದಾರೆ. ಅದಲ್ಲದೆ ತುಂಬಾ ಹಳೆಯ ದಿನಗಳಿಂದ ಪ್ರಾಣಿಗಳ ಸಣ್ಣ ನೀತಿ ಕಥೆಗಳನ್ನು ಒಳಗೊಂಡಿರುವ ಪುರಾತನ ಮೌಖಿಕ ಪರಂಪರೆಗಳ ಮೇಲೆ ಇದು ಆಧರಿಸಲ್ಪಟ್ಟಿದೆ. ಇದು ಭಾರತದ ಹೆಚ್ಚು ಭಾಷೆಗಳಿಗೆ ಭಾಷಾಂತರಿತ ಸಾಹಿತ್ಯಕ ಕೃತಿಯಾಗಿದೆ. ಈ ಕತೆಗಳು ವಿಶ್ವದಲ್ಲೇ ಅತ್ಯಂತ ಹೆಚ್ಚು ವಿಶಾಲವಾಗಿ ತಿಳಿದಿರುವ ಕಥೆಯ ಸಂಗ್ರಹಗಳಲ್ಲೊಂದು.

ಪಂಚತಂತ್ರವು ಬಣ್ಣಬಣ್ಣದ ಸಣ್ಣ ನೀತಿ ಕತೆಗಳನ್ನು, ಒಂದು ಕಡೆ ಅನ್ಯೋನ್ಯವಾಗಿ ಹೆಣೆಯಲ್ಪಟ್ಟ ಸರಣಿಯಾಗಿದೆ. ಅನೇಕ ಕತೆಗಳು ಪ್ರಾಣಿಗಳು ಪ್ರದರ್ಶಿಸುವ ಜಾಣತನದ, ನ್ಯಾಯದ, ನೈತಿಕ ರೀತಿನೀತಿಗಳನ್ನು ಒಳಗೊಂಡಿವೆ. ಈ ಕತೆಗಳು ಮೂವರು ರಾಜಕುಮಾರರ ಪ್ರಯೋಜನಕ್ಕಾಗಿ ನೀತಿಯ ಕತೆಗಳನ್ನು ಹೇಳಿದಂತೆ ರಚಿಸಲಾಗಿದೆ. ರಾಜಕುಮಾರರಿಗೆ ಈ ಕತೆಗಳನ್ನು ವಿವರಿಸಿದಂತೆ, ಅದರಲ್ಲಿ ಉಪಕಥೆಗಳನ್ನು ಹೇಳಿದಂತೆ ರಚಿಸಲಾಗಿದೆ. ಇಲ್ಲಿಯ ಒಂದು ಪಾತ್ರ ಇನ್ನೊಂದು ಪಾತ್ರಕ್ಕೆ ಕತೆ ಹೇಳಿದಂತೆ ಕೂಡ ಕೆಲವು ಕಥಾ ರಚನೆ ಮಾಡಲಾಗಿದೆ. ಇಲ್ಲಿಯ ಐದು ತತ್ವಗಳು :

1. ಮಿತ್ರಬೇಧ: ಮಿತ್ರರ ಅಗಲಿಕೆ. ಮಿತ್ರರಲ್ಲಿ ಒಡಕು ಮೂಡಿಸುವ ಪ್ರಯತ್ನ ಫಲ ನೀಡದು
2. ಮಿತ್ರಲಾಭ: ಮಿತ್ರಲಾಭ ಅಥವಾ ಮಿತ್ರರನ್ನು ಸಂಪಾದಿಸುವುದು
3. ಕಾಗೆಗಳ ಗುಬ್ಬಿಗಳ ಕತೆ: ಬಳಗದ ಹಿತ ಕಾಯಲು ತ್ಯಾಗಕ್ಕೂ ಸಿದ್ಧವಾಗುವುದು.
4. ಲಬ್ಧ ಪ್ರಣಾಶನಮ್: ಲಾಭ ನಷ್ಟದ ಕತೆಗಳು
5. ಆಪರೇಕ್ಷಿತಕಾರಕಮ್: ಸರಿಯಾಗಿ ಯೋಚಿಸದದುಡುಕಿದ ಕೃತ್ಯಗಳು

1. ಮಿತ್ರಬೇಧ:

ಕಾಡಿನ ರಾಜ ಸಿಂಹ (ಪಿಂಗಳಕ) ಮತ್ತು ಒಂದು ಎತ್ತು (ಸಂಜೀವಕ) ಇವುಗಳ ಮಧ್ಯೆ ಸ್ನೇಹ ಉಂಟಾಗುತ್ತದೆ. ಸಿಂಹದೊಡನೆ ಇದ್ದ ಎರಡು ನರಿಗಳಿಗೆ (ಕರಟಕ, ದಮನಕ) ಅವರಿಬ್ಬರ ಸ್ನೇಹ ಅಸೂಯೆ ಉಂಟುಮಾಡುತ್ತದೆ. ಅವೆರಡು ನರಿಗಳಿಂದಾಗಿ ಸಿಂಹ ಮತ್ತು ಎತ್ತುಗಳ ಮಧ್ಯೆ ಸ್ನೇಹ ಮುರಿದು ಬೀಳುತ್ತದೆ.

ಈ ಮಿತ್ರಬೇಧವನ್ನೇ ವಿಷಯವಾಗಿಟ್ಟುಕೊಂಡು ಸುಮಾರು ಮೂವತ್ತು ಕಥೆಗಳಿದ್ದು, ಇವುಗಳನ್ನು ಎರಡು ನರಿಗಳು ಒಂದರ ನಂತರ ಒಂದು ಹೇಳಿದಂತೆ ರಚಿಸಲಾಗಿದೆ.

ನೀತಿ - ಯಾರೂ ಅಸೂಯೆಯಿಂದ ಸುಳ್ಳು ಹೇಳಿ ಗೆಳೆತನ ಕೆಡಿಸಬಾರದು.

2. ಮಿತ್ರ ಸಂಪ್ರಾಪ್ತಿ:

ಇದು ಮಿತ್ರರ ಸಂಪಾದನೆ ಕುರಿತ ಕಥೆಗಳನ್ನು ಹೊಂದಿದೆ. ಪಾರಿವಾಳ (ಕಪೋತ) ಮತ್ತು ಅದರ ಸಂಗಾತಿಗಳನ್ನು ಇಲಿಯು ಸಂಕಟದಿಂದ ಪಾರುಮಾಡಿ ಪರಸ್ಪರ ಮಿತ್ರರಾದ ಕತೆ. ಅದೇ ರೀತಿ ಕಾಗೆ ಮತ್ತು ಇಲಿ, ಆಮೆ ಮತ್ತು ಜಿಂಕೆ, ಹೀಗೆ ಕಥೆಗಳಿವೆ.

ನೀತಿ - ಗೆಳೆಯರು ಜೀವನದ ಅವಿಭಾಜ್ಯ ಅಂಗ. ಪರಸ್ಪರ ಸಹಕರಿಸಬೇಕು.

3. ಕಾಕೋಲುಕಿಯಂ:

ಇದೊಂದು ರೀತಿ ಪತ್ತೇದಾರಿ ಕತೆ. ಕಾಗೆಯೊಂದು ತನ್ನ ಗುಂಪಿನವರು ತನ್ನನ್ನು, ಕಾಗೆ ಸಮಾಜ ಬಹಿಷ್ಕಾರ ಹಾಕಿದ್ದಾರೆ ಎಂದು ಗೂಬೆಗಳ ಗುಂಪಿನ ಸ್ನೇಹ ಬೆಳೆಸಿ ಅವುಗಳ ಗುಹೆ ಸೇರಿ ಅಲ್ಲಿಯ ಗುಟ್ಟುಗಳನ್ನು ತಿಳಿದು ಮತ್ತೆ ತನ್ನ ಕಾಗೆ ಬಳಗಕ್ಕೆ ಬಂದು ಎಲ್ಲವೂ ಸೇರಿ, ಗೂಬೆಗಳ ಗುಹೆಗೆ ಬೆಂಕಿ ಇರಿಸಿ ಗೂಬೆಗಳ ಗುಂಪು ನಾಶ ಪಡಿಸಿದ ಕತೆ.

ನೀತಿ - ತನ್ನ ಬಳಗದ ರಕ್ಷಣೆಗಾಗಿ ತನ್ನ ಪ್ರಾಣದ ಭಯ ತೊರೆದು ಪ್ರಯತ್ನಿಸಬೇಕು.

4. ಲಬ್ಧಪ್ರಣಾಶಮ್:

ಲಾಭ ನಷ್ಟಗಳ ಲೆಕ್ಕಾಚಾರದ ಕತೆ. ಮೊಸಳೆ ಮತ್ತು ಕೋತಿ ಸ್ನೇಹಿತರಾಗಿ ಮೊಸಳೆ ಕೋತಿಯ ಹೃದಯ ಪಡೆಯಲು ಪಿತೂರಿ ಮಾಡುತ್ತದೆ. ಹುಷಾರಾದ ಕೋತಿ ಉಪಾಯದಿಂದ ಸಂಕಟದಿಂದ ಪಾರಾಗಿ ಮೊಸಳೆಯ ಸ್ನೇಹ ತ್ಯಜಿಸುತ್ತದೆ.

ನೀತಿ - ಯಾರೂ ಮಿತ್ರರನ್ನು ವಂಚಿಸಲು ಪ್ರಯತ್ನಿಸಬಾರದು ಮತ್ತು ಮಿತ್ರರೊಂದಿಗೂ ಜಾಗರೂಕತೆಯಿಂದಿರಬೇಕು

5. ಅಪರೀಕ್ಷಿತಕಾರಕಾಮ್:

ದುಡುಕಿ ಅನಾಹುತ ಎಸಗಿದ ಬ್ರಾಹ್ಮಣನ ಕತೆ. ಬ್ರಾಹ್ಮಣನೊಬ್ಬ ತನ್ನ ಸ್ನೇಹಿತ ಮುಂಗುಸಿಯ ರಕ್ಷಣೆಗೆ ತನ್ನ ಮಗುವನ್ನು ಒಪ್ಪಿಸಿ ಹೋಗಿರುತ್ತಾನೆ. ಮರಳಿ ಬಂದಾಗ ಬಾಯಿ ರಕ್ತಸಿಕ್ತವಾಗಿದ್ದ ಮುಂಗುಸಿಯನ್ನು ಕಂಡು ಅದನ್ನು ಕೊಂದು ಹಾಕುತ್ತಾನೆ. ಒಳಗೆ ಬಂದು ನೋಡಿದರೆ ಮಗು ಸುರಕ್ಷಿತವಾಗಿ ಆಡಿಕೊಂಡಿರುತ್ತದೆ, ಅಲ್ಲೊಂದು ಹಾವು ಸತ್ತು

ಬಿದ್ದಿರುತ್ತದೆ. ಮುಂಗುಸಿ ಹಾವಿನೊಡನೆ ಹೋರಾಟ ಮಾಡಿ ಅದನ್ನು ಕೊಂದಿದ್ದು, ಹಾವಿನ ರಕ್ತ ಮುಂಗಸಿಯ ಬಾಯಿಗೆ ಅಂಟಿರುತ್ತದೆ. ಬ್ರಾಹ್ಮಣ ದುಡುಕಿ ಸ್ನೇಹಿತನನ್ನು ಕೊಳ್ಳುತ್ತಾನೆ.

ನೀತಿ - ಯಾವುದೇ ತೀರ್ಮಾನ ತೆಗೆದುಕೊಳ್ಳುವ ಮುಂಚೆ ಸರಿಯಾಗಿ ಯೋಚಿಸಿ, ವಿಚಾರಿಸಿ ತೆಗೆದುಕೊಳ್ಳಬೇಕು.

ಸಂಸ್ಕೃತದ ಪಂಚತಂತ್ರ ಕತೆಗಳು ಬೈಬಲ್ ನಂತರ ಜಗತ್ತಿನ ಹೆಚ್ಚು ಭಾಷೆಗಳಿಗೆ ಅನುವಾದಿತ ಕೃತಿಯಾಗಿವೆ. ಕನ್ನಡಕ್ಕೆ ದುರ್ಗಸಿಂಹ ಎಂಬ ಪ್ರಸಿದ್ಧ ಹಳೆಗನ್ನಡದ ಕವಿ ಕರ್ಣಾಟ ಪಂಚತಂತ್ರ ಎಂಬ ಹೆಸರಿನಲ್ಲಿ ಕ್ರಿ.ಶ. 1030 ರಲ್ಲಿ ಚಂಪೂ ಕಾವ್ಯದಲ್ಲಿ ರಚಿಸಿದನು. ಇವನು ಅಂದಿನ ಚಾಲುಕ್ಯ ರಾಜ ಜಗದೇಕಮಲ್ಲನ ಬಳಿ ದಂಡನಾಯಕನಾಗಿದ್ದನು.

ಇವು ಮಕ್ಕಳಿಗೆ ಸುಲಭವಾಗಿ, ಸರಳ ರೀತಿಯಲ್ಲಿ ನೀತಿ ಹೇಳಿಕೊಡಬಲ್ಲ ನೈತಿಕ ಪಾಠಗಳಾದ ಕಾರಣ ಪಂಚತಂತ್ರ ಕತೆಗಳು ಜಗತ್ತಿನಲ್ಲೆಲ್ಲ ಹೆಸರು ಪಡೆದಿವೆ. ಹೆಚ್ಚು ಹೆಚ್ಚು ತತ್ವಜ್ಞಾನಿಗಳ ಮನ್ನಣೆ ಪಡೆದ ಕಥೆಗಳಾಗಿವೆ. ಭಾರತದಿಂದ ಹೊರದೇಶಕ್ಕೆ ಇವು ಹೋಗಿವೆ ಎಂಬುದು ಹೆಮ್ಮೆಯ ವಿಷಯ.

ಗಜಲ್

- ಶ್ರೀನಿವಾಸ ಗಟ್ಟು

ಚೆನ್ನಾಗಿದ್ದೇವೆ ನಾವು ನಮಗೇನು ಆಗಿಲ್ಲ
ಕೈ ಕಾಲು ಆಡುತಿವೆ ನಮಗೇನು ಆಗಿಲ್ಲ

ಭ್ರಮೆಯ ಬತ್ತಾಸು ಸಿಹಿಯಾಗೆ ಇರುವುದು
ಚಪ್ಪರಿಸಿ ತಿಂದಿಹೆವು ನಮಗೇನು ಆಗಿಲ್ಲ

ಆಕಾಶದೇಣಿ ಕೈಬೀಸಿ ಕರೆಯುವುದು
ನಿಂತಲ್ಲೆ ಎಡವಿಹೆವು ನಮಗೇನು ಆಗಿಲ್ಲ

ಬಣ್ಣದ ಚಿತ್ತಾರವದು ಮಿಂಚಲ್ಲೆ ಝಗಮಗ
ಕತ್ತಲಿಗೆ ಒಗ್ಗಿಹೆವು ನಮಗೇನು ಆಗಿಲ್ಲ

ಗಾಳಿಯ ಗೋಪುರಕೆ ಚಿನ್ನದ ಕಳಸ 'ಗಟ್ಟು'
ಅಲುಗಾಡದೆ ನಿಂತಿಹೆವು ನಮಗೇನು ಆಗಿಲ್ಲ

*****


ಪುಸ್ತಕ ಪರಿಚಯ

ಪ್ರೊ. ಅ.ರಾ. ಮಿತ್ರ ಅವರ ಹೊಸ ಪುಸ್ತಕ

‘ರಾಮಾಯಣ ಮಿತ್ರ’

- **ಜಿ.ವಿ. ಅರುಣ**

ನಾವೆಲ್ಲರೂ ಚಿಕ್ಕಂದಿನಲ್ಲಿ ಅಜ್ಜಿ-ತಾತ, ಅಪ್ಪ-ಅಮ್ಮ ಮುಂತಾದವರಿಂದ ಕಥೆಗಳನ್ನು ಕೇಳುತ್ತಾ ಬೆಳೆದವರು. ಓದುವುದು ಪ್ರಾರಂಭವಾದ ಮೇಲೆ ರಾಮಾಯಣ ಮಹಾಭಾರತಗಳ ಕತೆಗಳನ್ನೆಲ್ಲ ಓದಿದವರು. ನನಗೆ ಯಾವುದಾದರೂ ಪುರಾಣದ ವ್ಯಕ್ತಿಯ ಬಗ್ಗೆ ಅನುಮಾನ ಬಂದರೆ "ಪುರಾಣ ನಾಮ ಚೂಡಾಮಣಿ"ಯನ್ನು ತೆಗೆದು ನೋಡುತ್ತಿದ್ದೆ. ಅಲ್ಲಿ ಆ ವ್ಯಕ್ತಿಯ ಬಗ್ಗೆ ಚಿಕ್ಕದಾದ ಚಿತ್ರಣವು ಸಿಕ್ಕುತ್ತಿತ್ತು. ಜೊತೆಗೆ ಎಲ್ಲಿ ಹುಡುಕಿದರೆ ಅದರ ಬಗ್ಗೆ ಇತರ ವಿವರಗಳು ಸಿಗುತ್ತವೆ ಎಂಬುದು ಗೊತ್ತಾಗುತ್ತಿತ್ತು.



ಕೆಲವು ವರ್ಷಗಳ ಕೆಳಗೆ “ಮಹಾಭಾರತದ ಪಾತ್ರ ಪ್ರಸಂಗಗಳು” ಎಂಬ ಪ್ರೊ. ಅ.ರಾ.ಮಿತ್ರ ಅವರ ಗ್ರಂಥವು ಪ್ರಕಟವಾದ ಮೇಲೆ, ಭಾರತದ ಪಾತ್ರಗಳ ಬಗ್ಗೆ ತಿಳಿಯಲು ಒಳ್ಳೆಯ ಪರಾಮರ್ಶನ ಕೃತಿ ದೊರಕಿದಂತಾಗಿತ್ತು. ಅದು ಅನೇಕ ಮುದ್ರಣಗಳನ್ನು ಕಂಡ ಜನಪ್ರಿಯ ಕೃತಿಯಾಗಿದೆ.

ಈಚೆಗೆ ಪ್ರೊ. ಅ.ರಾ.ಮಿತ್ರ ಅವರು "ರಾಮಾಯಣ ಮಿತ್ರ - ರಾಮಾಯಣದ ಪಾತ್ರ ಸಂಗತಿಗಳು" ಎಂಬ ಪುಸ್ತಕವನ್ನು ಹೊರತಂದಿದ್ದಾರೆ. ಈಚೆಗೆ ಬಿಡುಗಡೆಯಾದ ಈ ಪುಸ್ತಕದ ಪರಿಚಯವನ್ನು ಇಂದು ನಾನು ಮಾಡಿ ಕೊಡುತ್ತಿದ್ದೇನೆ. ಇದು ಪುಸ್ತಕ ಪರಿಚಯ ಮಾತ್ರ. ಇಂಗ್ಲಿಷಿನಲ್ಲಿ ಬುಕ್ ಚೆಕ್ ಅನ್ನುತ್ತಾರಲ್ಲ ಹಾಗೆ. ಇದು ವಿಮರ್ಶೆಯಲ್ಲ.

ಈ ರಾಮಾಯಣ ಮಿತ್ರದಲ್ಲಿರುವ 147 ಲೇಖನಗಳಲ್ಲಿ ರಾಮಾಯಣದ ಅನೇಕ ಪಾತ್ರ-ಸಂಗತಿಗಳನ್ನು ಶ್ರೀ ಮಿತ್ರ ಅವರು ತಮ್ಮ ಸುಲಲಿತ ಶೈಲಿಯಲ್ಲಿ ಪರಿಚಯಿಸಿದ್ದಾರೆ. ಅಂಜನಾದೇವಿ, ಅಕಂಪನ, ಅಗಸ್ತ್ಯ, ಇಂದ್ರಜಿತ್ ಮುಂತಾದ ಪಾತ್ರಗಳ ಪರಿಚಯಗಳಿವೆ. ಜೊತೆಗೆ ಅಹಲ್ಯೆ-ಒಂದು ಚರ್ಚೆ, ಗುರು-ಶಿಷ್ಯ ಸಂಬಂಧ, ದಾಂಪತ್ಯ ರಾಮಾಯಣ, ನಿತ್ಯಜೀವನದಲ್ಲಿ ರಾಮಾಯಣ, ಅಸ್ತ್ರ ಶಸ್ತ್ರಗಳು, ಶಸ್ತ್ರಾಸ್ತ್ರಗಳ ಆಕಾರಾದಿ ಪಟ್ಟಿ, ವೈದ್ಯಕೀಯ (ಶಸ್ತ್ರ ಗಾಯಗಳು ಮತ್ತು ಔಷಧಿಗಳು) ಹೀಗೆ ವಿಶೇಷವಾದ ಸಂಗತಿಗಳನ್ನು ರಾಮಾಯಣದಿಂದ ಹೆಕ್ಕಿ ತೆಗೆದು ನಮಗೆ ನೀಡಿದ್ದಾರೆ. ರಾಮಾಯಣದ ಪ್ರಮುಖ ಘಟ್ಟಗಳಾದ ಪುತ್ರಕಾಮೇಷ್ಟಿ, ತಾಟಕಿ ಸಂಹಾರ, ವನವಾಸ ಪ್ರಕರಣ, ಸುಂದರಕಾಂಡ ಮುಂತಾದವುಗಳ ವಿಶ್ಲೇಷಣೆಯೂ ಇವೆ.

ಅಂಜನಾದೇವಿಯ ಪಾತ್ರ ಪರಿಚಯ ಮಾಡಿಕೊಡುತ್ತಾ ಬರೆದಿರುವ ಸಾಲುಗಳು ಇವು: "ಪುಂಜಿಕಸ್ಥಲಿ ಎಂಬ ಅಪ್ಸರಸ್ತ್ರೀ ಅಂಜನಾದ್ರಿಯಲ್ಲಿದ್ದಳು. ಅವಳಿಗೆ ಅಂಜನೆ ಎಂಬ ಹೆಸರೂ ಇತ್ತು. ಕುಂಜರ ಎಂಬಾತನ ಮಗಳಾದ ಈ ಅಂಜನೆ, ವಾನರ ವೀರ 'ಕೇಸರಿ'ಯ ಪತ್ನಿ, ಈಕೆ ಅಸಾಧಾರಣ ಸುಂದರಿ. ಒಮ್ಮೆ ಇವಳು ಮಾನವರೂಪವನ್ನು ಧರಿಸಿ ಪರ್ವತ ಪ್ರಾಂತ್ಯದಲ್ಲಿ ಎತ್ತರದ ಭಾಗದಲ್ಲಿ ಸಂಚರಿಸುತ್ತಿದ್ದಳು. ಕೆಂಪು ಅಂಚಿನ ಸೊಗಸಾದ ಸೀರೆಯುಟ್ಟಿದ್ದಳು. ಆಗ ಅಲ್ಲಿಗೆ ಬಂದ ವಾಯುದೇವನು ಅವಳ ಸೀರೆಯನ್ನು ಮೆಲ್ಲಗೆ ಹಾರಿಸಿದ. ಆಗ ಅವಳ ಆಕರ್ಷಕ ರೂಪವನ್ನೂ ಕಂಡು ಪುಳಕಿತನಾದ. ಕಾಮಮೋಹಿತನಾಗಿ ಅವಳನ್ನು ಆಲಂಗಿಸಿದ. ಅಂಜನೆಗೆ ಹೆದರಿಕೆ. ಆ ಸುಂದರಿ ಹೆದರಿ "ನನ್ನ ಏಕಪತ್ನಿ ವ್ರತವನ್ನು ಏಕೆ ಭಂಗ ಮಾಡುತ್ತೀ?" (ಏಕಪತ್ನಿ ವ್ರತಮಿದಂ ಕೋ ನಾಶಯತುಮಿಚ್ಛತಿ ೪-೬೬-೧೬) ಎಂದು ಆಕ್ಷೇಪಿಸಿದ್ದರಿಂದ ವಾಯುದೇವನು ತನ್ನ ಚರ್ಯೆಯಿಂದ ಅಂಜನೆಯ ಪಾತಿವ್ರತ್ಯಕ್ಕೆ ಸ್ವಲ್ಪವೂ ಭಂಗ ಬರುವುದಿಲ್ಲ ಎಂದು ಧೈರ್ಯ ಹೇಳಿದ. (ನತ್ವಾಂ ಹಿಂಸಾಮಿ ಸುಶ್ರೋಣಿ ಮಾಭೂತ್ತೇ ಮನಸಾ ಭಯಮ ೪-೬೬-೧೭). "ನಾನು ನಿನ್ನನ್ನು ತಬ್ಬಿ ಮನೋಮಾರ್ಗದಲ್ಲಿ ಕೂಡಿದೆನೇ ಹೊರತು ನಿನ್ನ ಪಾತಿವ್ರತ್ಯಕ್ಕೆ ಭಂಗ ತಂದಿಲ್ಲ ಹೆದರಬೇಡ" (ಮನಸಾಸ್ಮಿ ಗತೋಯತ್ವಾಂ ಪರಿಷ್ವಜ್ಯ ಯಶಸ್ವಿನಿ ೪-೬೬-೧೮) ಎಂದು ಅಭಯವನ್ನೂ ಕೊಟ್ಟ. ಮುಂದೆ ಹೇಳಿದನಂತೆ, "ನಿನಗೆ ಪರಾಕ್ರಮಶಾಲಿಯೂ ಬುದ್ಧಿಶಾಲಿಯೂ ಆದ ಮಗನು ಜನಿಸುತ್ತಾನೆ." (ವೀರ್ಯವಾನ್ ಬುದ್ಧಿಸಂಪನ್ನಃ ಪುತ್ರ ತವ ಭವಿಷ್ಯತಿ ೪-೬೬-೧೮)

ಅಂಜನೆಯ ಪರಿಚಯದ ಕೊನೆಗೆ ಶ್ರೀ ಮಿತ್ರ ಅವರು ಹೇಳುವುದು ಹೀಗಿದೆ: "ದೇವತೆಗಳೂ ಭಾರತದ ಸುಂದರ ಸ್ತ್ರೀಯರನ್ನು ಮೆಚ್ಚುತ್ತಿದ್ದರು ಎಂಬ ಸಂಗತಿ ಇಲ್ಲಿ ಸ್ಪಷ್ಟವಾಗಿದೆ".

ತಮ್ಮ ನಿರೂಪಣೆಯಲ್ಲಿ ರಾಮಾಯಣದ ಶ್ಲೋಕಗಳನ್ನು ಇಲ್ಲವೆ ಕನ್ನಡದ ಕವಿಗಳ ಕಾವ್ಯ, ಕವನಗಳಿಂದ ಸಾಲುಗಳನ್ನು ಕೊಟ್ಟಿದ್ದಾರೆ. ಇದರಿಂದ ಆ ಪಾತ್ರಗಳ, ಸಂಗತಿಗಳ ಬಗ್ಗೆ ನಮಗೆ ಬೇರೆ ಕವಿದೃಷ್ಟಿಗಳ ಪರಿಚಯವೂ ಆಗುತ್ತವೆ.

'ರಾಮಾವತಾರ'ದ ಕರ್ತೃ ವಿ.ನರಹರಿ ಅವರಂತೂ ರಾಮಾಯಣದ ಘಟನೆಗಳು ಕನ್ನಡದ ನೆಲಕ್ಕೆ, ಜನರಿಗೆ ಸಂಬಂಧಿಸಿದ ಘಟನೆಗಳು ಎನ್ನುತ್ತಾ

> ಕಳೆದು ಹೋಗಿಹ ಪತ್ನಿ ಸೀತೆಯನರಸುತ
> ಅಲೆವ ರಾಮನ ಚರಣಸ್ಪರ್ಶದಿ
> ನೆಲವಿದಾಯಿತು ಪುಣ್ಯಭೂಮಿಯ ಕನ್ನಡದ ಸೀಮೆ

ಎಂದು ಸಂತೋಷಿಸಿದ್ದಾರೆ. ಅದು ನಮ್ಮನ್ನೂ ಪುಳಕಿತಗೊಳಿಸುತ್ತದೆ. ಅಲ್ಲದೆ ರಾಮಾಯಣದ ಮರುಕಥನಕ್ಕೆ ಅವಕಾಶವಾಯಿತು ಎನ್ನುತ್ತಾರೆ.

> ಧನ್ಯ ಕರ್ನಾಟಕದ ನೆಲಗುಣ
> ಧನ್ಯ ನಾಡಿಗನಾದ ಹನುಮನು
> ಧನ್ಯ ರಾಮನು ಸೇರಿಸಿದ ನದಿ ಕೆರೆಯ ಜಲವಿಲ್ಲಿ

ಧನ್ಯ ಕವಿಗಳ ಕಾವ್ಯ ಕೃಷಿಯಲ್ಲಿ
ಧನ್ಯವಾಯಿತು ಕನ್ನಡದ ನುಡಿ
ಧನ್ಯ ಶ್ರೀ ರಾಮಾಯಣದ ಮರುಕಥನಕವಕಾಶ

ಇದನ್ನು ಕನ್ನಡದಲ್ಲಿ ಬಂದಿರುವ ಎಲ್ಲ ರಾಮಾಯಣಗಳಿಗೂ ಅನ್ವಯಿಸಬಹುದಲ್ಲವೇ?

ಹೀಗೆ, ಪು.ತಿ.ನ. ಅವರು ರಾವಣನ ವ್ಯಕ್ತಿತ್ವವನ್ನು ಈ ಕೆಳಗಿನ ಪದ್ಯದಲ್ಲಿ ಕಡೆದಿರಿಸಿದ್ದಾರೆ. "ಹರಿಣಾಭಿಸರಣ" ಎಂಬ ರೂಪಕದಲ್ಲಿ ಸೀತೆ ಒಬ್ಬಳೇ ಇದ್ದಾಗ ಸನ್ಯಾಸಿ ವೇಷದಲ್ಲಿ ಬಂದ ರಾವಣ ಸೀತೆಗೆ ಹೇಳುವ ಮಾತುಗಳು ಇವು:

"ನಾ ತ್ರಿಲೋಕಾಧಿಪತಿ ಲಂಕೇಶ್ವರ...
ರವಿ ಎನಗೆ ಶಶಿ, ಶಶಿ
ನಾನು ಕುಡಿದು ಬಿಸುಡುವ ಪಾನ ಪಾತ್ರ
ಮೇರೆ ಇಲ್ಲದ ನನ್ನ ನೆಲದೊಂದು ಮೂಲೆಯಲಿ
ನೆಲೆಸಿಹ ಭಿಕಾರಿ ನನ್ನಗ್ರಜ ಕುಬೇರ……."

"ಒಬ್ಬ ಹೆಣ್ಣಿನ ಮುಂದೆ ಕೊಚ್ಚಿಕೊಳ್ಳುತ್ತಿರುವ ರಾವಣನ ಅಟಾಟೋಪ ಇಲ್ಲಿದೆ. ಮಹಾ ಬಲಶಾಲಿಯೂ, ಕಾಮ ರೂಪಿಯೂ, ಮತಿವಂತನೂ ಆದ ರಾವಣ ತನ್ನ ಪರಾಕ್ರಮವನ್ನು ತಾನೇ ವರ್ಣಿಸಿಕೊಳ್ಳುತ್ತಿದ್ದಾನೆ. ಎಲ್ಲರನ್ನೂ ತಿರಸ್ಕಾರ ದೃಷ್ಟಿಯಿಂದ ನೋಡುವಷ್ಟು ಪ್ರತಾಪಗರ್ವಿ ಅವನು."

ಪ್ರೊ. ಮಿತ್ರ ಅವರು ರಾವಣನನ್ನು ಪರಿಚಯಿಸುವಾಗ ಇಂಥ ಕವಿವಾಕ್ಯಗಳು ಅವರ ದೃಷ್ಟಿಗೆ ಪುಷ್ಟಿಯನ್ನು ಕೊಡುತ್ತವೆ. ವಶಿಷ್ಠ ವಿಶ್ವಾಮಿತ್ರರ ಬಗ್ಗೆ "ಕ್ಷಾತ್ರಧರ್ಮಿಯೊಬ್ಬನಿಗೆ ಆ ಶಕ್ತಿಯನ್ನು ಉಳಿಸಿಕೊಂಡೇ ಹೇಗೆ ಬ್ರಹ್ಮಜ್ಞಾನಿಯಾಗ ಬಹುದೆಂಬುದನ್ನು ಪ್ರಾತ್ಯಕ್ಷಿಕವಾಗಿ ತೋರಿಸಿಕೊಟ್ಟ ಕೀರ್ತಿ ವಸಿಷ್ಠರಿಗೆ ಸಲ್ಲುತ್ತದೆ. ವಿಶ್ವಾಮಿತ್ರನ ದರ್ಪಭಾವ ಅಹಂಭಾವಗಳು ಶೃಂಗಸ್ಥಿತಿಗೆ ತಲಪುವ ತನಕ ಕಾದಿದ್ದು ಕೊನೆಗೆ ಎಲ್ಲವನ್ನೂ ಚಿವುಟಿಹಾಕಿದ್ದು ಸಣ್ಣ ಸಂಗತಿಯಲ್ಲ.

ಹೆಚ್ಚು ಮಾತಿಗೆ ಹೋಗದೆ ವಿಶ್ವಾಮಿತ್ರನ ಮೇಲೆ ಪ್ರತೀಕಾರದ ಭಾವನೆ ತಾಳದೆ ವಿಶ್ವಾಮಿತ್ರನ ವ್ಯಕ್ತಿತ್ವಕ್ಕೆ ಸಾಣೆಯಿಡುತ್ತ ಅವನು ಶ್ರೇಷ್ಠ ವಜ್ರವಾಗುವಂತೆ ಮಾಡಿದ್ದು ಇತಿಹಾಸದಲ್ಲೇ ಅಪೂರ್ವವಾದ ಒಂದು ಘಟನೆಯಾಗಿದೆ. ಇಲ್ಲಿ ಇನ್ನೊಂದು ಸ್ವಾರಸ್ಯವಿದೆ. ಕವಿ ವಾಲ್ಮೀಕಿ ಇದನ್ನೆಲ್ಲ ಶತಾನಂದರ ಮಾತಿನಲ್ಲಿ ನಿರೂಪಿಸಿರುವುದು ಒಂದು ಕಲಾತ್ಮಕ ಸಾಧನೆಯಾಗಿದೆ. ಕ್ಷತ್ರಬುದ್ಧಿಗೆ ಅನುಗುಣವಾಗಿ ಬರುವ ಅಧಿಕಾರ ಲಾಲಸೆ, ದಮನಕಾರೀ ಪ್ರವೃತ್ತಿ ಮೊದಲಾದ 'ಮೆರೆದಾಟ'ಗಳನ್ನು ಸಾತ್ವಿಕ ಬುದ್ಧಿ ಹೇಗೆ ತಿದ್ದುತ್ತ ಹೋಗುತ್ತದೆ ಎಂಬುದಕ್ಕೆ ಈ ಪ್ರಸಂಗ ಒಂದು ನಿದರ್ಶನವಾಗಿದೆ.

"ವಸಿಷ್ಠರ ತಾತ್ವಿಕ ನಿಲುವು ಮತ್ತು ವಿದ್ಯಾಮಟ್ಟದ ಶೃಂಗಕ್ಕೆ ಢಿಕ್ಕಿ ಹೊಡೆದ ವಿಶ್ವಾಮಿತ್ರನ ದೇಹ ಬಲ, ಶಸ್ತ್ರ ಬಲ ಮತ್ತು ಅಧಿಕಾರ ಬಲಗಳು ಹೇಗೆ ಉದುರಿ ಹೋದುವೆಂಬುದನ್ನು ಚಿತ್ರಿಸುವುದಕ್ಕಷ್ಟೇ ತೃಪ್ತವಾಗದೆ ಅದರಿಂದ ಪಾಠ ಕಲಿತ

ವಿಶ್ವಾಮಿತ್ರನು ಕೊನೆಗೆ ವಸಿಷ್ಠರಿಂದಲೇ ಬ್ರಹ್ಮರ್ಷಿ ಎನ್ನಿಸಿಕೊಳ್ಳುವ ಎತ್ತರಕ್ಕೆ ಬೆಳೆದದ್ದು ಒಂದು ಸಕಾರಾತ್ಮಕ ಪವಾಡ ಸದೃಶ ಕ್ರಾಂತಿಯಾಗಿದೆ ಎಂದು ಹೇಳಬಹುದು" ಎನ್ನುವ ಶ್ರೀ ಮಿತ್ರರ ನುಡಿಗಳು ವಸಿಷ್ಠ ವಿಶ್ವಾಮಿತ್ರ ಅವರ ಲೋಕಪ್ರಸಿದ್ಧವಾದ ಸ್ಪರ್ಧೆಗೆ ಮುಕುಟಪ್ರಾಯವಾದ ಅಂತ್ಯವನ್ನು ಸೂಚಿಸುತ್ತದೆ.

ಪ್ರೊ. ಮಿತ್ರ ಅವರು ರಾಮಾಯಣವನ್ನು ಇಲ್ಲಿ ನೋಡಿರುವ ದೃಷ್ಟಿಕೋನವು ಹೇಗಿದೆ ಎಂಬುದಕ್ಕೆ ಮತ್ತೊಂದು ಉದಾಹರಣೆಯನ್ನು ಅವರ ಮಾತುಗಳಲ್ಲೇ ಕೊಡುತ್ತೇನೆ. ಮಾಯಾಮೃಗದ ಪ್ರಸಂಗ: "ರಾವಣನು ಮಹಾ ಕುಟಿಲೋಪಾಯ ತಜ್ಞ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಯಾವ ಪ್ರಲೋಭನೆಗೂ ಒಳಗಾಗದ ಆತ್ಮಸ್ಥೈರ್ಯವುಳ್ಳ ಸೀತೆಯನ್ನು ಸ್ವರ್ಣ ಮೋಹದಿಂದ ಗೆಲ್ಲಬಹುದೆಂಬ ರಾವಣನ ಚಿಂತನ ಲಹರಿ ಯಶಸ್ಸನ್ನು ಕಂಡಿರುವುದೇ ಈ ದುರಂತ ನಾಟಕದ ವೈಶಿಷ್ಟ್ಯ. ಸೀತೆಯು ಮೃಗದ ಚರ್ಮ ಸೌಂದರ್ಯಕ್ಕೆ ಮರುಳಾಗುತ್ತಾಳೆ. ಅಲ್ಲದೆ ಒಡವೆಯ ಆಸೆಯೂ ರಾಜಮನೆತನದ ಕನ್ಯೆಯರಿಗೆ ಸಹಜ.

ರಾವಣ ಅಂದುಕೊಂಡಂತೆಯೇ ಸೀತೆ ಆ ಮಾಯಾ ಜಿಂಕೆಯನ್ನು ಕಂಡಾಗ ಇದು ನನ್ನ ಮನಸ್ಸನ್ನು ಸೆಳೆದಿದೆ (ಹೃದಯಂ ಹರತೀವಮೇ) ಎಂದುಕೊಂಡದ್ದು, ನಾವು ವನವಾಸ ಮುಗಿಸಿ ಹಿಂತಿರುಗುವಾಗ ಈ ಜಿಂಕೆ ನಮ್ಮ ಅಂತಃಪುರಕ್ಕೆ ಅಲಂಕಾರವಾಗಿರುತ್ತದೆ (ಅಂತಃಪುರ ವಿಭೂಷಾರ್ಥೇ ಮೃಗ ಏಷ ಭವಿಷ್ಯತಿ ೩-೪೩-೧೭) ಎಂದು ಸೀತೆ ಭಾವಿಸಿದ್ದು, ಇವರೆಡಕ್ಕಿಂತ ಹೆಚ್ಚಾಗಿ "ಈ ಮೃಗ ಜೀವಸಹಿತವಾಗಿ ಸಿಗದಿದ್ದರೆ ಕೊಂದು ತಂದರೂ ಇದರ ಸುಂದರ ಚರ್ಮವನ್ನು ನಾನು ಇರಿಸಿಕೊಳ್ಳುತ್ತೇನೆ. ದರ್ಭಾಸನದ ಮೇಲೆ ಹರಡಿ ನಿನ್ನೊಂದಿಗೆ ಮಲಗುತ್ತೇನೆ" (ಜೀವನ್ನಯದಿ ತೇಭ್ಯೇತಿ ಗ್ರಹಣಂ ಮೃಗಸತ್ತಮಃ ಅಜಿನಂ ನರಶಾರ್ದೂಲ ರುಚಿರಂ ತು ಭವಿಷ್ಯತಿ ೩-೪೩-೧೯) ಎಂಬ ಮಾತಿನಲ್ಲಿಯೂ ಆಸೆ, ವೈಭವಕಾಂಕ್ಷೆ, ಜೀವಹಿಂಸೆ ಮತ್ತು ಲೈಂಗಿಕ ಪ್ರವೃತ್ತಿಗಳೆಲ್ಲ ಕೆಲಸ ಮಾಡಿರುವಂತೆ ಕಾಣುತ್ತದೆ.

"ಹಿಂದೆಂದೂ ನೋಡಿಲ್ಲದ, ಲೋಕೋತ್ತರವಾದ ಆ ಮಾಯಾಮೃಗವನ್ನು ನೋಡಿ ಸೀತೆ ಆಶ್ಚರ್ಯ ಚಕಿತಳಾದಳು. ಮುಂದೆ ರಾಮನೂ ಈ ಸುಳಿಗೆ ಸಿಕ್ಕುತ್ತಾನೆ. ಲಕ್ಷ್ಮಣನೊಬ್ಬನು ಮಾತ್ರ ಸ್ಪಷ್ಟವಾಗಿ ಇಂಥ ಪ್ರಾಣಿಗಳ ಅಸ್ತಿತ್ವವನ್ನು ಖಂಡಿಸಿದ. ಅಷ್ಟೇ ಅಲ್ಲ ಅದರ ಒಳಗನ್ನು ಭೇದಿಸುವ ಹಾಗೆ ಅದು ಮಾರೀಚನಂತೆ ಕಾಣುತ್ತದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದ. ಸೀತೆ ಸ್ವರ್ಣಮೋಹದಿಂದಾಗಿ ರಾವಣನ ಬಲೆಗೆ ಬೀಳಬೇಕಾಯಿತು. ಪತ್ನಿಯ ಅಭಿಲಾಷೆಯನ್ನು ಪೂರೈಸಬೇಕೆಂಬ ಏಕೈಕ ದಿಕ್ಕಿನಲ್ಲಿ ಹರಿದ ರಾಮನ ಚಿತ್ತ ವಿವೇಕಹೀನತೆಯಿಂದ ನರಳಿದ ಪ್ರಸಂಗವೂ ಇದೇ ಆಗಿದೆ."

"ಈ ಪ್ರಕರಣದಲ್ಲಿ ರಾಮ, ಸೀತೆ, ಲಕ್ಷಣ ಈ ಮೂವರ ಸ್ವಭಾವಗಳೂ ತಿಳಿದುಬರುತ್ತವೆ. ತನ್ನದಲ್ಲದ ವಸ್ತುವನ್ನು ಬಯಸಿದ ಸ್ತ್ರೀ ಸಹಜ ಆಸೆ, ಅಂಥ ಅಪೂರ್ವ ವಸ್ತು ತನ್ನ ಖಾಸಗಿ ಸ್ವತ್ತಾಗಬೇಕೆಂಬ ಅವಳ ಅಧಿಕಾರ ಪ್ರವೃತ್ತಿ, ಈ ಎರಡು ಬಿರುಗಾಳಿಗಳಲ್ಲಿ ಅವಳ ವಿವೇಕ ಕೊಚ್ಚಿ ಹೋಗಿತ್ತು. ಎಲ್ಲವನ್ನೂ ತ್ಯಜಿಸಿ ಬಂದ ತಾನು ಕಾಡಿನಲ್ಲಿ ಇಂಥ ಮೋಹಕ್ಕೆ ಒಳಗಾಗಬಾರದೆಂಬ ವಿವೇಚನಾ ಶಕ್ತಿ ಉಡುಗಿ ಹೋಗಿತ್ತು."

ಈ ರೀತಿಯ ಹೊಸ ಹೊಳಹುಗಳು, ರಾಮಾಯಣವನ್ನು ಮತ್ತೆ ಓದಿ ವಿಭಿನ್ನವಾಗಿ ವಿಶ್ಲೇಷಿಸಿಕೊಳ್ಳಬಹುದಾದ ದಾರಿಯನ್ನು ಪ್ರೊ. ಮಿತ್ರ ಅವರ ಈ ಕೃತಿಯು ನಮಗೆ ತೋರಿಸುತ್ತದೆ. ಹೀಗೆ ಆರಿಸಿಕೊಂಡಿರುವ ಪಾತ್ರ ಹಾಗೂ ಸಂಗತಿಗಳ ಬಗ್ಗೆ, ಪ್ರೊ. ಮಿತ್ರ ಅವರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿಶ್ಲೇಷಣೆಯನ್ನು ಮಾಡಿದ್ದಾರೆ. ಈ ಕೃತಿಯು ಮಹಾಭಾರತ ಪಾತ್ರ ಪ್ರಸಂಗದಷ್ಟು ವಿಫುಲವಾಗಿಲ್ಲದಿದ್ದರೂ ಆರಿಸಿಕೊಂಡಿರುವ ಪಾತ್ರ-ಪ್ರಸಂಗಗಳಲ್ಲಿ ಇಡೀ ರಾಮಾಯಣದ ಚಿತ್ರ ಬಂದಿದೆ. ಆದರೆ ನಾವು ನೆನಪಿಡಬೇಕಾದ್ದು ಹಿರಿಯ ಲೇಖಕರ ಇಂಥ ಗ್ರಂಥಗಳು ತೋರುವ ವಿಭಿನ್ನ ವಿಶ್ಲೇಷಣೆಯನ್ನು ಮಾತ್ರ. ರಾಮಾಯಣದ ಪಾತ್ರ-ಸಂಗತಿಗಳ ಬಗ್ಗೆ ಅನುಮಾನ ಬಂದಾಗ ಅವಲೋಕಿಸಬಹುದಾದ ಆಕಾರ ಗ್ರಂಥವಾಗಿಯೂ ಇದನ್ನು ಪರಿಶೀಲಿಸಬಹುದು.

ತಮ್ಮ ಮಾಗಿದ ಅನುಭವದ ಹಿನ್ನೆಲೆಯಲ್ಲಿ ಹೊರಬಂದಿರುವ ಈ ಕೃತಿಗಾಗಿ ನಾವು ಪ್ರೊ. ಮಿತ್ರ ಅವರ ಮಗಳು ಶ್ರೀಮತಿ ಸೌಮ್ಯ ಹಾಗು ಅಳಿಯ ಶ್ರೀ ಗೌತಮ್ ಅವರಿಗೆ ಕೃತಜ್ಞರಾಗಿರಬೇಕು.

ಪ್ರಸಿದ್ಧ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರ ಹಲವು ರೇಖಾಚಿತ್ರಗಳು ಪುಸ್ತಕದ ಅಂದವನ್ನು ಹೆಚ್ಚಿಸಿವೆ. ಸುಮಾರು 500 ಪುಟಗಳ ರಾಮಾಯಣ ಮಿತ್ರದ ಬೆಲೆ 380 ರೂಪಾಯಿಗಳು. ವಸಂತ ಪ್ರಕಾಶನದಿಂದ ಪ್ರಕಟವಾಗಿದೆ. 2020ರಲ್ಲಿ ಮುದ್ರಣವಾದರೂ ಕೊರೊನ ಕೃಪೆಯಿಂದ ಈಗ ಬಿಡುಗಡೆಯಾಗಿದೆ. ****

ಮೇಲಿನ ಲೇಖನಕ್ಕೆ ಬಂದ ಪ್ರತಿಕ್ರಿಯೆ, ಟಿಪ್ಪಣಿಗಳು:

1) ತುಂಬಾ ಉಪಯುಕ್ತ ವಿಚಾರ. ಆದರೆ ಅಂಜನಾದೇವಿ ತನ್ನದು 'ಏಕಪತ್ನೀ ವ್ರತ' ಅಂತ ಹೇಳಿದ್ದು ಯಾಕೋ ಏನೋ?

- ಶ್ರೀ ಗಣಪತಿ ಹೆಗಡೆ

2) ನಾನು ಇಲ್ಲಿ ನೀಡಿರುವುದು ರಾಮಾಯಣ ಮಿತ್ರ ಪುಸ್ತಕದಲ್ಲಿ ಇರುವ ವಾಕ್ಯವನ್ನು. ನನಗೂ ಮೊದಲು "ಪತಿವ್ರತೆಯಾದ" ಎಂದಿರಬೇಕೆ ಎನ್ನಿಸಿತ್ತು. ಮೂಲದಲ್ಲಿ ಇರುವ ಹಾಗೆ, ಪ್ರೊ. ಮಿತ್ರ ಅವರು ಬರೆದಿದ್ದಾರೆ. ಏಕಪತ್ನೀ ಎನ್ನುವುದಕ್ಕೆ ಒಬ್ಬನಿಗೇ ಹೆಂಡತಿಯಾಗಿರುವವಳು ಎಂದಾಗಬಹುದೆ?

- ಜಿ ವಿ ಅರುಣ

3) ಏಕಪತ್ನೀ ಎಂದರೆ ಪತಿವ್ರತಾ ಎಂದು ಅಮರ ಕೋಶ ಹೇಳಿದೆ. ಮತ್ತೂ ಒಂದು ನಿರ್ವಚನ (ಎಟಿಮಾಲಜಿ) ವೆಂದರೆ ಏಕೋ ಪತಿಃ ಯಸ್ಯಾ ಇತಿ, ಎಂದರೆ ತನ್ನ ಪತಿಗೆ ಒಬ್ಬಳೇ ಪತ್ನಿ ಯಾಗಿರುವವಳು ಎಂದರ್ಥ. ಅಂದರೆ ಸವತಿಯಿಲ್ಲದವಳು. ಹೀಗೂ ಇದೆ. ಉದಾಹರಣೆಗೆ: 'ಮೇಘದೂತ'ದಲ್ಲಿ ಯಕ್ಷ ತಾಂಚಾವಶ್ಯಂ ದಿವಸಗಣನಾ ತತ್ಪರಾಮ್ ಏಕಪತ್ನೀಮ್. ಮತ್ತೂ ಒಂದು ಬಗೆಯ ನಿರ್ವಚನವನ್ನೂ ಹೇಳಿದೆ 'ಶಬ್ದಕಲ್ಪದ್ರುಮ'ದಲ್ಲಿ. ಅದೆಂದರೆ - ಏಕಃ ಸಮಾನಃ ಪತಿರ್ಯಸ್ಯಾ ಅಂತಾ ಸಮಾಸವನ್ನು ಬಿಡಿಸಿದಾಗ - ಸಪತ್ನೀ ಅಂದರೆ ಇಬ್ಬರಿಗೆ ಒಬ್ಬನೇ ಗಂಡನಾಗಿರುವವನ ಹೆಂಡತಿ ಎಂದೂ ಹೇಳಿದೆ.

- ಶ್ರೀಮತಿ ಶಾಂತಾ ನಾಗಮಂಗಲ

4) ಲೇಖನದಲ್ಲಿ ಹಾಸನದ ನರಹರಿ ಕವಿಗಳ ಉಲ್ಲೇಖವೂ ಬಂದಿದೆ. ಅವರು ನಮ್ಮ ಗಮಕ ಕ್ಷೇತ್ರಕ್ಕೂ ಜೋಡಿಸಿಕೊಂಡು ನಮಗೆಲ್ಲಾ ಆತ್ಮೀಯರಾಗಿದ್ದಾರೆ. ಬಹಳ ಸಜ್ಜನರು.

- ಶ್ರೀಮತಿ ಶಾಂತಾ ನಾಗಮಂಗಲ

ಭಾಷೆಯ ಅವಸ್ಥಾಂತರ

– ಮಹಾಬಲ

ವಸ್ತ್ರ ಸಂಹಿತೆ, ವಸ್ತ್ರ ಸ್ವಾತಂತ್ರ ಎಂಬ ಚರ್ಚೆ ಬಿರುಸು ಪಡೆದು ಅದೇಕೋ 'ಸೀರೆ' ಎಂಬ ಪದ ಪ್ರಯೋಗ ಪತ್ರಿಕೆಯ ಅಂಕಣಗಳಲ್ಲಿ ಇತ್ತೀಚೆಗೆ ಮೆರೆದಾಡುತ್ತಿತ್ತು. ಯಥಾಪ್ರಕಾರ ಸ್ತ್ರೀವಾದಿಗಳು ಯಾರೋ ಗಂಡಸು ಎಲ್ಲೋ ಸೀರೆ ಪರವಾಗಿ ಹಾಸ್ಯಕ್ಕಾಗಿ ಹೇಳಿದ್ದನ್ನು ನೆಪವಾಗಿಟ್ಟುಕೊಂಡು ಇಡೀ ಪುರುಷ ಕುಲವನ್ನು ಏರಿಯಲ್ ಆಟೋಮ್ಯಾಟಿಕ್ ಎಲ್ಲ ಬಗೆಯ ಸೋಪಿನಪುಡಿ ಒಟ್ಟಿಗೇ ಬಳಸಿ ತೊಳೆಯುತ್ತಿದ್ದರು.

ಇಷ್ಟೆಲ್ಲ ಕಾಟ ಕೊಡುತ್ತಿರುವ ಸೀರೆಯ ಹಿನ್ನಲೆಯನ್ನು ತಿಳಿದುಕೊಳ್ಳುವ ಕುತೂಹಲದಿಂದ ಅರ್ಥಕೋಶ ತಡಕಿದೆ. ಅದರ ಪ್ರಕಾರ ಸೀರೆ ಒಂದು ಕಾಲದಲ್ಲಿ ಗಂಡು ಹಾಗೂ ಹೆಣ್ಣು ಸಮಾನವಾಗಿ ಉಪಯೋಗಿಸುತ್ತಿದ್ದ ವಸ್ತ್ರವೆಂದು ತಿಳಿಯಿತು. ಇದು ಯಾವಾಗ ಸ್ತ್ರೀಯರಿಗೆ ಮಾತ್ರ ಮೀಸಲಾಗಿ ಇಷ್ಟೆಲ್ಲ ರಾದ್ಧಾಂತಗಳಿಗೆ ಕಾರಣವಾಯಿತೋ ತಿಳಿಯದು!

ಭಾಷಾಶಾಸ್ತ್ರಿಗಳ ಪ್ರಕಾರ ಈ ಅವಸ್ಥಾಂತರ (ಬದಲಾವಣೆ) ಒಂದು ಸಹಜವಾದ ಕ್ರಿಯೆ. ಏಕೆಂದರೆ ಭಾಷೆಯೆಂಬುದು ನಿಂತ ನೀರಲ್ಲ. ಆಯಾ ಕಾಲದ ಅಗತ್ಯಗಳಿಗೆ ತಕ್ಕಂತೆ, ಆಧುನಿಕ ವಿದ್ಯಮಾನಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಬದಲಾಗುವುದು ಭಾಷೆ ಬೆಳೆಯುತ್ತಿರುವ ಸಂಕೇತ.

ಹಲವಾರು ಹಳೆಯ ಪದಗಳು ಅರ್ಥವಿಕಾಸ, ಅರ್ಥ ಸಂಕೋಚ, ಹೀನಾರ್ಥ ಪ್ರಾಪ್ತಿ, ಉತ್ತಮಾರ್ಥ ಪ್ರಾಪ್ತಿ, ಅರ್ಥಾಂತರ ಅಂತಹ ಬದಲಾವಣೆಗಳಿಗೆ ನಿರಂತರವಾಗಿ ಪಕ್ಕಾಗುತ್ತಿರುತ್ತವೆ.

ಪ್ರಾಚಾರ್ಯ ಎಚ್ಚೆಸ್ಕೆಯವರು ಸಮನ್ವಯ ಸಮಿತಿಯು ಈ ಹಿಂದೆ ಏರ್ಪಡಿಸುತ್ತಿದ್ದ ಬ್ಯಾಂಕಿಂಗ್ ಕಮ್ಮಟಗಳಲ್ಲಿ ಪದೇ ಪದೇ ಕಳಕಳಿಯಿಂದ ಉದಾಹರಿಸುತ್ತಿದ್ದ ಕೆಲವು ನೆಲಮೂಲ ಪದಗಳ ಅರ್ಥಪಲ್ಲಟಗಳು ಇಂದೂ ನಮಗೆಲ್ಲಾ ನೆನಪಾಗುತ್ತವೆ.

ಈ ಹಿಂದೆ ಕೂಳು ಎಂದರೆ ಆಹಾರ ಅಥವಾ ಅನ್ನ. ಆದರೆ ಇಂದು ನಿರ್ಗತಿಕರು ತಿನ್ನುವ ಅಥವಾ ಸತ್ತವರ ಮನೆಯ ಊಟ ಎಂಬರ್ಥದಲ್ಲಿ ಮಾತ್ರ ಬಳಕೆಯಾಗುತ್ತಿದೆ. ಅದೇ ರೀತಿ ಆಳ್ ಎಂದರೆ ಒಂದು ಕಾಲದಲ್ಲಿ ಶೂರ ಎಂಬರ್ಥ ಇತ್ತು. ಆದರೆ ಈಗ ಅದು ಸೇವಕ ಎಂಬ ಭಾವಕ್ಕಷ್ಟೇ ಬಳಕೆಯಾಗುತ್ತಿದೆ.

ತಿಥಿ ಎಂದರೆ ಪಂಚಾಂಗದ ಪ್ರಕಾರ ದಿನ. ಆದರೆ ಇಂದು ಅದು ಸತ್ತವರ ದಿನ ಎಂಬ ವಿಶಿಷ್ಟ ಅರ್ಥ ಪಡೆದುಕೊಂಡಿದೆ.

ಶಿಕ್ಷಾ ಎಂದರೆ ಶಿಕ್ಷಣ ಎಂಬ ಅರ್ಥವಿದ್ದದ್ದು ಇಂದು ಅದು ದಂಡನೆ ಎಂಬ ಅರ್ಥ ಪಡೆದುಕೊಂಡಿದೆ.

ಗಾಳಿ ಎಂದರೆ ಬಹಳ ಹಿಂದೆ ಪಿಶಾಚಿ, ದೆವ್ವ, ಭೂತ ಎಂಬ ಅರ್ಥಗಳಿದ್ದವು. ಆದರೆ ಇಂದು ಗಾಳಿ ಎಂದರೆ ವಾಯು ಅಷ್ಟೇ.

ಮತ್ತೊಂದು ಸ್ವಾರಸ್ಯದ ಪದ ಅಗ್ಗ. ಅಗ್ಗ ಎಂದರೆ ಒಂದು ಕಾಲದಲ್ಲಿ ಶ್ರೇಷ್ಠ (ಅಗ್ರ) ಎಂಬ ಅರ್ಥವಿತ್ತು. ಈಗಿನ ಅಗ್ಗವೆಂದರೆ ಸೋವಿ ಅಥವಾ ಕನಿಷ್ಠದ್ದು. ದಿನಬಳಕೆಯ ಆಂಗ್ಲ ವ್ಯಾಮೋಹದ ಭಾಷೆಯಲ್ಲಿ ಹೇಳುವುದಾದರೆ ಅದು ಚೀಪ್.

ಪೆದ್ದ ಪದಕ್ಕೆ ಹಿಂದೆ ಪಂಡಿತ ಎನ್ನುವ ಅರ್ಥವಿತ್ತು. ಆದರೆ ಅವನು ಮೂರ್ಖ, ದಡ್ಡ ಆದದ್ದು ಯಾವಾಗಲೋ ತಿಳಿಯದು! ನಿಮಗೆ ಹಳೆಗನ್ನಡ ಪದ ಬಳಕೆಯ ಗೀಳು ಹತ್ತಿ ಯಾರಾದರೂ ಮೇಧಾವಿಯನ್ನು ಪೆದ್ದ ಎಂದು ಸಂಬೋಧಿಸೀರಿ ಜೋಕೆ!

ಟೀಕೆ ಪದಕ್ಕೆ ಹಿಂದೆ ವ್ಯಾಖ್ಯಾನ, ವಿಮರ್ಶೆ ಎಂಬ ಅರ್ಥವೇ ಇತ್ತು. ಆದರೆ ಈಗ ಅದು ಟೀಕಿಸು, ನಿಂದಿಸು ಎಂಬರ್ಥವನ್ನೇ ಖಾಯಂ ಆಗಿ ಪಡೆದಿದೆ.

ಅವಸ್ಥೆ ಎಂದರೆ ಬಹಳ ಹಿಂದೆ ಸರಳವಾಗಿ ಸ್ಥಿತಿ ಎಂದಷ್ಟೇ ಅರ್ಥವಿತ್ತು. ಆದರೆ ಈಗ ಅದು ಹೀನಸ್ಥಿತಿ ಎಂದೇ ಶಾಶ್ವತವಾಗಿದೆ.

ಮತ್ತೊಂದು ಅಪಮೌಲ್ಯಗೊಂಡಿರುವ ಹಳೆಯ ಪದವೆಂದರೆ ಕುನ್ನಿ. ಹಿಂದಿನ ಕಾಲದ ಬಳಕೆಯ ಪ್ರಕಾರ ಕುನ್ನಿ ಎಂದರೆ ಗಂಡು ಮಗು (ಬೇಬಿ ಬಾಯ್). ಈಗಲೂ ಹಳೇ ಮೈಸೂರಿನ ಕೆಲವು ಗ್ರಾಮೀಣರಲ್ಲಿ ಆ ಅರ್ಥದಲ್ಲೇ ಪದ ಬಳಕೆಯಲ್ಲಿದೆ. ಇಂದಿನ ಡ್ಯೂಡ್ ಗಳನ್ನು ಕುನ್ನಿ ಎಂದು ಕರೆದು ವೃಥಾ ಅಪಾಯಕ್ಕೆ ಸಿಲುಕಬೇಡಿ. ಏಕೆಂದರೆ ಕುನ್ನಿ ಎಂದರೆ ಈಗ ನಾಯಿಮರಿ.

ಅದೇ ರೀತಿ ಕೂಸು ಎಂದರೆ ಹೆಣ್ಣುಮಗು ಎಂದೇ ಅರ್ಥ. ಆದರೆ ಕಾಲಾಂತರದಲ್ಲಿ ಕೂಸು ಎಂದರೆ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಬಳಕೆಯಾಗುತ್ತಿದೆ. ವರನಟ ರಾಜಕುಮಾರ್ ಹೆಣ್ಣುಮಕ್ಕಳನ್ನು "ಓ ಕೂಸೇ' ಎಂದೇ ವಾತ್ಸಲ್ಯದಿಂದ ಕರೆಯುತ್ತಿದ್ದರಂತೆ.

ಹಳಗನ್ನಡದಲ್ಲಿ ಸಮಯ ಎಂದರೆ ಧರ್ಮ ಎಂದರ್ಥ. ಆದರೆ ನಾವು ಈಗ ಬಹುಪಾಲು ವೇಳೆ ಎನ್ನುವ ಅರ್ಥದಲ್ಲಿ ಬಳಸುತ್ತಿದ್ದೇವೆ.

ಮರ್ಯಾದೆ ಪದ ಈ ಹಿಂದೆ ಸೀಮೆ ಅಥವಾ ಎಲ್ಲೆ ಎಂಬ ಅರ್ಥದಲ್ಲಿ ಬಳಕೆಯಾಗುತ್ತಿತ್ತು (ನಾಗಚಂದ್ರನ ರಾಮಚಂದ್ರ ಚರಿತ ಪುರಾಣ ಕಾವ್ಯದಲ್ಲಿ ಅಬ್ಧಿಯುಂ ಒರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ). ಅದು ಈಗ ಗೌರವ ಎಂದು ರೂಪಾಂತರಗೊಂಡಿದೆಯಲ್ಲವೆ?

ಒಂದು ಕಾಲದಲ್ಲಿ ಸಮಾಚಾರ ಪದವು ಶುಭ ಸಮಾಚಾರ ಎಂದೇ ಅರ್ಥ ಹೊಂದಿತ್ತು. ಈಗ ಅದು ಯಾವುದೇ ತರಹದ ಸುದ್ದಿ ಎಂಬ ವ್ಯಾಪಕ ಅರ್ಥ ಹೊಂದಿದೆ.

ಮತ್ತೊಂದು ಸೋಜಿಗ. ಈ ಹಿಂದೆ ಎಣ್ಣೆ ಎಂದರೆ ಎಳ್ಳಿನಿಂದ ತೆಗೆದ ಜಿಡ್ಡು (ಎಳ್+ನೆಯ್) ಎಂದಿತ್ತು. ಈಗ ಅದು ಯಾವುದೇ ಬಗೆಯ ಎಣ್ಣೆ ಎಂದು ಸಾರ್ವತ್ರಿಕಗೊಂಡಿದೆ.

ಓಲೆ ಎಂದು ನಾವು ಇಂದು ಚಿನ್ನದೋಲೆ, ವಜ್ರದೋಲೆ, ಬೆಂಡೋಲೆ ಎಂದು ವೈಭವದಿಂದ ಕರೆಯುವ ಓಲೆ ಎಂದರೆ ಹಳಗನ್ನಡದಲ್ಲಿ ತಾಳೆಗರಿಯಿಂದ ಮಾಡಿದ ಆಭರಣ.

ಸಭಿಕ ಎಂದರೆ ಸಭೆಯಲ್ಲಿ ಉಪಸ್ಥಿತನಾದವನು ಎಂದು ಈಗಿನ ಮಂದಿ ಬೀಗಿದರೆ ಹಳಗನ್ನಡದಲ್ಲಿ ಸಭಿಕನೆಂದರೆ ಜೂಜುಕೋರ.

ಈಗ ಅಮ್ಮ ಎಂದರೆ ತಾಯಿ ಇರಬಹುದು. ಆದರೆ ಈ ಹಿಂದೆ ಅಮ್ಮ ಎಂದರೆ ತಂದೆ.

ಅವಸರ ಎಂದರೆ ಈಗಿನವರಿಗೆ ತರಾತುರಿ. ಆದರೆ ಒಂದು ಕಾಲದಲ್ಲಿ ಅವಸರ ಎಂದರೆ ಸಮಯ (ಹಿಂದಿಯವರು ಈಗಲೂ ಅದೇ ಅರ್ಥದಲ್ಲಿ ಬಳಸುತ್ತಾರೆ).

ದಾಹ ಎಂದರೆ ಉರಿ ಎಂಬರ್ಥವಿದ್ದದ್ದು ಈಗ ಬಾಯಾರಿಕೆಗೆ ಸೀಮಿತವಾಗಿದೆ.

ಸಂಭ್ರಮ ಪದಕ್ಕೆ ಈ ಮೊದಲು ಗೊಂದಲ ಎಂಬ ಅರ್ಥವಿತ್ತು. ಯಾವಾಗಲೋ ಅದು ಸಡಗರವಾಗಿದೆ.

ವಿಪರೀತ ಪದಕ್ಕೆ ವಿರುದ್ಧವಾದ ಎಂಬರ್ಥವಿತ್ತು (ಸಾಕ್ಷರಾ ವಿಪರೀತಾಶ್ಚ...ಸುಭಾಷಿತ ಕೇಳಿಲ್ಲವೇ). ಈಗ ಬಹಳ ಎಂದು ಬಳಕೆಯಾಗುತ್ತಿದೆ.

ಕಾಲದ ಹೊಡೆತಕ್ಕೆ ಸಿಕ್ಕಿ ಬದಲಾದ ಕೆಲವೇ ಪದಗಳ ಉದಾಹರಣೆಗಳಿವು.

ಮೊದಲ ಗಣಿತದ ಪರೀಕ್ಷೆ

- ಎನ್.ವಿ.ರಘುರಾಂ

ಇಂಜನಿಯರಿಂಗ್ ವಿದ್ಯಾಭ್ಯಾಸದಲ್ಲಿ ಸೆಮಿಸ್ಟರ್ ಪರೀಕ್ಷಾ ಪದ್ಧತಿಯನ್ನು ಯಾರು ಕಂಡುಹಿಡಿದರೋ ಗೊತ್ತಿಲ್ಲ. ನಾನೋ ಮನೆ ಬಿಟ್ಟು ಹಾಸ್ಟೆಲ್ ನಲ್ಲಿ ಪ್ರಥಮ ಬಾರಿ ವಾಸ ಮಾಡುತ್ತಿರುವುದು. ಆ ಕಡೆ ಇಂಗ್ಲೀಷಿನಲ್ಲಿ ಎಡಬಿಡದೆ ಪಾಠಮಾಡುವ ಪ್ರಾಧ್ಯಾಪಕರು. ಈ ಕಡೆ ಇನ್ನೂ ಹೋಗಿರದ ಹೋಂ ಸಿಕ್ನೆಸ್! ಏನುಎತ್ತ ಎಂದುಕೊಳ್ಳುತ್ತಿರಬೇಕಾದರೆ ಮೊದಲ ಸೆಮಿಸ್ಟರ್ ಪರೀಕ್ಷೆ ಬಂದೇಬಿಟ್ಟಿತು. ನನಗೇನೂ ಪರೀಕ್ಷೆಯ ಭಯ ಇಲ್ಲ ಬಿಡಿ. ಸಾಕಷ್ಟು ತಯಾರಿ ನಡೆಸಿದ್ದೆ. ಮೊದಲ ದಿನದ ಪರೀಕ್ಷೆಯೇ ಗಣಿತದ್ದು.

ತುಂಬ ಹುಮ್ಮಸ್ಸಿನಿಂದ ಪರೀಕ್ಷಾ ಕೊಠಡಿಗೆ ಪ್ರವೇಶ ಮಾಡಿದೆ. ಗಂಟೆ ಹೊಡೆದೇಬಿಟ್ಟಿತು. ಕೈಗೆ ಬಂದೇಬಿಟ್ಟಿತು ಗಣಿತದ ಪ್ರಶ್ನೆ ಪತ್ರಿಕೆ. ಮೊದಲ ಪ್ರಶ್ನೆ ಬಿಡಿಸಿಯೇ ಬಿಟ್ಟೆ. ಬಂದಿತು ಎಂಟು ಅಂಕ, ಎರಡನೇ ಪ್ರಶ್ನೆ ಉತ್ತರ ಸಿದ್ಧ, ಬಂದಿತು ಮತ್ತೆ ಏಳು ಅಂಕ. ಗಂಟೆ ನೋಡಿದೆ, ಕಳೆದಿದ್ದವು ಬರೀ ಹತ್ತು ನಿಮಿಷ, ಬಂದಿತ್ತು ಆಗಲೇ ಹದಿನೈದು ಅಂಕ!

ಮುಂದಿನ ಪ್ರಶ್ನೆಗೆ ಉತ್ತರ ಗೊತ್ತಿಲ್ಲ, ಮುಂದೆ ಪ್ರಶ್ನೆ ಪತ್ರಿಕೆ ಓದುತ್ತಾ ಹೋದೆ, ಓದುತ್ತಲೇ ಇದ್ದೆ. ಮುಗಿಯಿತು ಓದಿ ಪ್ರಶ್ನೆ ಪತ್ರಿಕೆ! ಯಾವುದಕ್ಕೂ ಉತ್ತರ ಗೊತ್ತಿಲ್ಲ! ಪರೀಕ್ಷೆ ಗೋವಿಂದ ಎಂದು ನಿಧಾನವಾಗಿ ಅರ್ಥ ಆಗಲು ಪ್ರಾರಂಭ ಆಯಿತು. ಹಾಗಾದರೆ ಉತ್ತರ ಪತ್ರಿಕೆ ಕೊಟ್ಟು ಹೊರ ನಡೆಯುವುದೇ? ಸಾಧ್ಯವಿಲ್ಲ! ಪರೀಕ್ಷೆಯ ಕೊಠಡಿಯಲ್ಲಿ ಮೊದಲ ಅರ್ಧ ಗಂಟೆ ಕುಳಿತಿರಲೇ ಬೇಕು. ಈಗ ನಿಧಾನಕ್ಕೆ ಪರೀಕ್ಷೆ ಕೊಠಡಿಯಲ್ಲಿ ನಿಟ್ಟುಸಿರಿನ ಶಬ್ದ ಬರಲು ಪ್ರಾರಂಭ ಆಯಿತು. ಆ ಕಡೆ ಈ ಕಡೆ ತಲೆ ಅಲ್ಲಾಡಿಸುತ್ತಾ ನೋಡಿದೆ. ಕಾಣುತ್ತಿತ್ತು ಎಲ್ಲರ ತಲೆಯೂ ಅಲ್ಲಾಡುತಿರುವುದು!.

ಪ್ರತಿಷ್ಠಿತ ಇಂಜನಿಯರಿಂಗ್ ಕಾಲೇಜಿಗೆ ಸೇರಲು ನಾನೇನು ಕಷ್ಟಪಟ್ಟಿರಲಿಲ್ಲ! ಆದರೆ ಇಲ್ಲಿಯವರೆಗೆ ಯಾವ ಪರೀಕ್ಷೆ ಬರೆದಾಗಲೂ ಈ ಅವಸ್ಥೆ ಬಂದಿರಲಿಲ್ಲ. ಪದವಿಯ ಪ್ರಾರಂಭದಲ್ಲೇ ಮುಗ್ಗರಿಸಿ ಬಿದ್ದಿದ್ದೆನಲ್ಲ. ಏನೆಂದು ಹೇಳಲಿ ಮನೆಯಲಿ ಫಲಿತಾಂಶದ ಬಗ್ಗೆ? ಹಾಸ್ಟೆಲ್ ನಲ್ಲಿ ಮಜ ಮಾಡಿ ಕಾಲ ಕಳೆದನೆಂದು ತಿಳಿಯುತ್ತಾರೆಯೇ? ಅಮ್ಮ ಹೇಳುತ್ತಿದ್ದ ಹಾಗೆ ಹಳ್ಳಿಯಲ್ಲಿ ದನ ಕಾಯಲು ಹೋಗುವುದೇ ಹಣೆ ಬರಹವೇ?

ಹಳ್ಳಿಯ ನಾಲ್ಕು ಸಣ್ಣ ಗೋಡೆಯ ಮಧ್ಯೆ ಬೆಳೆದ ನಾನು ಹಾಸ್ಟೆಲಿಗೆ ಹೋದಾಗ ಜೀವನ ಬದಲಾಗದೇ ಇರುವುದೇ? ಸಣ್ಣ ಬಾವಿಯಿಂದ ತೆಗೆದು ಸಮುದ್ರದ ಮಧ್ಯದಲ್ಲಿ ಬಿಟ್ಟಾಗ ಆಗುವ ಅನುಭವ ಆಗಿತ್ತು! ಆದರೂ ಬಿಡದೇ ಅಭ್ಯಾಸ ಮಾಡಿದ್ದೆ! ಎಷ್ಟು ಓದಿದ್ದೆ ಎಂದು ಯಾರು ಕೇಳುತ್ತಾರೆ? ನೂರಕ್ಕೆ ಹದಿನೈದು ಬಂದಿದೆ ಎಂದರೆ ಮನೆಯಲ್ಲಿ ಯಾರು ತಾನೆ ನಂಬುವವರು, ಬೆಳಿಗ್ಗೆ ಮೂರು ಗಂಟೆಗೆ ಎದ್ದು ಓದಿದ್ದೆ ಎಂದು?

ಕೈಯಲ್ಲಿನ ಪೆನ್ನು ಹಿಂದೆ ಮುಂದೆ ತಿರುಗಿಸುತ್ತಾ ಪರೀಕ್ಷೆಯ ಕೊಠಡಿಯಲ್ಲಿ ಕೂತಿದ್ದಂತೆ ಕಳೆಯಿತು ಮೊದಲ ಅರ್ಧ ಗಂಟೆ. ಕೆಲವರು ಆಗಲೇ ಉತ್ತರ ಪತ್ರಿಕೆ ಕೊಟ್ಟು ಪರೀಕ್ಷಾ ಕೊಠಡಿಯಿಂದ ಹೊರಗಡೆಗೆ ಹೊರಟರು. ಗುಸುಗುಸು

ಎಂದು ಕಾರಿಡಾರಿನಲಿ ಆಡುವ ಮಾತುಗಳು ಕಿವಿಗಳಿಗೆ ಬೀಳುತ್ತಿತ್ತು. ಇದೇನು ಪರೀಕ್ಷೆ? ನಾನೇನು ಮಾಡಲಿ ಈಗ? ಹೊರಗೆ ನಡೆಯಲೇ, ಒಳಗೆ ಕುಳಿತಿರಲೇ? ಹಾಸ್ಟೆಲ್ ಗೆ ಹೋಗಿ ಮಾಡುವುದಾದರೂ ಏನು? ಊಟ ದೊರೆಯುವುದು ಹೇಗೂ ಹನ್ನೆರಡು ಗಂಟೆಗೆ.

ಸಮಯ ಕಳೆಯಲು ಮತ್ತೊಮ್ಮೆ ಪ್ರಶ್ನೆಗಳನ್ನು ಬರೆಯಲು ಪ್ರಾರಂಭ ಮಾಡಿದೆ! ಕೆಲವೊಂದು ಪ್ರಶ್ನೆಗೆ ಗೊತ್ತಿತ್ತು ಮೊದಲ ಹೆಜ್ಜೆ, ಮುಂದಿನ ಪ್ರಶ್ನೆಗೆ ಎರಡು ಹೆಜ್ಜೆ, ಹೇಗೋ ತಿಣಕಾಡಿದ ಮೇಲೆ ಬಗೆಹರಿದ ಮೂರನೇ ಪ್ರಶ್ನೆ! ತಲೆಕೆಳಗಾದ ಅನುಭವವಾದರೂ ಬಗೆಹರಿಯದ ಇಂಟೆಗ್ರೇಶನ್. ಯಾರು ಹೇಳಿದರೋ ಗೊತ್ತಿಲ್ಲ, ಇಂಟೆಗ್ರೇಶನ್ ಎಂದರೆ ಒಟ್ಟುಗೂಡಿಸುವುದು ಎಂದು! ಅದು ಇಲ್ಲಿ ಛಿದ್ರಛಿದ್ರಗೊಳಿಸಿದೆ ಕಟ್ಟಿದ ಕನಸಿನ ಗೋಪುರವನ್ನು. ಆದರೂ ನಾನು ಬಿಡಲಿಲ್ಲ. ಕಳೆದು ಕೊಳ್ಳುವುದಕ್ಕೆ ಏನಿದೆ? ಬರೆದೆ ಎಲ್ಲದಕ್ಕೂ ಒಂದೋ, ಎರಡೋ ಸಾಲು. ಗಣಿತ ಅಲ್ಲವೇ? ಗಣಿತದಲ್ಲಿ ಪ್ರತಿ ಹೆಜ್ಜೆಗೂ ಅಂಕಗಳನ್ನು ಕೊಡುತ್ತಾರೆ ಅಲ್ಲವೇ ಎಂದು ಅನಿಸಿತು. ಕೊನೆಗೂ ಹಿಂದಿನ ದಿನ ರಾತ್ರಿ ಓದಿದ ಕೋನಿಕ್ಸ್ ನ ಒಂದೆರಡು ಪ್ರಶ್ನೆಗಳು ಕೈ ಹಿಡಿದವು. ಮುಳುಗುವವನಿಗೆ ಹುಲ್ಲು ಕಡ್ಡಿಯ ಆಸರೆ ಎಂದರೆ ಬಹುಶಃ ಇದೇ ಇರಬೇಕು.

ಆದರೂ ಇನ್ನೂ ಸಮಯವಿದೆ. ಈಗ ಪರೀಕ್ಷಾ ಕೊಠಡಿಯಲ್ಲಿ ನನ್ನ ಉತ್ತರ ಪತ್ರಿಕೆಯ ಮೌಲ್ಯಮಾಪನ ಮಾಡಲು ನಾನೇ ಪ್ರಾರಂಭ ಮಾಡಿದೆ. ಇದಕ್ಕೆ ಒಂದು, ಇದಕ್ಕೆ ಎರಡಾದರೂ ಕೊಡುತ್ತಾರೆ.. ಹೀಗೇ ಮುಂದುವರೆಯಿತು. ಎಲ್ಲಾ ಸೇರಿ ಮೂವತ್ತಮೂರು ಆಯಿತು! ಮತ್ತೆ ಇನ್ನೆರಡು ಪ್ರಶ್ನೆ ಬರೆದೆ, ಉತ್ತರದ ಹುಡುಕಾಟದಲ್ಲಿ. ಇಷ್ಟೆಲ್ಲಾ ಬರೆದಿದ್ದಕ್ಕೆ ಕೊಡಲಾರರೇ ಅರ್ಧ ಅಂಕವನ್ನಾದರೂ ಎಂದೆನಿಸಿತು. ಅಂತೂ ಮೂವತ್ತೈದು ಅಂಕದ ಗುರಿ ತಲುಪಿತು. ಆದರೂ ಸಮಯ ಮುಗಿದಿಲ್ಲ. ಈಗ ಸಮಯ ಮುಗಿಯುವವರೆಗೂ ಕೈಯಲ್ಲಿ ಉತ್ತರ ಪತ್ರಿಕೆ ಹಿಡಿದು ಜಪ ಮಾಡುತ್ತಾ ಕುಳಿತೆ! ಅಂತೂ ಬೆಲ್ಲಾಯಿತು. ಅದುವರೆಗೆ ನೋಡಿದ ಅತಿ ಧೀರ್ಘದ ಮೂರು ಗಂಟೆ ಅಂದರೆ ಅದೇ ಇರಬೇಕು.

ಹಾಸ್ಟೆಲಿನಲ್ಲಿ ಹೇಗಿತ್ತು ವಾತಾವರಣ? ಕಷ್ಟ, ಬುಲ್ ಷಿಟ್... ಇನ್ನೂ ಏನೇನು ಪದಗಳು ಬಂದವು ಹೊರಗೆ? ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ನೀರವ ಮೌನ! ಸಧ್ಯ ಮುಂದಿನ ಪರೀಕ್ಷೆ ರಸಾಯನ ಶಾಸ್ತ್ರ! ಒಂದು ದಿನ ರಜೆ ಬೇರೆ ಇದೆ! ಮುಸುಕು ಹಾಕಿಕೊಂಡು ಕಣ್ಣೀರು ಒರೆಸಿಕೊಂಡು ನಿದ್ದೆ ಮಾಡಲು ವಿಫಲ ಪ್ರಯತ್ನಪಟ್ಟೆ! ಸಂಜೆ ಬೀಚ್ ನಲಿ ಓಡಾಟದಲಿ ಹಿಂದೆ ಸರಿಯಿತು ಗಣಿತದ ಅಲೆ! ತಂದಿತು ಹೊಸ ಅಲೆ ಕಣ್ಣ ಮುಂದೆ ಮಹಾನ್ ರಸಾಯನ ಶಾಸ್ತ್ರ! ಅಂತೂ ಕಳೆಯಿತು ಉಳಿದೆಲ್ಲಾ ಪರೀಕ್ಷೆ ಯಾವುದೇ ಆತಂಕ ಇಲ್ಲದೇ!!

ರಜೆಗೆ ಊರಿಗೆ ಹೊರಟೆ. ರಜೆ ಬಂದರೆ ಎಷ್ಟೆಲ್ಲ ಸಂತೋಷಪಡುತ್ತಿದ್ದೆವಲ್ಲಾ, ಈಗ ಹೇಗೆ ಸಂತೋಷಪಡಲಿ. ಹಾಸ್ಟಲ್ ಊಟ ಮಾಡಿ ಸೊರಗಿದ್ದಾನೆ ಎಂದು ಅಮ್ಮನ ಉಪಚಾರ ಸಾಗಿತ್ತು. ಬಂದ ನೆಂಟರ ಎದುರಿಗೆ ಇಂಜನೀಯರ್ ಓದುತ್ತಿದ್ದಾನೆ ಎಂದು ಅಮ್ಮ ಹೆಮ್ಮೆಯಿಂದ ಹೇಳುತ್ತಿದ್ದರೆ ಮನಸ್ಸಿನ ಮೂಲೆಯಲ್ಲಿ ಕುಳಿತಿದ್ದ ಅಳುಕು ಒಂದು ಕಡೆ.

ಊರಿನಿಂದ ರಜೆ ಮುಗಿಸಿ ಕಾಲೇಜಿಗೆ ಬರುವಾಗ ಪರೀಕ್ಷೆ ಫಲಿತಾಂಶ ಬಂದಿತ್ತು. ಅರ್ಧ, ಮುಕ್ಕಾಲು, ಒಂದು ಎಲ್ಲಾ ಸೇರಿ ಬರೆದಿದ್ದು 35 ಅಂಕಗಳಿಗೆ. ಆದರೂ ಬಂದಿತ್ತು 36. ಅಂತೂ ದನ ಕಾಯುವುದಕ್ಕೆ ಹೋಗುವುದು ತಪ್ಪಿತ್ತು! ಮನೆಗೆ ಕಾಗದ ಬರೆದೆ ನನಗೆ ಗಣಿತದಲಿ 60 ಎಂದು! ಸುಳ್ಳೇನು ಹೇಳಿಲ್ಲ ಬಿಡಿ 36ಕ್ಕೆ 24 ಇಂಟರ್ನಲ್ ಅಂಕ ಸೇರಿಸಿದರೆ ಆಯಿತಲ್ಲ 60. ಹೇಳಲಿಲ್ಲ ಮನೆಯಲ್ಲಿ ಅದು 125ಕ್ಕೆ ಎಂದು!!!

ಬಂದಿತ್ತು ಬೇಕಾದಷ್ಟು ಜನಕ್ಕೆ ಎಂಬತ್ತು, ತೊಂಬತ್ತು, ನೂರು ಕೂಡ! ಆಗ ಅರ್ಥವಾಯಿತು ನನ್ನ ಭಾಷೆಯಲ್ಲಿ ಕಷ್ಟ ಎಂದರೆ 35 ಬರುವುದೇ ಸಂದೇಹ, ಅವರ ಭಾಷೆಯಲಿ ಕಷ್ಟ ಎಂದರೆ ನೂರಕ್ಕೆ ಒಂದೆರಡು ಅಂಕ ಕಡಿಮೆ ಆಗುವ ಸಾಧ್ಯತೆ ಇದೆ ಎಂದು!

ಒಳ್ಳೆಯದೇ ಆಯಿತು ಬಿಡಿ. ಎಷ್ಟೋ ಕಠಿಣ ಪರೀಕ್ಷೆಗಳನ್ನು ಎದುರಿಸುವ ಧೈರ್ಯ ಆ ಒಂದು ಪರೀಕ್ಷೆಯಿಂದ ಬಂದಿತು. ಅದಕ್ಕೆ ನಾನು ಯಾವಾಗಲೂ ಕೃತಜ್ಞ ಈ ಗಣಿತಕ್ಕೆ.

"ಶಾವಾತ್ಮ ಪದಗಳು"

ಆಧ್ಯಾತ್ಮ ಕಿರಣ

– ಶಾಂತಿವಾಸು

ಗೋಡೆಯೊಳಗಿನ ಕತ್ತಲಿನಂಧಕಾರಕೆ, ಕಿಂಡಿಹಾಯ್ವ ಕಿರಣ ತರುವುದು ಚೆಲ್ಲಾಟವಾಡುವ ಬೆಳಕು....
ಹಗಲಿಹುದ ನೀನರಿಯಲು, ನಿನ್ನ ಮನೆಯ ನೀನೇ ತೆರೆದು ನೋಡಬೇಕಿದೆ ಗಾಂಭೀರ್ಯದ ಹೊಳಹು....

ಆಕ್ರಮಿಸಿಹ ಕ್ರಿಮಿಕೀಟಗಳ ಹೊಸಕುವ ಭರವಸೆಯ ತರುವಾಗ ತೆರೆದುಬಿಡು ಹೆಬ್ಬಾಗಿಲ, ಒಳಬರಲಿ ರವಿಕಿರಣ....
ತೊಡೆದು ಹೋಗಲಿ ತಮದ ನಶೆ, ಹೊರ ನಿಂತ ಬೆಳಕ ಹರಿದಾವರಿಸಲದುವೇ ಬದುಕಿಗಾಶಾಕಿರಣ....

ನೀನಟ್ಟಲು ಹೊರಗೋಡುವ ದಿವ್ಯ ಬೆಳಕು, ಮನವ ತೆರೆದು ಕರೆಯಲೋಡೋಡಿ ಬರಲು ಕಾದಿಹುದು..
ಆತ್ಮದೊಳಗಣ ಕತ್ತಲ ಹೊರಗಟ್ಟಲು, ಆಧ್ಯಾತ್ಮವೆಂಬ ಭವ್ಯ ಕಿರಣದೊಳಹು ಪ್ರಭೆ ನೀಡುವುದು...

ಆಧುನಿಕ ಸಮಾಜದ ಶೈಕ್ಷಣಿಕ ಪರಿಸರ – ಒಂದು ಚಿಂತನೆ

- ಎಲ್. ಗಿರಿಜಾ ರಾಜ್

ಶೈಕ್ಷಣಿಕ ಇತಿಹಾಸದ ಪುಟಗಳನ್ನು ತಿರುವಿದರೆ ವೇದ ಕಾಲದಲ್ಲಿ ಆಧ್ಯಾತ್ಮ ಸುಖ ಶಿಕ್ಷಣದ ಪರಮ ಗುರಿಯಾಗಿದ್ದು, ಕ್ರಮೇಣ ಲೌಕಿಕ ಅಥವಾ ಭೌತಿಕ ಸುಖವೇ ಶಿಕ್ಷಣದ ಗುರಿಯಾದುದು ಅರಿವಿಗೆ ಬರುತ್ತದೆ. ಈಗ ಅದು ಅತಿರೇಕಕ್ಕೇರಿ ಶಿಕ್ಷಣದ ಆದರ್ಶಗಳನ್ನು ಗಾಳಿಗೆ ತೂರಿಬಿಟ್ಟಿರುವುದರಿಂದ ಶಿಕ್ಷಣ ಅನೇಕ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವುದನ್ನು ನೋಡುತ್ತಿದ್ದೇವೆ. ಬೆರಳಿನಿಂದ ಮರಳಿನ ಮೇಲೆ ಅಕ್ಷರಗಳನ್ನು ಮೂಡಿಸುತ್ತಿದ್ದ ವಿದ್ಯಾರ್ಥಿ ಈಗ ಕಂಪ್ಯೂಟರಿನ ಮುಂದೆ ಕುಳಿತು ಲೀಲಾಜಾಲವಾಗಿ ಮೌಸ್ ಆಡಿಸುತ್ತ ವಿಶ್ವದ ವಿದ್ಯಮಾನಗಳನ್ನೆಲ್ಲ ಕುಳಿತಲ್ಲೇ ಜಾಲಾಡಬಲ್ಲ ಚಾಣಾಕ್ಷ! ಅಂದು ಅವನ ಭವಿಷ್ಯಕ್ಕೆ ಉತ್ತಮ ತಳಹದಿ ಹಾಕಿದ ಮಹಾನುಭಾವರನ್ನು ಮರೆಯುವ ಹಾಗಿಲ್ಲ. ಬೇರು ಗಟ್ಟಿಯಿದ್ದರೆ ತಾನೆ ಮರ ಟಿಸಿಲೊಡೆದು ಹೂ ಹಣ್ಣು ಬಿಟ್ಟು ದಿಕ್ಕುದಿಕ್ಕಿಗೆ ರೆಂಬೆ ಕೊಂಬೆ ಚಾಚಲು ಸಾಧ್ಯ!

ಇಂದು ವಿಶ್ವ ಪ್ರಗತಿಯ ಕಡೆಗೆ ದಾಪುಗಾಲು ಹಾಕುತ್ತ ನವ ವಿಕಾಸದೆಡೆಗೆ ಮುಖ ಮಾಡಿದೆ. ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಹೊಸ ಸಂಶೋಧನೆಯಾಗಿರುವಂತೆ ಶಿಕ್ಷಣ ಕ್ಷೇತ್ರದಲ್ಲೂ ಅಗಿದೆ. ಅದಕ್ಕನುಗುಣವಾಗಿ ಹೊಸ ಶಿಕ್ಷಣ ಪದ್ಧತಿಗಳು, ಶಿಕ್ಷಣ ನೀತಿಗಳು ಬದಲಾವಣೆಯಾಗುತ್ತ ಬಂದಿವೆ. ಜಾಗತೀಕರಣವು ಇಡೀ ವಿಶ್ವವನ್ನು ಪೈಪೋಟಿಯ ಕಣವನ್ನಾಗಿ ಮಾರ್ಪಡಿಸಿದೆ. ಬದುಕಿನ ಎಲ್ಲ ಕ್ಷೇತ್ರಗಳ ಮೇಲೂ ಬಿಸಿ ತಾಗಿಸಿ ತನ್ನ ಜಾಲದಲ್ಲಿ ಬಂಧಿಸಿದೆ. ಈಗ ವಿದ್ಯಾರ್ಥಿ ತನ್ನ ಪಾಡಿಗೆ ತಾನು ಎಲ್ಲೋ ನಾಲ್ಕು ಗೋಡೆಗಳ ನಡುವೆ ಹುದುಗಿಕೊಂಡು ಒಂದಷ್ಟು ಪುಸ್ತಕಗಳನ್ನು ತಿರುವಿಹಾಕಿ ತಾನು ತಿಳಿದದ್ದೇ ದೊಡ್ಡದು ಎಂದು ಕೂಡುವ ಹಾಗಿಲ್ಲ. ಅವನು ವಿಶ್ವಕ್ಕೇ ಮುಖಾಮುಖಿಯಾಗಿ ನಿಂತಿದ್ದಾನೆ. ಆತನು ಜಾಗತಿಕ ಮಟ್ಟದಲ್ಲಿ ವಿಶ್ವದ ಪ್ರತಿಭಾವಂತರೊಡನೆ ಸ್ಪರ್ಧಿಸಿ ಗಟ್ಟಿ ಕಾಳಾಗಿ ಹೊರಹೊಮ್ಮಬೇಕಾಗಿದೆ. ಕಂಪ್ಯೂಟರೀಕರಣ ವೈಜ್ಞಾನಿಕ ಕ್ಷೇತ್ರದ ವಿಸ್ಮಯವೆನಿಸಿದೆ. ಅತ್ಯಂತ ಮುಂದುವರೆದ ವೈಜ್ಞಾನಿಕತೆಯಿಂದಾಗಿ ಕ್ಷಣಾರ್ಧದಲ್ಲಿ ಎಲ್ಲಿಂದೆಲ್ಲಿಗೆ ಬೇಕಾದರೂ ಸಂಪರ್ಕ ಸಾಧಿಸಬಹುದಾಗಿದೆ. ಅನೇಕ ವಿದ್ಯಾರ್ಥಿಗಳು ವಿಶ್ವ ಮಟ್ಟದಲ್ಲಿ ಪ್ರತಿಭಾ ಪುರಸ್ಕಾರಗಳನ್ನು ಪಡೆದು ದೇಶದ ಕೀರ್ತಿ ಹೆಚ್ಚಿಸಿದ್ದಾರೆ. ಮನುಷ್ಯ ವಿಜ್ಞಾನದ ಬಲದಿಂದ ಜೀವನಾವಶ್ಯಕ ವಸ್ತುಗಳನ್ನು ಒದಗಿಸಿಕೊಳ್ಳುವುದು ಮಾತ್ರವಲ್ಲದೆ, ಹೆಚ್ಚಿನ ಲೌಕಿಕ ಸುಖ ದಕ್ಕಿಸಿಕೊಂಡು ಬಾಳುತ್ತಿದ್ದಾನೆ. ಆದರೂ ಅವನ ಬೇಕುಗಳಿನ್ನೂ ಮುಗಿದಿಲ್ಲ.

"ಎಲ್ಲ ಇದೆ ಆದರೆ ಏನೂ ಇಲ್ಲ" ಎಂಬ ಹಂತಕ್ಕೆ ಬಂದು ರಿಕ್ತಹಸ್ತರಾಗಿ ನಿಂತಿದ್ದೇವೆ. ಏಕೆ? ಏನು ಓದಿದರೇನು? ಏನು ಮಾಡಿದರೇನು? ಮನುಷ್ಯನೆನಿಸಿಕೊಳ್ಳುವುದಕ್ಕೆ ಮೂಲಭೂತವಾಗಿ ಬೇಕಾಗಿರುವ ಅಂತಃಕರಣ ಆತ್ಮ ಶುದ್ಧಿಯನ್ನೇ ಕಳೆದುಕೊಂಡಿದ್ದಾನೆ. "Education without character is a social crime" ಎಂಬ ಮಹಾತ್ಮನ ಮಾತುಗಳು ಇತ್ತೀಚೆಗಂತೂ ಮತ್ತೆಮತ್ತೆ ನಾವು ಏನಾಗಿದ್ದೇವೆ ಎಂಬುದರ ಕಡೆಗೆ ಚಿಂತನೆ ನಡೆಸಲು ಪ್ರಚೋದಿಸುತ್ತಲೇ ಇರುತ್ತದೆ. "ಮಾನವನಲ್ಲಿ ಮೊದಲೇ ಸುಪ್ತವಾಗಿ ಅಡಗಿರುವ ಪರಿಪೂರ್ಣತೆಯನ್ನು ಹೊರಹೊಮ್ಮಿಸಿ ಪ್ರಕಾಶಿಸುವಂತೆ ಮಾಡುವುದೇ ಶಿಕ್ಷಣ" ಎನ್ನುತ್ತಾರೆ ಶ್ರೀ ವಿವೇಕಾನಂದರು. ಎಂದಿಲ್ಲದಷ್ಟು ಬಾಹ್ಯಾಡಂಬರಗಳ ಸೆಳೆತ, ಗೊಂದಲ, ಅಶಾಂತಿ, ಆಧ್ಯಾತ್ಮಿಕ ತುಡಿತವಿಲ್ಲದಿರುವಿಕೆ, ಅರ್ಥಗಳನ್ನು ಕಳೆದುಕೊಂಡಿರುವ ಮನುಷ್ಯ ಸಂಬಂಧಗಳು ಶಿಕ್ಷಣದ

ವ್ಯಾಪಾರೀಕರಣ, ಬಡ ವಿದ್ಯಾರ್ಥಿಗಳ ಆಕ್ರೋಶ, ಮನುಷ್ಯ ಮನುಷ್ಯನನ್ನು ಎಂದಿಗಿಂತ ಅತಿಯಾಗಿ ಪರಿಪರಿಯಲ್ಲಿ ಹಿಂಸಿಸುವ, ಕೊಲ್ಲುವ ಕಠೋರ ಸನ್ನಿವೇಶಗಳು, ಇಂಥ ವಾತಾವರಣದಲ್ಲಿ ಬೆಳೆಯುತ್ತಿರುವ ಮಕ್ಕಳ ಭವಿಷ್ಯದ ಬಗ್ಗೆ ಆತಂಕ ಹುಟ್ಟಿಸುತ್ತದೆ. ಪರಿಸರದ ಪ್ರಭಾವದಿಂದ ಬಾಲಾಪರಾಧಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿರುವುದು ದುರದೃಷ್ಟಕರ.

ಓದುವ ವಯಸಿನಲ್ಲಿ ವೈಭೋಗಗಳ ಕಡೆ ಕೈಚಾಚಿ ಎಲ್ಲವನ್ನೂ ಅನುವಭವಿಸಿಬಿಡುವ ಆತುರ ಅನೇಕ ವಿದ್ಯಾರ್ಥಿಗಳ ದಿಕ್ಕು ತಪ್ಪಿಸಿದೆ. ಅದಕ್ಕೆ ಅವರೇ ಸಂಪೂರ್ಣ ಹೊಣೆಗಾರರಲ್ಲ. "ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದಿರಯ್ಯ, ಪಶುವೇನ ಬಲ್ಲುದು ಹಸುರೆಂದೆಳಸುವುದು" ಎಂದು ಹಿರಿಯರ ಕಡೆ ಅವರು ಬಾಣ ತಿರುಗಿಸಿದರೆ ತಪ್ಪೇನಿದೆ?

ವರ್ತಮಾನದ ವ್ಯಂಗ್ಯವೆಂದರೆ ಶಿಶು ಹೊಟ್ಟೆಯಲ್ಲಿರುವಾಗಲೇ ಅಥವಾ ಹುಟ್ಟಿದಾರಭ್ಯದಿಂದಲೇ ಅದರ ಶಿಕ್ಷಣದ ಬಗ್ಗೆ ತಾಯ್ತಂದೆಯರು ಆತಂಕಕ್ಕೀಡಾಗುತ್ತಿದ್ದಾರೆ. ದುಬಾರಿ ಶಿಕ್ಷಣ ಬಡ ತಾಯ್ತಂದೆಯರಿಗೆ ನುಂಗಲಾರದ ತುತ್ತಾದರೂ, ಹೇಗಾದರೂ ಕೂಲಿನಾಲಿ ಮಾಡಿ ನಮ್ಮ ಮಕ್ಕಳು ಒಳ್ಳೆ ಕಾನ್ವೆಂಟುಗಳಲ್ಲೇ ಕಲಿಯಬೇಕೆಂದು ಹೆಣಗುತ್ತಾರೆ. ಶಿಕ್ಷಣ ನೀಡುವುದು ಹಣ ಸಂಪಾದಿಸುವ ದಂಧೆಯಾಗಿ ಪರಿಣಮಿಸಿರುವುದು ದುರದೃಷ್ಟಕರ!

ನಮ್ಮನ್ನು ಕಂಗೆಡಿಸುತ್ತಿರುವ ಇನ್ನೊಂದು ಅಂಶವೆಂದರೆ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ, ವ್ಯಾಮೋಹ! ಆ ಸಂಸ್ಕೃತಿಯಿಂದ, ಅವರ ಜೀವನ ಕ್ರಮದಿಂದ ಕಲಿತುಕೊಳ್ಳುವ ಉತ್ತಮ ಅಂಶಗಳು ಅನೇಕ ಇದ್ದರೂ ನಮಗೆ ಒಗ್ಗದ, ಮುಖ್ಯವಾಗಿ ವೇಷಭೂಷಣ, ಆಡಂಬರದ ಜೀವನ ಶೈಲಿ, ಆಹಾರ ಪದ್ಧತಿಯನ್ನು ಅನುಕರಿಸುತ್ತ ಮಾತೃಭಾಷೆಯನ್ನು ನಿಂದಿಸುವಷ್ಟು ಪರಭಾಷಾ ವ್ಯಾಮೋಹಿಗಳಾಗಿರುವುದು ದುರದೃಷ್ಟಕರ. ತಮ್ಮತನವನ್ನು ಮರೆತು ಭ್ರಮಾದೀನರಾಗಿ ಕನಸುಗಳಲ್ಲೇ ಜೀವಿಸುವ ಸ್ಥಿತಿಗೆ ದೂಡಿದೆ ಈ ವ್ಯಾಮೋಹ!

ಪಿ.ಯು.ಸಿ. (ಪದವಿ ಪೂರ್ವ ಶಿಕ್ಷಣ) ಶೈಕ್ಷಣಿಕ ಜೀವನದ ಮಹತ್ವದ ತಿರುವು. ತಮ್ಮ ಉಜ್ವಲ ಭವಿಷ್ಯ ರೂಪಿಸುವ ವೃತ್ತಿ ಆರಿಸಲು ಯಾವ ಕೋರ್ಸುಗಳನ್ನು ಆಯ್ಕೆ ಮಾಡಬೇಕೆಂಬ ಗಂಭೀರ ಚಿಂತನೆ ವಿದ್ಯಾರ್ಥಿಯದು. ವಿದ್ಯಾರ್ಥಿಗಳ ನಿಜವಾದ ಬುದ್ಧಿವಂತಿಕೆ, ಸಾಮರ್ಥ್ಯ ಕಂಡುಹಿಡಿಯಲು ರೂಪಿತವಾದ ಸಿಇಟಿ ಮಾನದಂಡವಾಗಿತ್ತು. ಉತ್ತಮ ಶೈಕ್ಷಣಿಕ ಪದ್ಧತಿಯಾಗಿ ಹೊರಹೊಮ್ಮಿತ್ತು. ಆದರೆ ಈಗ ಅದರಲ್ಲೂ ಅತೃಪ್ತಿಯ ತರಂಗಗಳು ಏಳುತ್ತಿವೆ. ನಂತರ ವೈದ್ಯಕೀಯ, ಇಂಜಿನಿಯರಿಂಗ್ ಸೀಟುಗಳನ್ನು ಹಂಚುವ ಪ್ರಕ್ರಿಯೆ ಪಾರದರ್ಶಕತೆ ಇಲ್ಲದೆ ಗೊಂದಲಮಯವಾಗಿದೆ

ವಿದ್ಯೆಯ ಮಹತ್ವವನ್ನು ಸೊಗಸಾಗಿ ಹೇಳುವ ಒಂದು ಶ್ಲೋಕವೊಂದು ಹೀಗಿದೆ:

"ನ ಚೋರ ಹಾರ್ಯಂ, ನ ಚ ರಾಜ ಹಾರ್ಯಂ, ನ ಭ್ರಾತೃ ಭಾಜ್ಯಂ, ನ ಚ ಭಾರಕಾರಿ ವ್ಯಯೇ ಕೃತೇ ವರ್ಧತ ಏವ ನಿತ್ಯಂ, ವಿದ್ಯಾಧನ ಸರ್ವಧನ ಪ್ರಧಾನಂ"

"ವಿದ್ಯಾಧನವು ಐಶ್ವರ್ಯಗಳಲೆಲ್ಲ ಮುಖ್ಯವಾದುದು. ಅದನ್ನು ಕಳ್ಳನು ಅಪಹರಿಸಲಾರ, ರಾಜನು ವಶಪಡಿಸಿಕೊಳ್ಳಲಾರ, ಸೋದರರು ಭಾಗ ಮಾಡಿಕೊಳ್ಳಲಾರರು. ಅದು ಭಾರವೆನಿಸುವುದೂ ಇಲ್ಲ. ದಿನದಿನವೂ ಅದನ್ನು ವೆಚ್ಚಮಾಡಿದರೂ ಅದು ಹೆಚ್ಚುತ್ತಲೇ ಇರುತ್ತದೆ"

ಗಾನಗಂಧರ್ವ ಎಸ್‌ಪಿಬಿ - ಕಾವ್ಯ ನಮನ

– ಮನೋಹಂಸ

ಭಾರತ ದೇಶದ ಹೆಮ್ಮೆಯ ಪುತ್ರ ಎಸ್‌ಪಿ ಬಾಲಸುಬ್ರಹ್ಮಣ್ಯ
ಇವರಾಗಿದ್ದರು ಎಲ್ಲಾ ರೀತಿಯ ಗಾಯನಗಳಲಿ ಅಗ್ರಗಣ್ಯ
ಸ್ವಂತ ಪರಿಶ್ರಮದಿಂದ ಪಡೆದಿದ್ದರು ಗಾಯನದಿ ನೈಪುಣ್ಯ
ಇವರ ಕನ್ನಡ ಹಾಡುಗಳ ಕೇಳುವುದು ಕನ್ನಡಿಗರ ಪುಣ್ಯ

ಹುಟ್ಟಿದ್ದು ಆಂಧ್ರದ ನೆಲ್ಲೂರು, ಆಗಬೇಕಿತ್ತು ಇಂಜಿನಿಯರು
ಆದರೆ ಜೋರಾಗಿ ನಡೆದಿತ್ತು ಸಂಗೀತದ ತಯಾರು
ಮೊದಲ ಅವಕಾಶ ಕೊಟ್ಟರು ಎಸ್‌ಪಿ ಕೋದಂಡಪಾಣಿಯವರು
ಇಲ್ಲಿಂದ ಶುರುವಾಯಿತು ಅವರ ಗಾಯನ ಪಯಣದ ತೇರು

ಕನ್ನಡ, ತೆಲುಗು, ತಮಿಳು ಚಿತ್ರಗೀತೆಗಳ ಗಾಯನದಲಿ ಇವರಾದರು ಪ್ರವೀಣ
ಸಾವಿತ್ರಿಯ ಮದುವೆಯಾಗಿ ಪಡೆದರು ಮಕ್ಕಳಾಗಿ ಪಲ್ಲವಿ ಹಾಗೂ ಚರಣ
ಹಿಂದಿ ಚಿತ್ರಗೀತೆಗಳ ಕಡೆಗೂ ಸಾಗಿತು ಇವರ ಪಯಣ
ಇವರು ಹಾಡಿದ ಮಧುರ ಗೀತೆಗಳು ಪ್ರೇಕ್ಷಕರಿಗೆ ಇಂದಿಗೂ ಸಿಹಿ ಹೂರಣ

ನವರಸಗಳಲ್ಲೂ ಹಾಡುತ್ತಿದ್ದ ಇವರು ಗಾಯನ ಸಾಗರದ ಅನರ್ಘ್ಯ ರತ್ನ
ನಟನೆ, ಸಂಗೀತ ಸಂಯೋಜನೆಗಳಲ್ಲಿಯೂ ಇತ್ತು ಇವರ ಪ್ರಯತ್ನ
ಭಕ್ತಿ, ಭಾವಗೀತೆಗಳನ್ನೂ ಹಾಡಿರುವ ಇವರದಾಗಿದೆ ಗಿನ್ನೆಸ್ ದಾಖಲೆ
ಪುಟ್ಟ, ಯುವ ಪ್ರತಿಭೆಗಳಿಗೆ ಮಾರ್ಗದರ್ಶನ ನೀಡುತ್ತಿದ್ದ ರೀತಿ ಅಪೂರ್ವ ಕಲೆ

ರಾಷ್ಟ್ರ, ರಾಜ್ಯ ಪ್ರಶಸ್ತಿಗಳ ಪಡೆದ ಇವರು ಸದಾ ಹಸನ್ಮುಖಿ
ಕಿರುತೆರೆ ಕಾರ್ಯಕ್ರಮಗಳಲ್ಲೂ ಇವರಾಗುತ್ತಿದ್ದರು ಕಲಾವಿದರಿಗೆ ಮುಖಾಮುಖಿ
ಪರದೆ ಮೇಲಿನ ನಟರಿಗೆ ಇವರಾಗಿದ್ದರು ಗಾಯನದ ಆತ್ಮ
ಕನ್ನಡ ನಾಡಿನಲಿ ಮತ್ತೆ ಅವರು ಜನಿಸಿ ಬರುವಂತೆ ಮಾಡಲಿ ಆ ಪರಮಾತ್ಮ

(೨೫.೦೯.೨೦೨೦ರಂದು ನಮ್ಮನ್ನಗಲಿದ ವಿಶ್ವವಿಖ್ಯಾತ ಹಿನ್ನೆಲೆ ಗಾಯಕ ಎಸ್‌ಪಿಬಿಯವರಿಗೊಂದು ಕಾವ್ಯ ನಮನ)

ಅಮೂರ್ ಫಾಲ್ಕನ್

– ಗುರುರಾಜ ಶಾಸ್ತ್ರಿ

ಇಸವಿ 2012. ನಾಗಾಲ್ಯಾಂಡಿನ ನಾಲ್ಕು ಚಿಕ್ಕ ಹಳ್ಳಿಗಳಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚಿನ ಪಕ್ಷಿಗಳ ಮಾರಣಹೋಮ. ಯಾವುದೀ ಪಕ್ಷಿ ಯಾರಿಗೂ ಗೊತ್ತಿಲ್ಲ. ಆದರೆ ಮಾರ್ಕೆಟ್ಟಿನಲ್ಲಂತೂ ಕೋಳಿಗಿಂತ ಹೆಚ್ಚಾಗಿ ಮಾರಾಟವಾಗುತ್ತಿದೆ ಈ ಪಕ್ಷಿಗಳ ಮೃತದೇಹ. ದೇಶದ ಹಾಗೂ ಹೊರದೇಶದ ಪಕ್ಷಿ ಪ್ರಿಯರ ಕಣ್ಣು ಕೆಂಪಾಗಿಸಿತ್ತು ಈ ಹಳ್ಳಿ ಜನರ ವರ್ತನೆ. ಹೀಗೆ ಹಳ್ಳಿಗರ ಕ್ರೌರ್ಯಕ್ಕೆ ತುತ್ತಾಗುತ್ತಿದ್ದ ಪಕ್ಷಿಯೇ ಅಮೂರ್ ಫಾಲ್ಕನ್.



ಪ್ರತಿ ವರ್ಷ ಅಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ಹಾರಿಬರುವ ಈ ಪಕ್ಷಿಗಳು ನಾಗಾಲ್ಯಾಂಡಿನ ಪಂಕ್ತಿ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಒಂದೆರೆಡು ದಿನ ನೆಲೆಸಿ ಅಲ್ಲಿಂದ ಬೇರೆಲ್ಲಿಗೋ ಹಾರಿಹೋಗುತ್ತಿದ್ದವು. ಗುಂಪಿನಲ್ಲಿ ಹಾರುವ ಪಕ್ಷಿಗಳ ಸಂಖ್ಯೆ ಎಷ್ಟಿರುತ್ತದೆಂದರೆ ಇವು ಹಾರುವಾಗ ಮೇಲಿನ ಆಕಾಶವೇ ಕಾಣುವುದಿಲ್ಲ ಎಂದರೆ ಅತಿಶಯೋಕ್ತಿಯೇನಲ್ಲ. ಸುಮಾರು ನಾಲ್ಕರಿಂದ ಐದು ಲಕ್ಷ ಪಕ್ಷಿಗಳು ಪ್ರತಿ ದಿನ ವಲಸೆ ಹೋಗಲು ಪ್ರಾರಂಭಿಸುತ್ತದೆ.

ಇದನ್ನು ಕಂಡುಕೊಂಡ ಪಂಕ್ತಿ ಹಳ್ಳಿಯ ಜನರು ಈ ಪಕ್ಷಿಗಳನ್ನು ಕೊಲ್ಲಲು ಪ್ರಾರಂಭಿಸಿದರು. ಆಕಾಶಕ್ಕೆ ಗುಂಡು ಹಾರಿಸಿದರೆ ಸಾಕು ಗುರಿ ಇಡುವ ಅವಶ್ಯಕತೆಯೇ ಇಲ್ಲ ಮತ್ತು ಒಂದು ಗುಂಡೂ ವ್ಯರ್ಥವಾಗುವುದಿಲ್ಲ. ಕೆಲವರು ಇವು ತಂಗಲು ಬರುತ್ತಿದ್ದ ಕೆರೆಗಳ ಹತ್ತಿರ ಮರದಿಂದ ಮರಕ್ಕೆ ದೊಡ್ಡ ಬಲೆಗಳನ್ನು ಕಟ್ಟಿ ಹಿಡಿಯಲು ಪ್ರಾರಂಭಿಸಿದರು. ಮೊದಮೊದಲು ತಮ್ಮ ಊಟಕ್ಕಾಗಿ ಮಾತ್ರ ಕೊಲ್ಲುತ್ತಿದ್ದವರು ನಂತರ ಇದನ್ನು ಕೊಂದು ಮಾರುಕಟ್ಟೆಯಲ್ಲಿ ಮಾರಲೂ ಪ್ರಾರಂಭಿಸಿದರು. ಆಗಲೇ ಶುರುವಾಗಿದ್ದು ಲಕ್ಷಾಂತರ ಅಮೂರ್ ಫಾಲ್ಕನ್‌ಗಳ ಮಾರಣಹೋಮ.

ಪ್ರಕೃತಿ ಪ್ರಿಯರು, ಪಕ್ಷಿ ಪ್ರಿಯರು, ಟಿವಿ ವಾಹಿನಿಗಳು, ಅರಣ್ಯ ಇಲಾಖೆ, ಎನ್‌ಜಿಓಗಳು ಹೀಗೆ ಹಲವಾರು ಸಂಸ್ಥೆಗಳು ಈ ಮಾರಣಹೋಮವನ್ನು ನಿಲ್ಲಿಸಬೇಕೆಂದು ನಿರ್ಧರಿಸಿದರು. ಸರ್ಕಾರಕ್ಕೆ ಇದರ ಬಗ್ಗೆ ಮನವಿಯನ್ನೂ ಮಾಡಿದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಸರ್ಕಾರದ ಮೇಲೆ ಈ ಕ್ರೌರ್ಯವನ್ನು ತಡೆಗಟ್ಟಲು ಒತ್ತಡ ತಂದರು. ಸರ್ಕಾರ ಈ ಎಲ್ಲಾ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡ ಒಂದು ಸಮಿತಿ ರಚಿಸಿ ತಕ್ಷಣವೇ ಕಾರ್ಯೋನ್ಮುಖರಾಗಲು ಸೂಚನೆ ನೀಡಿತು.

ಸಮಿತಿಯ ಸದಸ್ಯರು ಪಂಕ್ತಿ ಹಳ್ಳಿಗೆ ಹೋದರೆ ಆ ಹಳ್ಳಿಜನರು ಇವರ ಮಾತು ಕೇಳುವ ಸ್ಥಿತಿಯಲ್ಲಿರಲಿಲ್ಲ. ಪ್ರತಿ ವರ್ಷ ನಮ್ಮ ಹಳ್ಳಿಗೆ ಬರುವ ಈ ಪಕ್ಷಿಗಳು ದೇವರು ನಮಗೆ ಕಳಿಸಿಕೊಟ್ಟಿರುವ ಆಹಾರ ಎಂದು ತಿಳಿಸಿದರು. ಕೆಲವು ಸಮಿತಿಯ ಸದಸ್ಯರು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಶಾಲೆಗಳಿಗೆ ಹೋಗಿ ಅಲ್ಲಿನ ಮಕ್ಕಳಿಗೆ ಈ ಪಕ್ಷಿಗಳ ಬಗ್ಗೆ ತಿಳಿಸಿ ಅದನ್ನು ಕೊಲ್ಲುವುದು ಸರಿಯಲ್ಲ ಎಂದು ನೀತಿ ಪಾಠ ಹೇಳಿದರು. ಸ್ವಲ್ಪಮಟ್ಟಿಗೆ ಈ ಕೆಲಸ ಫಲಕಾರಿಯಾಯಿತು. ಕೆಲವು ಮಕ್ಕಳು ತಂದೆ ತಾಯಿಯ ಹತ್ತಿರ ಹೋಗಿ ಹಠ ಮಾಡಿದ್ದರಿಂದ ಅವರು ಇನ್ನು ಮುಂದೆ ಈ ಪಕ್ಷಿಗಳನ್ನು ಕೊಲ್ಲುವುದಿಲ್ಲ ಎಂದು ಮಕ್ಕಳ ತಲೆಯ ಮೇಲೆ ಕೈ ಇಟ್ಟು ಪ್ರಮಾಣ ಮಾಡಿದರು.

ಅಲ್ಲಿನ ಅರಣ್ಯ ಅಧಿಕಾರಿಗೆ ತಿಳಿದದ್ದೇನೆಂದರೆ, ಈ ಹಳ್ಳಿ ಜನರು ಪ್ರತಿ ಭಾನುವಾರ ಪ್ರಾರ್ಥನೆಗಾಗಿ ಚರ್ಚ್‌ಗೆ ಹೋಗುತ್ತಾರೆ. ಅಲ್ಲಿಯ ಪಾದ್ರಿಯ ಮಾತನ್ನು ಈ ಹಳ್ಳಿ ಜನರು ಕೇಳುತ್ತಾರೆ ಎಂದು. ಸಮಿತಿಯ ಸದಸ್ಯರು ಪಾದ್ರಿಯ ಬಳಿ ಹೋಗಿ ತಮ್ಮ ಮನವಿಯನ್ನು ಮುಂದಿಟ್ಟರು. ಭಾನುವಾರ ಪ್ರಾರ್ಥನೆಯ ನಂತರ ನೀವೇ ಇಲ್ಲಿ ಬಂದು ಮಾತನಾಡಿ ತಿಳಿಸಿ, ನಾನು ನಿಮ್ಮೊಂದಿಗೆ ಇರುತ್ತೇನೆ ಎಂದು ಪಾದ್ರಿ ತಿಳಿಸಿದರು. ಮುಂದಿನ ಭಾನುವಾರ ಸಮಿತಿಯ ಸದಸ್ಯರು ಮಾತನಾಡಿದ ನಂತರ ಪಾದ್ರಿಯವರು ಹಳ್ಳಿ ಜನರಿಗೆ ಮನವಿ ಮಾಡಿಕೊಂಡರು ಮತ್ತು ಈ ಪಕ್ಷಿಗಳನ್ನು ಕೊಲ್ಲುವುದಿಲ್ಲ ಎಂದು ದೇವರಲ್ಲಿ ಪ್ರಮಾಣ ಮಾಡಲು ತಿಳಿಸಿದರು. ಈ ಪಕ್ಷಿಗಳು ಬೇರೆ ದೇಶದಿಂದ ನಮ್ಮ ದೇಶಕ್ಕೆ ಅತಿಥಿಗಳಾಗಿ ಬರುತ್ತವೆ. ಅದನ್ನು ಸುರಕ್ಷಿತವಾಗಿ ನೋಡಿಕೊಂಡು ಅವುಗಳ ಮುಂದಿನ ಪಯಣಕ್ಕೆ ಅಣಿ ಮಾಡಿ ಕೊಡುವುದು ನಮ್ಮೆಲ್ಲರ ಕರ್ತವ್ಯ ಎಂದು ಪಾದ್ರಿಯವರು ತಿಳಿಸಿದ್ದು ಹಳ್ಳಿಯ ಜನರ ಮನದಲ್ಲಿ ಅಗತ್ಯಕ್ಕಿಂತ ಹೆಚ್ಚೇ ನಾಟಿತ್ತು.

ಸರ್ಕಾರವು ತನ್ನ ಕೆಲಸವನ್ನು ಅಲ್ಲಿಗೇ ನಿಲ್ಲಿಸದೆ ಈ ಪಕ್ಷಿಯ ಬಗ್ಗೆ ಹೆಚ್ಚು ವಿಷಯ ಕಲೆಹಾಕಬೇಕೆಂದು ನಿರ್ಧರಿಸಿತು. ಡೆಹ್ರಾಡೂನ್ ನಲ್ಲಿರುವ ವೈಲ್ಡ್ ಲೈಫ್ ಇನ್ಸಟಿಟ್ಯೂಟ್‌ನವರಿಗೆ ಈ ಪಕ್ಷಿಯ ಬಗ್ಗೆ ಹೆಚ್ಚು ಸಂಶೋಧನೆ ಮಾಡಬೇಕೆಂದು ತಿಳಿಸಿದರು. ಕೆಲವು ವಿಜ್ಞಾನಿಗಳು ಹಾಗೂ ಇನ್ಸ್ಟಿಟ್ಯೂಟಿನ ಪ್ರೊಫೆಸರುಗಳ ಒಂದು ಸಮಿತಿ ರಚಿಸಲಾಯಿತು. ಅನ್ವೇಷಣೆಗಾಗಿ ಸಾಕಷ್ಟು ಬಲಿಷ್ಠವಾದ ಸುಮಾರು 8 ಪಕ್ಷಿಗಳನ್ನು ಹಿಡಿದು ಅವುಗಳ ಮೇಲೆ ತೊಗರಿ ಬೇಳೆಯ ಗಾತ್ರ ಇರುವ ಒಂದೊಂದು ಕಂಪ್ಯೂಟರ್ ಚಿಪ್ ಅಂಟಿಸಿದರು. ಇದರಿಂದ ಉಪಗ್ರಹದ ಸಹಾಯದಿಂದ ಆ ಪಕ್ಷಿಗಳು ಹಾರುವ ಮಾರ್ಗ ಮತ್ತು ಇನ್ನಿತರ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು.

ಚಿಪ್ ಅಂಟಿಸಿದ ಪಕ್ಷಿಗಳನ್ನು ಮತ್ತೆ ಹಾರಿಬಿಡುವ ದಿನ ಬಂತು. ಪಂಕ್ತಿ ಹಳ್ಳಿಜನರೆಲ್ಲಾ ಸೇರಿ ಪಕ್ಷಿಗಳನ್ನು ಹಾರಿಬಿಡುವುದನ್ನು ಸ್ವಲ್ಪ ಹೊತ್ತು ಮುಂದೂಡಲು ಹೇಳಿದರು. ಎಲ್ಲಾ ಜನರು ಸೇರಿ ಆ ಪಕ್ಷಿಗಳ ಮುಂದೆ ದೇವರಿಗೆ

ಪ್ರಾರ್ಥನೆ ಮಾಡಿ ಈ ಪಕ್ಷಿಗಳು ಪ್ರತಿವರ್ಷ ನಮ್ಮ ಹಳ್ಳಿಗೆ ಹೀಗೆ ಬರುತ್ತಿರುವಂತೆ ಮಾಡಪ್ಪ ದೇವರೆ ಎಂದು ಕೇಳಿಕೊಂಡರು. ಯಾವ ಹಳ್ಳಿ ಜನರು ಇವುಗಳನ್ನು ಅಮಾನವೀಯವಾಗಿ ಕೊಲ್ಲುತ್ತಿದ್ದರೋ ಅವರೇ ಈ ಪಕ್ಷಿಗಳನ್ನು ತಮ್ಮಲ್ಲಿಗೆ ಪ್ರತಿ ವರುಷ ಬರುವ ಪ್ರಿಯ ಬಂಧು ಎಂದು ಹೇಳಿದಾಗ ಅಲ್ಲಿದ್ದ ಎಲ್ಲರ ಕಣ್ಣಲ್ಲೂ ನೀರು. ಈ ಚಿಪ್ ಅಳವಡಿಸಿದ ಪಕ್ಷಿಗಳಿಗೆ "ನಾಗ", "ಪಂಕ್ತಿ" ಇನ್ನೂ ಇತರ ಹೆಸರುಗಳನ್ನು ಇಡಲಾಯಿತು.

ಭಾರತ ಸರ್ಕಾರಕ್ಕೆ ಹಾಗೂ ಪಂಕ್ತಿ ಹಳ್ಳಿಗೆ ಈ ಕಾರ್ಯದಿಂದಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಒಳ್ಳೆಯ ಹೆಸರು ಬಂದಿತು. ಭಾರತ ಸರ್ಕಾರ ಪಂಕ್ತಿ ಹಳ್ಳಿಗೆ "ಪಕ್ಷಿ ಸಂರಕ್ಷಿಸುವ ಅತ್ಯುತ್ತಮ ಹಳ್ಳಿ" ಎಂದು ಸರ್ಟಿಫಿಕೇಟ್ ನೀಡಿ ಗೌರವಿಸಿತು. ಇದಾದ ನಂತರ ಬೇರೆ ಹಳ್ಳಿಗಳ ಜನರೂ ತಾವೂ ಪಕ್ಷಿಗಳನ್ನು ಕೊಲ್ಲುವುದಿಲ್ಲ ತಮ್ಮ ಹಳ್ಳಿಗೂ ಸರ್ಟಿಫಿಕೇಟ್ ಕೊಡಿ ಎಂದು ಕೇಳಿದಾಗ ಸರ್ಕಾರ ಸಂತೋಷದಿಂದ ಒಪ್ಪಿತು.

ಈವರೆಗೆ ಈ ಪಕ್ಷಿಯ ಬಗ್ಗೆ ತಿಳಿದುಬಂದಿರುವ ವಿಷಯ ಹೀಗಿದೆ:

ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಿನಲ್ಲಿ ಮಂಗೋಲಿಯಾದಲ್ಲಿ ಚಳಿ ಹೆಚ್ಚಾಗುವುದರಿಂದ ಇವು ಸೊಮಾಲಿಯಾಕ್ಕೆ ವಲಸೆ ಹೋಗುತ್ತವೆ. ಮಾರ್ಗಮಧ್ಯದಲ್ಲಿ ನಾಗಲ್ಯಾಂಡಿನ ಪಂಕ್ತಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಒಂದು ದಿನ ತಂಗುತ್ತವೆ. ಕಾರಣ ಇಲ್ಲಿನ ಕೆರೆಗಳಲ್ಲಿ ಅದಕ್ಕೆ ಆಹಾರವಾಗಿ ಸಿಗುವ ಹುಳು ಮತ್ತು ಕೀಟಗಳು.

ಒಮ್ಮೆ ನಾಗಾಲ್ಯಾಂಡಿನಿಂದ ಹಾರಲು ಪ್ರಾರಂಭಿಸಿದರೆ ಇವು ಹಾರಾಟ ನಿಲ್ಲಿಸುವುದು ಸೊಮಾಲಿಯಾದಲ್ಲೇ. ಸುಮಾರು 5600 ಕಿಲೋಮೀಟರ್ ದೂರವನ್ನು ಐದು ಸಂಪೂರ್ಣ ದಿನ ಹಾಗೂ ಹತ್ತು ಗಂಟೆ ಅಂದರೆ ಸುಮಾರು 130 ಗಂಟೆಗಳ ಕಾಲ ಹಗಲಿರುಳೆನ್ನದೆ ಸತತವಾಗಿ ಹಾರುತ್ತವೆ. ಏಪ್ರಿಲ್ ಮೇ ತಿಂಗಳುಗಳಲ್ಲಿ ಈ ಪಕ್ಷಿಗಳು ಮತ್ತೆ ಮಂಗೋಲಿಯಾಗೆ ಗುಜರಾತ್ ಮಾರ್ಗವಾಗಿ ವಾಪಸ್ ಹೋಗುತ್ತವೆ.

ಸೊಮಾಲಿಯಾದಿಂದ ವಾಪಸ್ ಬರುವಾಗ ಒಂದೆರೆಡು ಚಿಪ್ ಅಂಟಿಸಿರುವ ಪಕ್ಷಿಗಳು ನಮ್ಮ ರಾಜ್ಯದ ಮಲೈಮಹದೇಶ್ವರ ಬೆಟ್ಟದಲ್ಲಿ ಕಳೆದ ಎರಡು ವರ್ಷದಿಂದ ಒಂದೆರಡು ದಿನ ತಂಗಿ ಮಂಗೋಲಿಯಾ ಕಡೆಗೆ ಪ್ರಯಾಣ ಮುಂದುವರೆಸುತ್ತಿವೆ.

ಕಳೆದ ವರ್ಷ ಈ ಪಕ್ಷಿಗಳು ತಮ್ಮ ಮಂಗೋಲಿಯ ಪ್ರಯಾಣ ಒಂದು ವಾರ ಮುಂದೂಡಿದ್ದು ಎಲ್ಲರಿಗೂ ಆಶ್ಚರ್ಯ ತಂದಿತ್ತು. ನಂತರ ತಿಳಿದದ್ದು ಆ ವಾರದಲ್ಲಿ ಒರಿಸ್ಸಾದ ಕಡಲ ತೀರದಲ್ಲಿ ಬಿರುಗಾಳಿ ಎದ್ದಾಗ ಆ ಗಾಳಿಯನ್ನೇ ಉಪಯೋಗಿಸಿಕೊಂಡು ಈ ಪಕ್ಷಿಗಳು ಇನ್ನೂ ವೇಗವಾಗಿ ಮಂಗೋಲಿಯ ತಲುಪಿದವು ಎಂಬುದು.

ಕೋವಿಡ್ ಸಮಸ್ಯೆ ಕಮ್ಮಿಯಾದರೆ ಮುಂಬರುವ ವರ್ಷಗಳಲ್ಲಿ ನಾಗಾಲ್ಯಾಂಡಿಗೆ ಹೋಗಿ ಈ ಪಕ್ಷಿಗಳನ್ನು ನೋಡುವ ಆಸೆ ನನಗಿದೆ. ನೀವೂ ನನ್ನೊಂದಿಗೆ ಬರಲು ಬಯಸುವುದಾದರೆ ಮುಂಚಿತವಾಗಿ ತಿಳಿಸಿ. ಒಟ್ಟಿಗೇ ಹೋಗೋಣ.

ಲಾಸ್ಟ್ ಲಾಫ್

– ಬಿ.ಆರ್. ರವೀಂದ್ರನಾಥ್

ಅದೊಂದು ದೊಡ್ಡ ಸರಕಾರಿ ಸ್ವಾಮ್ಯದ ಕಂಪೆನಿ. ಆ ಕಂಪೆನಿಯಲ್ಲಿ ಒಂದು ಪತ್ತಿನ ಸಹಕಾರ ಸಂಘ. ಆ ಪತ್ತಿನ ಸಹಕಾರ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಮಹಿಳಾ ಮೀಸಲಾತಿಗೆ ಒಂದು ಸ್ಥಾನವಿತ್ತು. ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆಯ್ಕೆಮಾಡಲು ಐದು ವರ್ಷಕ್ಕೊಮ್ಮೆ ಚುನಾವಣೆಗಳು ನಡೆಯುತ್ತಿದ್ದವು. ಮಹಿಳಾ ಮೀಸಲಾತಿ ಸ್ಥಾನಕ್ಕೆ ಯಾವಾಗಲೂ ಶಾಂತಾ ಅವರೇ ಆರಿಸಿಬರುತ್ತಿದ್ದರು. ಏಕೆಂದರೆ ಶಾಂತಾ ವಿರುದ್ಧ ಅಭ್ಯರ್ಥಿಯಾಗಿ ತಾನು ಸೋಲಬಹುದು ಎಂಬ ಸಾಧ್ಯತೆಯ ಕಲ್ಪನೆ ಮಾಡಿಕೊಂಡೇ ಯಾರೂ ಚುನಾವಣೆಯಲ್ಲಿ ನಿಲ್ಲುತ್ತಿರಲಿಲ್ಲ.

ಆ ಕಂಪೆನಿಯ ಇನ್ನೊಬ್ಬ ನೌಕರಳು ಆಶಾ. ಆಶಾಗೆ ಚುನಾವಣೆಯಲ್ಲಿ ನಿಲ್ಲಲು ಹಿಂಜರಿಕೆ ಇರಲಿಲ್ಲ. ಒಂದು ಬಾರಿಯ ಸಹಕಾರಿ ಪತ್ತಿನ ಸಂಸ್ಥೆಯ ಚುನಾವಣೆಯಲ್ಲಿ ತಾನೂ ಸ್ಪರ್ಧಿಸಲು ನಿರ್ಧರಿಸಿದಳು. ಆದರೆ ಹಿರಿಯ ಸದಸ್ಯೆಯಾಗಿರುವ ಶಾಂತಾಳ ವಿರುದ್ಧ ಮೀಸಲು ಸ್ಥಾನದಲ್ಲಿ ನಿಲ್ಲುವ ಬದಲು ಸಾಮಾನ್ಯ ಸ್ಥಾನದಲ್ಲಿ ಸ್ಪರ್ಧಿಸಿದರೆ ಕೆಲವು ಅನುಕೂಲಗಳಿವೆ ಎಂದು ಅವಳಿಗೆ ತೋರಿತು. ಮೊದಲಿಗೆ ತಾನು ಶಾಂತಾ ವಿರುದ್ಧ ಸ್ಪರ್ಧಿಸದಿದ್ದರೆ, ಶಾಂತಾ ತನಗೆ ಬೆಂಬಲ ನೀಡಬಹುದು. ಸಾಮಾನ್ಯ ಕ್ಷೇತ್ರದ ಸ್ಥಾನದಲ್ಲಿ ತಾನು ನಿಂತರೆ ತಾನು ಧೈರ್ಯವಂತಳು ಎಂದು ಎಲ್ಲರಿಗೂ ತೋರಿಸಿಕೊಳ್ಳಬಹುದು ಮತ್ತು ಗೆದ್ದರಂತೂ ತಾನು ಒಂದು ದಾಖಲೆಯನ್ನೇ ನಿರ್ಮಿಸಬಹುದು. ತಾನು ಸೋತರೆ ತನ್ನ ಬಗ್ಗೆ ಸಹಾನುಭೂತಿ ಮೂಡುತ್ತದೆ. ಹೀಗೆ ಯೋಚಿಸಿ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದ ಅಭ್ಯರ್ಥಿಯಾಗಿ ಅರ್ಜಿ ಸಲ್ಲಿಸಿದಳು. ನಂತರ ಸಾಧ್ಯವಾದ ಮಟ್ಟಿಗೆ ಪ್ರಚಾರ ಮಾಡಿದಳು. ಮತಯಾಚನೆಗಾಗಿ ಪ್ರತಿಯೊಬ್ಬರನ್ನೂ ಸಂಪರ್ಕಿಸುವುದು ಅವಳಿಗೆ ಒಂದು ವಿಶೇಷ ಅನುಭವ ತಂದುಕೊಟ್ಟಿತು. ಆಶಾಳು ಯೋಚಿಸಿದಂತೆ ಶಾಂತಾ ಸಹ ಸ್ವಲ್ಪ ಮಟ್ಟಿಗೆ ಬೆಂಬಲ ನೀಡಿದರು. ಆಶಾಳ ಪ್ಲಾನು ಯಶಸ್ವಿಯಾಯಿತು. ಚುನಾವಣೆಯಲ್ಲಿ ಸಾಮಾನ್ಯ ಸ್ಥಾನದಿಂದ ಗೆದ್ದ ಮೊದಲ ಮಹಿಳಾ ಅಭ್ಯರ್ಥಿ ಎಂದು ದಾಖಲೆ ಸ್ಥಾಪಿಸಿ ಚುನಾವಣೆಯಲ್ಲಿ ಗೆದ್ದಳು.

ಚುನಾಯಿತಳಾದ ನಂತರದ ಕೆಲವು ತಿಂಗಳುಗಳು ಕಳೆಯುವುದರಲ್ಲಿಯೇ ಅವಳಿಗೆ ಭ್ರಮನಿರಸನವಾಗಿ ಅಲ್ಲಿನ ರಾಜಕೀಯ ಬೇಸರ ತರಿಸಿತು. ಕಷ್ಟಪಟ್ಟು ಸಂಪಾದಿಸಿದ ಸ್ನೇಹವಿಶ್ವಾಸಗಳು ನಷ್ಟವಾಗತೊಡಗಿದವು. ಮತ್ತೊಮ್ಮೆ ಈ ಸಂಘದ ಚುನಾವಣೆಯಲ್ಲಿ ನಿಲ್ಲಬಾರದೆಂದೂ ನಿಶ್ಚಯಿಸಿದಳು, ಹಾಗೆಯೇ ಎಲ್ಲರಿಗೂ ತಿಳಿಸಿಯೂಬಿಟ್ಟಳು.

ಕಾಲ ಉರುಳಿತು. ಮತ್ತೊಂದು ಚುನಾವಣೆಯೂ ಬಂತು. ಶಾಂತಾ ನೌಕರಿಯಿಂದ ನಿವೃತ್ತಿ ಹೊಂದಿದ್ದರು. ಮೀಸಲು ಕ್ಷೇತ್ರದಿಂದ ಆಶಾಳ ಹಿತಶತ್ರು ಲತಾ ನಿಲ್ಲುವವಳೆಂದು ತಿಳಿದುಬಂತು. ತನ್ನ ಪಾಡಿಗೆ ತಾನು ತೆಪ್ಪಗಿದ್ದ ಆಶಾಳ ಬಳಿಗೆ ಬಂದು ಅವಳ ಸಹದ್ಯೋಗಿಯೊಬ್ಬರು ಕುಹಕವಾಡಿದರು.

“ಏನ್ರೀ, ಆಶಾ ನೀವೂ ಸಹ ಲತಾಳ ಸಹಾಯಕ್ಕೆ ಹೊರಟೇದೀರಲ್ಲ? ನೀವು ಖಚಿತವಾಗಿ ಗೆಲ್ಲಬಹುದಾದ ಅಭ್ಯರ್ಥಿಯಾಗಿದ್ದರೂ ಲತಾ ನಿಲ್ತಾಳೆ ಅಂತ ನೀವು ನಿಲ್ತಾ ಇಲ್ಲ ಅಂತ ಕಾಣಿಸುತ್ತೆ ಅಲ್ವಾ?”

“ಹಾಗೇನಿಲ್ಲ, ನನಗೆ ಮುಂದುವರೆಯೋದಕ್ಕೆ ಆಸಕ್ತಿ ಇಲ್ಲ.”

“ಲತಾನ ಮಗಳು ಈಬಾರಿ ಎರಡನೇ ಪಿಯುಸಿ ಪರೀಕ್ಷೆ ಕಟ್ಟಿದಾಳೆ. ಅವಳ ಗಂಡ ಬೇರೆ ಊರಿನಲ್ಲಿ ಇಲ್ಲ. ಅದಕ್ಕೆ ಲತಾನೇ ರಜಾ ಹಾಕಿ ಅವಳಿಗೆ ಓದಿಸೋದಕ್ಕೆ ಕೂತಿದಾಳೆ. ಈ ಚುನಾವಣೆಯಲ್ಲಿ ಅವಳು ತಾನು ಅವಿರೋಧವಾಗಿ ಆಯ್ಕೆ ಆಗ್ತೀನಿ ಅಂತ ವಿಶ್ವಾಸ ಇಟ್ಟುಕೊಂಡೇ ಈ ಚುನಾವಣೆಯಲ್ಲಿ ನಿಂತಿದ್ದಾಳೆ. ಅವಳೇ ಹೇಳ್ತಾ ಇದ್ದಳು. ಆಶಾ ಒಬ್ಬಳೇ ಸ್ಟ್ರಾಂಗ್ ಅಭ್ಯರ್ಥಿ. ಅವಳನ್ನು ಬಿಟ್ಟು ಬೇರೆ ಯಾರೂ ನನ್ನ ವಿರುದ್ದ ನಿಲ್ಲಲ್ಲ. ಅದೇ ಕಾರಣಕ್ಕೆ ನಿಮ್ಮ ಬೆಂಬಲ ಇರಬೇಕು ಅಂತ ಯಾರೋ ಹೇಳ್ತಾ ಇದ್ದರು.”

“ಸರಿ ಬಿಡಿ. ಏನಾದರೂ ಮಾಡಿಕೊಳ್ಳಲಿ” ಎಂದು ಹೇಳಿ ಆಶಾ ಹೊರಟಳು.

ಅಂದು ರಾತ್ರಿ ಮನೆಯಲ್ಲಿ ಕುಳಿತಿದ್ದಾಗ ಲತಾ ತನಗೆ ಕೊಟ್ಟ ತೊಂದರೆಗಳು ನೆನಪಾದವು. ಅಂತಹ ಲತಾಳಿಗೆ ತಾನು ಸುಲಭವಾಗಿ ಸ್ಥಾನ ಬಿಟ್ಟುಕೊಟ್ಟರೆ ಅವಳು ‘ನನ್ನ ಎದುರಿಗೆ ಆಶಾ ಕೂಡಾ ನಿಲ್ಲಲು ಸಾಧ್ಯವಿಲ್ಲ’ ಎಂದು ಹೇಳಿಕೊಂಡು ತಿರುಗಾಡಲು ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ ಎಂದು ಆಶಾಳಿಗೆ ವೇದ್ಯವಾಯಿತು.

ಆದರೆ ತಾನು ಅವಳ ಕಾರಣಕ್ಕಾಗಿ ಚುನಾವಣೆಯಲ್ಲಿ ಯಾಕೆ ನಿಲ್ಲಬೇಕು ಎನ್ನುವ ಪ್ರಶ್ನೆಗೆ ಉತ್ತರ ದೊರಕಲಿಲ್ಲ. ಲತಾ ಚುನಾವಣೆಯಲ್ಲಿ ಭಾಗವಹಿಸಿದರೂ ಮತಯಾಚನೆ ಮಾಡಲು ಜನಗಳನ್ನು ಸಂಪರ್ಕವೂ ಮಾಡದೇ ಅವಿರೋಧವಾಗಿ ಆಯ್ಕೆಗೊಂಡು ಅನಭಿಶಿಕ್ತ ರಾಣಿ ಎಂದು ಅನಿಸಿಕೊಳ್ಳುತ್ತಾಳೆ ಎಂಬ ಚಿತ್ರ ಕಣ್ಣಮುಂದೆ ಬಂದಿತು. ಮರುದಿನ ಬೆಳಗಿನ ಜಾವ ಅವಳಿಗೆ ಒಂದು ಪ್ಲಾನು ಹೊಳೆಯಿತು. ಅಂದು ಕಚೇರಿಗೆ ಹೋದ ನಂತರ ಆಶಾ ಸಹಕಾರಿ ಸಂಸ್ಥೆಗೆ ತೆರಳಿ ಮೀಸಲು ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿಬಿಟ್ಟಳು. ಆಶಾ ಮಹಿಳಾ ಮೀಸಲು ಸ್ಥಾನದ ಕ್ಷೇತ್ರದಿಂದ ಚುನಾವಣೆಗೆ ನಿಂತಿದ್ದಾಳೆ ಎಂಬುದು ಸುದ್ದಿಯಾಯಿತು. ಆಶಾಳ ಒಂದಿಬ್ಬರು ಹಿತಶತ್ರುಗಳು ಆ ಬಗ್ಗೆ ಪ್ರಸ್ತಾಪಮಾಡಿದಾಗ ಆಶಾ ಹೇಳಿದಳು.

“ನನಗೆ ನಿಲ್ಲೋ ಮನಸ್ಸಿರಲಿಲ್ಲ. ಆದರೆ ಕೆಲವು ಆಪ್ತ ಸ್ನೇಹಿತರು ಒತ್ತಾಯ ಮಾಡಿದರು. ಅದಕ್ಕೆ ಈ ಬಾರಿ ಸಾಮಾನ್ಯ ಸ್ಥಾನದಿಂದ ನಿಲ್ಲುವ ಬದಲು ಮೀಸಲು ಸ್ಥಾನದಿಂದ ನಿಂತು ನೋಡೋಣ ಅಂತಾ ನಿಲ್ತಾ ಇದೀನಿ.”

ಮನೆಯಲ್ಲಿ ಮಗಳಿಗೆ ಪಾಠ ಹೇಳಿಕೊಡುತ್ತಿದ್ದ ಲತಾಳಿಗೆ ಇಬ್ಬಂದಿ ಪರಿಸ್ಥಿತಿ ಉಂಟಾಯಿತು. ಚುನಾವಣೆ ಪ್ರಚಾರ ಮಾಡದಿದ್ದರೆ ತಾನು ಸೋಲುವುದು ಖಚಿತ ಹಾಗೂ ಸೋತರೆ ಅವಮಾನವಾಗುತ್ತದೆ. ಪ್ರಚಾರ ಮಾಡಲು ಇಡೀ ವಾರ ಕಚೇರಿಗೆ ಹೋಗಲೇಬೇಕು. ಈ ಹಂತದಲ್ಲಿ ಮಗಳಿಗೆ ಪಾಠ ಹೇಳಿ ಕೊಡದಿದ್ದರೆ ಅವಳ ಭವಿಷ್ಯ ಹಾಳಾಗಬಹುದು. ಈಗ ತಾನು ಚುನಾವಣೆಯಿಂದ ಹಿಂದೆ ಸರಿದರೆ, ಆಶಾ ಅವಿರೋಧವಾಗಿ ಆಯ್ಕೆಗೊಳ್ಳುತ್ತಾಳೆ. ಆಶಾ ಅವಿರೋಧವಾಗಿ ಆಯ್ಕೆಗೊಳ್ಳುವ ಚಿತ್ರ ಲತಾಗೆ ಸಹಿಸಲಾಗಲಿಲ್ಲ. ಸರಿ ರಜೆಯಲ್ಲಿದ್ದರೂ ಪರವಿಲ್ಲ, ಕಚೇರಿಗೆ ಹೋಗಿ ಪ್ರಚಾರ ಮಾಡಿಯೇ ತೀರುತ್ತೇನೆ ಎಂಬ ನಿರ್ಧಾರಕ್ಕೆ ಬಂದಳು.

ಆದರೂ ಲತಾಳ ಮನಸ್ಸಿನಲ್ಲಿ ಒಂದು ಸಣ್ಣ ಆಶಾಕಿರಣ ಮೂಡಿತು. ಹೇಗಾದರೂ ಮಾಡಿ ಆಶಾ ತನ್ನ ನಾಮಪತ್ರ ಹಿಂಪಡೆಯುವಂತೆ ಮಾಡಿದರೆ, ತನಗೆ ಎಲ್ಲಾ ಸುಲಭವಾಗುತ್ತದೆ. ಅವಳನ್ನು ತಾನು ನೇರವಾಗಿ ಕೇಳಲು ಸಾಧ್ಯವಿಲ್ಲ ಎಂದು ಮನಗಂಡು. ತನ್ನ ತಂಡದ ಮಿತ್ರರನ್ನು ಒಂದು ಕೊನೆಯ ಪ್ರಯತ್ನ ಮಾಡಲು ಕೋರಿಕೊಂಡಳು. ಲತಾಳ ಮಿತ್ರರು ಜೊತೆಗೂಡಿ, ಆಶಾಳಿಗೆ ನಾಮಪತ್ರವನ್ನು ಹಿಂಪಡೆಯುವಂತೆ ಒತ್ತಡ ಹಾಕಲು ಉತ್ಸಾಹದಿಂದ ಆಶಾಳ ವಿಭಾಗಕ್ಕೆ ಹೋದರು. ಅಂದು ಆಶಾ ಅನಾರೋಗ್ಯದ ಕಾರಣದಿಂದ ಕಚೇರಿಗೆ ಬಂದಿರಲಿಲ್ಲ. ನಾಮಪತ್ರ ಹಿಂಪಡೆಯಲು ಒಂದೇ ದಿನ ಬಾಕಿ ಉಳಿದಿತ್ತು.

ಯಾವುದೋ ನೆಪ ಒಡ್ಡಿ ಆಶಾಗೆ ದೂರವಾಣಿ ಕರೆ ಮಾಡಿದರು. ತನಗೆ ವೈರಾಣು ಜ್ವರ ಬಂದಿದೆ ಎಂದು ತಿಳಿಸಿ ಸಾಧ್ಯವಾದರೆ ಮರುದಿನ ಕಚೇರಿಗೆ ಬರಲು ಪ್ರಯತ್ನಿಸುವುದಾಗಿ ತಿಳಿಸಿ ಕರೆಯನ್ನು ಮುಗಿಸಿದಳು ಆಶಾ. ಮರುದಿನ ಆಶಾ ಬಂದು ನಾಮಪತ್ರ ಹಿಂಪಡೆಯಬಹುದು ಎಂಬ ಆಸೆ ಹೊತ್ತಳು ಲತಾ. ಆಶಾ ಮರುದಿನ ಕಚೇರಿಗೆ ಬರಲಿಲ್ಲ. ಮೀಸಲು ಕ್ಷೇತ್ರದಲ್ಲಿ ಇಬ್ಬರು ಸ್ಪರ್ಧಿಗಳು ಉಳಿದರು.

ಚುನಾವಣೆ ಒಂದು ವಾರದ ನಂತರ ನಡೆಯುವುದಿತ್ತು. ಮಗಳ ಪರೀಕ್ಷೆ ಎರಡು ವಾರಗಳ ನಂತರ ಪ್ರಾರಂಭವಾಗುವುದಿತ್ತು. ತಾನು ಮೊದಲ ಬಾರಿಗೆ ಚುನಾವಣೆಯಲ್ಲಿ ನಿಲ್ಲುತ್ತಿರುವುದರಿಂದ ತಾನು ಹೆಚ್ಚು ಶ್ರಮಹಾಕುವುದು ಅನಿವಾರ್ಯ ಎಂದು ಅವಳಿಗೆ ತಿಳಿದಿತ್ತು.

ರಜೆಯಲ್ಲಿದ್ದರೂ ಮರುದಿನ ಲತಾ ಕಚೇರಿಗೆ ಬಂದಳು. ಆಶಾಳ ಸುಳಿವೇ ಇಲ್ಲ. ಆರೋಗ್ಯ ವಿಚಾರಿಸುವ ನೆಪದಲ್ಲಿ ಆಶಾಳಿಗೆ ದೂರವಾಣಿ ಕರೆ ಮಾಡಿದಳು. ಆಶಾ ಸಹಜವಾಗಿ ಉತ್ತರಿಸಿ ತನ್ನ ಜ್ವರ ಕಡಿಮೆಯಾಗಿಲ್ಲ ಎಂದು ತಿಳಿಸಿದಳು. ಲತಾಳಿಗೆ ಚುನಾವಣೆಯಲ್ಲಿ ಗೆಲ್ಲಲು ಶುಭಕಾಮನೆಗಳನ್ನೂ ತಿಳಿಸಿದಳು.

ದೂರವಾಣಿ ಕರೆ ಅಂತ್ಯಗೊಂಡ ನಂತರ ಲತಾ ನಿರಾಳವಾಗುವಷ್ಟರಲ್ಲಿ "ಆಶಾಗೆ ಜ್ವರ ಬಂದಿರೋದು ನಿಜಾನೋ ಸುಳ್ಳೋ ಯಾರಿಗೆ ಗೊತ್ತು. ಕಾರ್ಯಕಾರಿ ಸಮಿತಿಯಲ್ಲಿರುವ ಹಾಲಿ ಸದಸ್ಯರಿಗೆ ಬೆಂಬಲಿಗರ ಗುಂಪು ಇದ್ದೇ

ಇರುತ್ತದೆ. ಆಶಾ ಪ್ರಚಾರ ಮಾಡೋದಿಕ್ಕೆ ಕಚೇರಿಗೆ ಬರಬೇಕಾಗಿಲ್ಲ. ತನ್ನ ಮತದಾರರಿಗೆ ದೂರವಾಣಿ ಮೂಲಕ ಕೋರಿಕೊಂಡರೆ ಸಾಕು. ಜೊತೆಗೆ ಚುನಾವಣೆ ಸಮಯದಲ್ಲಿ ಪಾಪ ಜ್ವರ ಬಂದಿದೆಯಲ್ಲ ಅಂತ ಹೇಳಿ ಸಿಂಪತಿ ವೋಟುಗಳೂ ಬೀಳಬಹುದು. ನಿನ್ನ ಹುಷಾರಿನಲ್ಲಿ ನೀನಿರಬೇಕು. ಫಲಿತಾಂಶದ ನಂತರದ ಪರಿಸ್ಥಿತಿಯನ್ನು ಊಹಿಸು. ಜ್ವರ ಬಂದು ಮನೆಯಲ್ಲಿದ್ದವಳು ಗೆದ್ದು ಬರುತ್ತಾಳೆ. ನೀನು ಸೋತಿರುತ್ತೀ. ಹೇಗಿರುತ್ತದೆ ಆಗ?" ಅಂತ ಅವಳ ಹಿತಶತ್ರುಗಳು ಅವಳಲ್ಲಿ ವಿಷದ ಬೀಜವನ್ನು ಬಿತ್ತಿದರು.

ಲತಾ ಮುಂದಿನ ಒಂದು ವಾರ ಮನೆಯ ಜವಾಬ್ದಾರಿಗಳನ್ನು ಮರೆತು ಬಿರುಸಾಗಿ ಪ್ರಚಾರ ಮಾಡಿದಳು.

ಕೊನೆಯವರೆಗೂ ಆಶಾಳ ಸುಳಿವೇ ಇರಲಿಲ್ಲ. ಚುನಾವಣೆ ಮುಗಿಯಿತು. ನಿರೀಕ್ಷಿಸಿದಂತೆ ಲತಾ ಗೆದ್ದು ಬಂದಳು. ಆದರೆ ಆಶಾ ಗಳಿಸಿದ ಮತಗಳು ಕಡಿಮೆ ಇರಲಿಲ್ಲ. ಆಶಾ ಸಂಪಾದಿಸಿದ್ದ ಗುಡ್ ವಿಲ್ ಅವರಲ್ಲಿದ್ದರೆ, ಲತಾಳ ಬಗ್ಗೆ ಆಕ್ರೋಶವಿರುವವರ ಸಂಖ್ಯೆ ಕಡಿಮೆ ಇಲ್ಲ ಎಂಬುದೂ ಸಾಬೀತಾಯಿತು.

ಫಲಿತಾಂಶದ ನಂತರ ಆಶಾ ಕಚೇರಿಗೆ ಹಾಜರಾದಳು. ಅವಳ ಸೋಲಿನ ಬಗ್ಗೆ ಸಂತಾಪ ವ್ಯಕ್ತಪಡಿಸುವವರ ಮುಂದೆ "ಏನು ಮಾಡೋದು, ಈ ಚುನಾವಣೆ ನಡೆಯುವ ಒಂದು ವಾರದಲ್ಲಿಯೇ ನನಗೆ ಆರೋಗ್ಯ ಕೆಟ್ಟಿತು. ಮುಂದಿನ ಬಾರಿ ನೋಡೋಣ" ಎಂದು ಉತ್ತರಿಸಿದಳು.

ವಾಡಿಕೆಯಂತೆ ಫಲಿತಾಂಶದ ಮಾರನೇ ದಿನದಂದು ಚುನಾವಣೆಯಲ್ಲಿ ಗೆದ್ದವರೆಲ್ಲರೂ ಸೇರಿ ವಿಜೃಂಭಣೆಯಿಂದ ಸಂಭ್ರಮಿಸುವ ಪಾರ್ಟಿ ನಡೆಯಿತು. ಗೆದ್ದವರ ಪೈಕಿ ಗೈರು ಹಾಜರಾಗಿದ್ದವಳು ಲತಾ ಮಾತ್ರ. ಅವಳಿಗೆ ಆ ಸಂಭ್ರಮಾಚರಣೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಆ ಸಮಯದ ಗೆಲುವಿನ ಸವಿ ಅವಳಿಗೆ ದೊರಕಲಿಲ್ಲ.

ಈ ಸುದ್ದಿ ಆಶಾಳಿಗೆ ತಲುಪಿತು. ಅವಳ ಮುಖದ ಮೇಲೆ ಮಂದಹಾಸ ಮೂಡಿತು.

ಅರವತ್ತು ತುಂಬಿತಲ್ಲೋ ಗೆಳೆಯ

- ರಾಜೇಂದ್ರ ಪ್ರಸಾದ್

ಅರವತ್ತು ತುಂಬಿತಲ್ಲೋ ಗೆಳೆಯ
ನನಗೆ ಅರವತ್ತು ತುಂಬಿತಲ್ಲೋ
ಮಡದಿಯ ಮುಡಿಯೇರಿ ಮೆರೆದಿದ್ದ ಮಲ್ಲಿಗೆ
ಮುದುಡಿ ಮೂಲೆ ಸೇರಿದಾಂತಾಯಿತಲ್ಲೋ

ಕೈತುಂಬಾ ವೇತನ ಬರುತಿದ್ದ ನೌಕರಿ
ಕೈಜಾರಿ ಹೋಯಿತಲ್ಲೋ ಗೆಳೆಯ
ಕೊಡಿಟ್ಟ ಕುಡಿಕೆ ಹಣ ಎಣಿಸಿ ಎಣಿಸಿ
ಬಳಸುವಂತಾಯಿತಲ್ಲೋ

ಕೈಕಾಲು ಕಣ್ಣು ಕಿವಿ ಬಲವೇಕೋ
ಕುಂದಿದಂತಾಯಿತಲ್ಲೋ ಗೆಳೆಯ
ದಿನಕೊಂದು ನೋವು ಒಡಲಿಗೆ ಅಂಟಿ
ಮೈಮನಸು ಮೆತ್ತಗಾಯಿತಲ್ಲೋ

ನಾನು ನುಡಿದಿದ್ದೇ ಶಾಸನ ಆಗಿದ್ದ ಮನೆಯಲ್ಲಿ
ಸತಿಸುತರ ತಿರುಮಂತ್ರ ಕೇಳುವಂತಾಯಿತಲ್ಲೋ ಗೆಳೆಯ
ನನಗೆ ಅರುಳು ಮರುಳೆಂಬ ಪಟ್ಟವ ಕಟ್ಟಿ ಸದಾ
ಸತಿಸುತರು ಹೇಳಿದಂತೆ ಕೇಳುವಂತಾಯಿತಲ್ಲೋ

ಕಾಲಕ್ಕೆ ಸರಿಯಾಗಿ ಕುಳಿತಿದ್ದ ಕಡೆಗೇ ಬರುತ್ತಿದ್ದ
ಕಾಫಿ ತಿನಿಸು ಉಪಚಾರ ಮಂಗಮಾಯವಾಯಿತಲ್ಲೋ ಗೆಳೆಯ
ಲೋಕದಲಿ ದುಡಿವ ಕಲಿವ ಮಂದಿಗಷ್ಟೆ
ಮೊದಲ ಸರದಿ ಎಂಬ ಅರಿವು ಮನದಿ ಮೂಡಿತಲ್ಲೋ

ಸದಾ ನನ್ನಿಂಗಿತಕೇ ಕಾಯುತ್ತಿದ್ದ ನನ್ನ ಮಡದಿ
ಮೆಲ್ಲಗೆ ಮಕ್ಕಳ ಪಕ್ಷಕ್ಕೆ ಪಕ್ಷಾಂತರವಾದಳಲ್ಲೋ ಗೆಳೆಯ
ಕುಳಿತು ಕಾಲ ಕಳೆವ ಬದಲು ಕಸವ ಗುಡಿಸಿ
ಪಾತ್ರೆ ತೊಳೆಯಿರೆಂದೆಲ್ಲಾ ಗದರುವಂತಾಯಿತಲ್ಲೋ

ನಾಕು ದಶಕದಿಂದ ನನದೇ ಆಗಿದ್ದ ಗೃಹಖಾತೆ
ಹಣಕಾಸು ಇತ್ಯಾದಿ ಕೈಯಿಂದ ಜಾರಿತಲ್ಲೋ ಗೆಳೆಯ
ಬರೀ ಮುಜರಾಯಿ ಖಾತೆ ಒಂದೇ ನನಗುಳಿದು
ಪೂಜೆಮಾತ್ರ ನಿತ್ಯ ಕಸುಬಾಯಿತಲ್ಲೋ

ನಿದ್ದೆಯಿರದ ರಾತ್ರಿ ಕಳೆದು ಸ್ನಾನ ಪೂಜೆ ಊಟ
ಮೊಬೈಲ್ ಟೀವಿಯಷ್ಟೇ ನಿತ್ಯ ಬದುಕಾಯಿತಲ್ಲೋ ಗೆಳೆಯ
ಶಿರದ ಮೇಲೆ ಉಪ್ಪು ಮೆಣಸು ಕೇಶ ಕಂಡ
ಮನುಜರೆಲ್ಲ ಪಾಪ ಮುದುಕ ಎನ್ನುವಂತಾಯಿತಲ್ಲೋ

ಕಥೆ ಪುರಾಣ ಮ್ಯಾಗಜೀನ್ ಎಷ್ಟು ತಿರುವಲೇನು
ತಲೆಗೆ ಇನಿತು ಇಳಿಯದಂತಾಯಿತಲ್ಲೋ ಗೆಳೆಯ
ಎಲ್ಲಾ ಮೊದಲ ದರ್ಜೆ ಸವಲತ್ತು
ಮಾಯವಾಗಿ ಮೂರಕ್ಕೆ ಇಳಿಯಿತಲ್ಲೋ

ಹಿರಿಯ ನಾಗರಿಕನೆಂದು ಊರ ಜನ ತೋರುತಿರುವ
ಕರುಣೆ ಸಹಿಸಿ ನೊಂದೆನಲ್ಲೋ ಗೆಳೆಯ
ಹಿರಿಯನೆಂದು ತಲೆ ಬಾಗಿದೆಲ್ಲರಿಗೂ
ಹರಸಿ ಹರಸಿ ಬಳಲುವಂತಾಯಿತಲ್ಲೋ

ಜಗದ ನೆಂಟು ಒಂದೊಂದೆ ಸಡಿಲಗೊಳುವ
ಪರಿಯ ಕಂಡು ಮನ ಬೆರಗಾಯಿತಲ್ಲೋ ಗೆಳೆಯ
ಭುವಿಯ ಬಂಧವೇನೆಯಿರಲಿ ಲಾಭವಿರದೆ
ಚಿರಕಾಲ ಉಳಿಯದೆಂಬ ಸತ್ಯದರಿವಾಯಿತಲ್ಲೋ

ಬೇಡಗಳ ನಡುವಿನಲ್ಲೇ ಬೇಕುಗಳನು ಹುಡುಕಬೇಕು
ಚಿಂತೆಗಳ ಸಂತೆಯಲ್ಲೇ ಇನಿತು ಮುದವ ಕಾಣಬೇಕು ಗೆಳೆಯ
ಕಮಲದೆಲೆಯ ಮೇಲ ನೀರು ಗುಳ್ಳೆಯಂತೆ
ಜನರ ಜಾತ್ರೆಯಲ್ಲೇ ವಾನಪ್ರಸ್ಥವೆಂದು
ಎಂಬ ತಿಳಿವು ಮೂಡಿದೊಡನೆ
ಮನಕೆ ಶಾಂತಿ ಲಭಸಿತಲ್ಲೊ ಗೆಳೆಯ
ಶಾಂತಿ ಲಭಿಸಿತಲ್ಲೋ.

***

ಹಾಸ್ಯ ಲೇಖನ

ಮೇಡ್ ಫಾರ್ ಈಚ್ ಅದರ್

- ಜಿ.ಬಿ.ಕೋಟೆ ಅನಂತ

ವೆಟರ್ನರಿ ಹಾಸ್ಪಿಟಲ್ ಕೌಂಟರಿನ ಮುಂದೆ ಸುಂದರ ಹುಡುಗಿಯೊಬ್ಬಳು ಮುದ್ದಾದ ಪೊಮರಿನ್ ಮರಿಯನ್ನು ಚೆಕಪ್ ಗೆ ಕರೆದುಕೊಂಡು ಬಂದಿದ್ದಳು. ಪುಟ್ಟ ಬ್ಯಾಸ್ಕೆಟ್ ನಲ್ಲಿ ಹಾಕಿಕೊಂಡು ಮಡಿಲಲ್ಲಿಟ್ಟುಕೊಂಡು ನುಲಿಯುತ್ತಾ ಸೌಂದರ್ಯ ಸ್ಪರ್ಧೆಯಲ್ಲಿ Cat walk ಮಾಡುವಂತೆ ಬಳುಕುತ್ತಾ, ಕೌಂಟರ್ ಮುಂದೆ ನಿಂತು 'ಎಕ್ಸ್ಕ್ಯೂಸ್ ಮಿ" ಅಂದಳು.

ಕೌಂಟರ್ ಒಳಗಡೆ ತಲೆತಗ್ಗಿಸಿದ್ದಾತ 'ಯೆಸ್' ಅನ್ನುತ್ತಾ ತಲೆಯೆತ್ತಿ ಕೊಂಚ ಹೊತ್ತು ಮೂಕನಂತಾದ. ಅವಳನ್ನೇ ನೋಡುತ್ತಾ ನಿಗದಿತ ಫಾರ್ಮ್ ಮುಂದಿಟ್ಟುಕೊಂಡು 'ಏನು ಹೆಸರು?' ಎಂದ. ಅತ್ತ ನಿಂತ ಚೆಂದುಳ್ಳಿ ಚೆಲುವೆ ಮಿಂಚುತ್ತಾ ತಲೆ ತಗ್ಗಿಸಿ ನೆಲ ನೋಡುತ್ತಾ ಮೆಲುದನಿಯಲ್ಲಿ 'ರಾಗಿಣಿ' ಎಂದಳು.

ಅದು ಕೌಂಟರಿನಲ್ಲಿ ಮೂರು ಸರ್ತಿ ಪ್ರತಿಧ್ವನಿಸಿತು, ರಾಗಿಣಿ.. ರಾಗಿಣಿ.. ರಾಗಿಣಿ. ಅಂತ. ಕೌಂಟರಿನಲ್ಲಿದ್ದಾತ ಮೌನಿಯಾದ.

'ಅದು ನನ್ನ ಹೆಸರು' ಎಂದಳು ಚೆಲುವೆ.

ಆತ 'ರೀ, ನಿಮ್ಮ ಹೆಸರಲ್ಲ, ನಿಮ್ಮ ನಾಯಿದು'.

'ನೀವು ನನ್ನ ಹೆಸ್ರು ಕೇಳಿದ್ರೆ ಅನ್ಕೊಂಡೆ' ಎಂದು ನಾಚುತ್ತಾ ಹೇಳಿದಳು.

'ಹೂಂ, ಅದು ಹೆಣ್ಣೋ ಗಂಡೋ?".

ರಾಗಿಣಿ ನಾಚಿ ತಲೆತಗ್ಗಿಸಿ 'ಅದು ನನ್ನಂಗೆ ಹೆಣ್ಣು. ಹೆಸರು ರಾಣಿ, ವಯಸ್ಸು 18 ವರ್ಷ' ಅಂತ ಅಂದಾಗ ಕೌಂಟರಿನಲ್ಲಿದ್ದಾತ ಗಾಬರಿಯಿಂದ ಬ್ಯಾಸ್ಕೆಟ್ ನಲ್ಲಿದ್ದ ನಾಯಿಮರಿಯನ್ನು ನೋಡಿದ. "ಇದಕ್ಕಾ?" ಅಂದ.

"ಅದಕ್ಕಲ್ಲ ನಂಗೆ" ಅಂತ ಹೇಳಿದಳು. ಮನಸ್ಸಿನಲ್ಲೇ ರಾಣಿಗೆ ನಾಲ್ಕು ತಿಂಗ್ಳು ಅಂದುಕೊಂಡಳು. ವಿವರಗಳನ್ನು ದಾಖಲಿಸಿ "ಇದನ್ನು ರೂಮ್ ನಂಬರ್ 9ರಲ್ಲಿ ತೋರಿಸಿ. ಅಲ್ಲಿ ಚೆಕ್ ಮಾಡ್ತಾರೆ, ಔಷಧಿ ಕೊಡ್ತಾರೆ" ಅಂತ ಹೇಳಿದ ಆತ.

ರಾಗಿಣಿ ಮೆಲುದನಿಯಲ್ಲಿ "ನಿಮ್ಮಿಂದ ತುಂಬಾ ಹೆಲ್ಪ್ ಆಯಿತು, ಥ್ಯಾಂಕ್ಯೂ. ಆ ಅಂದ್ಹಂಗೆ ಅದೂ... ಅದೂ... ಅದೂ... ಅದೂ... ಡಾಕ್ಟ್ರಿಗೆ ಈ ಚೀಟಿ ತೋರಿಸಿ ಅವರು ಏನ್ ಹೇಳ್ತಾರೋ ಕೇಳ್ಕೊಂಡು ಬರ್ತೀನಿ. ಅಲ್ಲೀವರೆಗೂ ಈ ರಾಣಿನಾ ಇಲ್ಲೇ ಇಟ್ಕೊಂಡಿರಿ. ಇದು ತುಂಬಾ ಸೂಕ್ಷ್ಮ. ಇಂಜೆಕ್ಷನ್ ಅಂದ್ರೆ ಮೂರ್ಛೆ ಹೋಗತ್ತೆ. ಅಲ್ಲೇ ಸೂಸು, ನಂಬರ್ 2 ಮಾಡ್ಕೊಳುತ್ತೆ. ನಾನು ಹೀಗ್ಹೋಗಿ ಹಾಗೆ ಬರ್ತೀನಿ" ಅಂತ ಹೇಳಿ ಬ್ಯಾಸ್ಕೆಟ್ ಅಲ್ಲೇ ಇಟ್ಟು ಹೊರಟ್ಳು.

"ಡಾಕ್ಟರ್ ನೋಡಬೇಕಾಗಿರೋದು ನಿಮ್ಮನ್ನಲ್ಲ, ನಿಮ್ ನಾಯಿನಾ" ಅಂತ ಅಂದ ಅ ಕೌಂಟರಿನಲ್ಲಿದ್ದಾತ. ಕೂಡಲೇ ರಾಗಿಣಿ "ಅದಕ್ಕೆ 4 ತಿಂಗಳು ಅಷ್ಟೆ" ಅಂದ್ಲು.

"ಇದೊಳ್ಳೆ ಕತೇನಲ್ಲ. ಹೂಂ... ರೂಮ್ ನಂಬರ್ 9ಕ್ಕೆ ಹೋಗಿ. ನೀವು ಇನ್ನೂ ಎರಡು ದಿನ ತಪ್ಪದೇ ಬರಬೇಕಾಗುತ್ತೆ" ಅಂದ.

ರಾಗಿಣಿ "ನಾನು ಒಬ್ಳೇ ಬಂದ್ರ ಸಾಕೋ, ರಾಣೀನೂ ಕರಕೊಂಡ್ ಬರಬೇಕಾ" ಅಂದಳು.

"ನಿಮ್ಮನ್ನಲ್ಲ ಡಾಕ್ಟರ್ ನೋಡೋದು ನಾಯಿಮರಿನಾ" ಎನ್ನುತ್ತಾ ಬ್ಯಾಸ್ಕೆಟ್ ಅವರಿಗೆ ಕೊಟ್ಟ.

ಬ್ಯಾಸ್ಕೆಟ್ ನಲ್ಲಿದ್ದ ರಾಣಿನ ಎತ್ತಿ, "ರಾಣಿ ಪುಟ್ಟಿ, ಡಾಕ್ಟ್ರು ತುಂಬಾ ಒಳ್ಳೇವ್ರು ಸುಮ್ನೆ ನೋಡ್ತಾರೆ, ಹೆದರ್ಕೋಬೇಡ ನಾನು ಪಕ್ಕದಲ್ಲೇ ಇರ್ತೀನಿ". ರೂಂ ನಂಬರ್ 9 ಎನ್ನುತ್ತಾ ಮುಚ್ಚಿದ ಬಾಗಿಲನ್ನು ತಳ್ಳಿದಳು. ಅಲ್ಲೇ ಟೇಬಲ್ ಹತ್ತಿರ ಡಾಕ್ಟರ್ ನಾಯಿಮರಿನ ರಾಗಿಣಿ ಕೈಯಿಂದ ಇಸ್ಕೊಂಡು ಚೆಕ್ ಮಾಡಿದರು.

"ಏನಮ್ಮಾ ಹೆಸರು" ಅಂದ್ರು ಡಾಕ್ಟರ್.

ತುಸು ನುಲಿಯುತ್ತಾ "ರಾಗಿಣಿ" ಅಂದಳು.

ಡಾಕ್ಟ್ರು ತಲೆಯೆತ್ತಿ ನೋಡಿ "ನಿನ್ನ ಹೆಸರಲ್ಲ ನಾಯಿದು".

"ಓ ಹೌದಾ? ನಾನು ನನ್ಹೆಸ್ರು ಕೇಳ್ತಾ ಇದೀರಾ ಅಂದ್ಕೊಂಡೆ. ಆದ್ರ ಹೆಸರು ರಾಣಿ" ಅಂದಳು. ಡಾಕ್ಟರ್ ನಿಧಾನವಾಗಿ ಚೆಕ್ ಮಾಡ್ತಾ ಇದ್ರು. ರಾಣಿ ಕುಂಯ್ ಎಂದರೆ ರಾಗಿಣಿಗೆ ಆತಂಕ. ಡಾಕ್ಟ್ರು ಇಂಜೆಕ್ಷನ್ ಕೊಡ್ತೀನಿ ಅಂತ ಸಿರಿಂಜ್ ತಗೊಂಡರು.

"ಡಾಕ್ಟ್ರೆ, ಅದು ತುಂಬಾ ಚಿಕ್ಕ ಮರಿ, ನೋವಾಗುತ್ತೆ, ಬೇಡ ನನಗೆ ಕೊಡಿ" ಎಂದಳು. ಡಾಕ್ಟ್ರು ಗಾಬರಿಯಿಂದ "ನಿನಗಾ? ಬಾ ಇಲ್ಲಿ. ಹಿಡ್ಕೊ ನಾಯಿನ" ಅಂತ ಹೇಳಿ ಇಂಜೆಕ್ಷನ್ ಚುಚ್ಚಿದರು. ರಾಣಿ ಕೊಂಚ ಅಲುಗಾಡಿತು.

ರಾಗಿಣಿ ಅಯ್ಯೋ ಪಾಪ ನೋವಾಯಿತೋ ಏನೋ ಅಂತ ಅನ್ಕೊಂಡು, "ಪೇನ್ ಕಿಲ್ಲಿಂಗ್ ಟ್ಯಾಬ್ಲೆಟ್ಸ್, ಸಿರಪ್, ಟಾನಿಕ್ ಬರಕೊಡ್ತೀರಾ ಡಾಕ್ಟ್ರೆ" ಅಂತ ಕೇಳಬೇಕು ಅಂತ ತಿರುಗುವಷ್ಟರಲ್ಲಿ ರಾಣಿ ಟೇಬಲ್ ಮೇಲಿಂದ ಜಂಪ್ ಮಾಡಿ ಬಾಗಿಲ ಕಡೆ ಓಡ್ತು. ಅದರ ಹಿಂದೇನೇ "ರಾಣಿ, ರಾಣಿ" ಅಂತ ಕೂಗ್ತಾ ಹೊರಗೆ ಹೋದಳು ರಾಗಿಣಿ. ಅಲ್ಲಿ ರಾಣಿ ತನ್ನ ಜಾತಿಯದೇ ನಾಯಿಮರೀನ ಅಟ್ಟಿಸಿಕೊಂಡು ಒಂದೇ ಉಸಿರಿನಲ್ಲಿ ಓಡಿ ಹೋಯ್ತು.

ರಾಗಿಣಿ "ಏ ಪುಟ್ಟಿ, ರಾಣಿ.... ರಾಣಿ.... stop.... stop...... don't run.....come back.... "ಅಂತ ಕೂಗ್ತಾ ಓಡಿದಳು. ಹಾಕಿದ್ದ ಚಪ್ಪಲ್ಇ ಜಾರುತ್ತಿತ್ತು. "ರಾಣೀ, ರಾಣೀ come back" ಅಂತ ಕೂಗ್ತಾ ಅಲ್ಲೇ ನಿಂತಳು.

ಕೊಂಚ ಹೊತ್ತಾದ್ಮೇಲೆ ಎರಡು ಕೈಯಲ್ಲೂ ಒಂದೊಂದು ಪೊಮೆರಿಯನ್ ನಾಯಿ ಹಿಡ್ಕೊಂಡು ಹೀರೋ ತರಹ ಒಬ್ಬ ಮುಂದೆ ಬಂದು ನಿಂತು, "ಹಾಯ್.... ಇದು ನಮ್ಮ ನಾಯಿ, male, ಹೆಸರು ಪೃಥ್ವಿ. ನನ್ ಹೆಸರು ರಾಕೇಶ್. ಆ ಬೈದಬೈ ತಾವು?"

"ನನ್ ಹೆಸ್ರು ರಾಗಿಣಿ, ನಾಯಿಯ ಹೆಸರು ರಾಣಿ. ಅದು ನನ್ನ ಹಾಗೇ ಹೆಣ್ಣು" ಅಂದ್ಲು.

"Nice Meeting you" ಅಂದ ರಾಕೇಶ್. "Me too" ಅಂದ್ಲು ರಾಗಿಣಿ.

ಇಬ್ಬರೂ ಪಾರ್ಕಿಗೆ ಹೋಗಿ ಅಲ್ಲಿ ಬೆಂಚಿನ ಮೇಲೆ ಕೂತ್ಕೊಂಡು ಪರಸ್ಪರ ಪರಿಚಯ ಮಾಡ್ಕೊಂಡ್ರು. ಕಾಲ ಸಂದೀಲಿ ಓಡಾಡ್ತಾ, ಕುಣೀತಾ, ಬಾಲ ಆಡುಸ್ತಾ ರಾಣಿ-ಪೃಥ್ವಿ ಹಿಂದಿನ ಜನ್ಮದಲ್ಲಿ ಪರಿಚಯವಾದಂತೆ ಕುಣಿದಾಡುತ್ತಿದ್ದವು.. ಗಂಟೆಗಳು... ದಿನ... ವಾರ,.. ತಿಂಗಳುಗಳು ಕಳೆಯುತ್ತಿದ್ದವು.

ಸಂಜೆ ಪತ್ರಿಕೆಯ ವರದಿ: ರಾಕೇಶ್-ರಾಗಿಣಿ ಜೋಡಿ ಫ್ಯಾಷನ್ ಪೆರೇಡ್ ನಲ್ಲಿ ಪ್ರಥಮ ಬಹುಮಾನ ಪಡೆದರು. ತಾವೇನು ಕಡಿಮೆ ಎಂದು ಪೃಥ್ವಿ-ರಾಣಿ ಜೋಡಿ Dog show ಒಂದರಲ್ಲಿ 'ಬೆಸ್ಟ್ ಪೇರ್' ಎಂದು ಆಯ್ಕೆಗೊಂಡು ಚಿನ್ನದ ಪದಕ ಗೆದ್ದಿವೆ.

ಮರೆತಿದ್ದು: ರಾಕೇಶ್-ರಾಗಿಣಿ ಇವರ ಮದುವೆ ಸದ್ಯದಲ್ಲೇ ಸರಳವಾಗಿ ನಡೆಯುತ್ತದೆ.

ರೇಖೆಗಳು

–ರಾಧಿಕಾ

ಹುಟ್ಟಿನಿಂದ ಅಂಗೈಗಿರುವ
ಬ್ರಹ್ಮದೇವನ ಅಂಕಿತವಿದು
ನನ್ನಸ್ತಿತ್ವದ ಕುರುಹಾಗಿಹ
ಗೆರೆಗಳು ನಾಮಫಲಕವು

ಮೃದು ಮುಷ್ಟಿಗೆ ಹಬ್ಬಿಹ
ಮುಷ್ಟಿಯೇ ನೆಲವಾಗಿಹ
ಸಾಲುಳುಮೆಯಾದ ಬಳ್ಳಿಯು
ದೆಸೆಯುಲಿವ ಕೊರವಂಜಿಯು

ರಕ್ತ ಮಾಂಸ ಮೂಳೆಗಳು
ಜಾತದೆಳೆಯ ಹಿಡಿದಿರಲು
ಒಬ್ಬನಿಗೊಂದೇ ವಿನ್ಯಾಸವಿದು
ವ್ಯಕ್ತಿಯೊಬ್ಬನ ವಿಶಿಷ್ಟತೆಯು

ಕೈಹಿಡಿವರ ಪ್ರಭಾವವ
ಮುದ್ರಿಸಿಕೊಳ್ಳದ ಸಖ
ಕೈಬಿಡುವವರ ನಿರ್ಮಮಕೆ
ನಿರ್ವಿಕಾರ ಜಡ ಸಂತ

ಸೋಮಾರಿಗೆ ಚಾಟಿ ಬೀಸುವ
ಗುರುವಿದು ಹುಬ್ಬು ಗಂಟಿಕ್ಕಿ
ಶ್ರಮಿಕನಿಗೆ ಬೆಂಬಲವು
ಗುರುಬಲ ನೀಡಿ ಹರಸಿ

ಚಿತ್ತ ದೃಢವಿರಬೇಕು
/ಗುರಿಯ ಆಲೋಚಿಸಲು
ರೇಖೆಗಳು ಸವೆಯಬೇಕು
ಜಯವದು ಕೈಗೂಡಲು

ನಡೆಯದ ಗಡಿಯಾರಗಳು

- ನಾಗರತ್ನ ಚಂದ್ರಶೇಖರ್

kನಾನು ಸಂಗ್ರಹಿಸಿದ್ದ ಅನೇಕ ಕೈಗಡಿಯಾರಗಳಿಗೆ ಕೆಲಸವಿಲ್ಲದೆ, ಕೈ ಅಲಂಕರಿಸದೆ ಒಂದು ರೀತಿಯ ವರ್ಷಾನುಗಟ್ಟಲೆ ಕ್ವಾರಂಟೈನಿನಲ್ಲೇ ಇದ್ದವು. ಅವುಗಳೆಲ್ಲ ಆಟೋಮ್ಯಾಟಿಕ್ ಆಗಿ ಬ್ಯಾಟರಿ ಸೆಲ್ಲಿನಲ್ಲೇ ಕಾರ್ಯನಿರ್ವಹಿಸುತ್ತಿದ್ದುದರಿಂದ ಕೀಲಿ ತಿರುಗಿಸುವಂತೆಯೂ ಇರಲಿಲ್ಲ. ನನ್ನ ಅಲಂಕಾರ ಸಾಮಗ್ರಿಗಳ ಪೆಟ್ಟಿಗೆಗಳ ಮಧ್ಯೆ ಈ ಗಡಿಯಾರಗಳು ಚಿರನಿದ್ರೆಗೆ ಜಾರಿ ಹೋಗಿದ್ದವೋ ಏನೋ ಎನಿಸುತ್ತಿತ್ತು. ಸಾಮಾನ್ಯವಾಗಿ ಎಲ್ಲ ಅಲಂಕಾರಗಳೂ ಮುಗಿದ ಮೇಲೆ ಕೊನೇಯದಾಗಿ ಗಮನ ಹೋಗುವುದು ಕೈಗಡಿಯಾರದ ಕಡೆಗಲ್ಲವೆ! ಹಾಗಾಗಿ ತರಾತುರಿಯಲ್ಲಿ ಯಾವುದಾದರೊಂದನ್ನು ಕೈಗೆ ಹಾಕಿಕೊಂಡರಾಯಿತು ಎನ್ನುವ ಉದಾಸೀನ. ನನ್ನ ಕೈ ಸ್ಪರ್ಶಕ್ಕೆ ಅವೇನೂ ಎಚ್ಚೆತ್ತುಕೊಂಡು ಜೀವ ತುಂಬಿಕೊಳ್ಳುವಂತಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಛೆ! ಅದು ಆಗಲೂ ಸತ್ತೇ ಹೋದಂತೆ ನಡೆಯದೆ, ನುಡಿಯದೆ ನನ್ನನ್ನು ಅಣಕಿಸುತ್ತಾ ಇರುತ್ತಿತ್ತು. ಪುಣ್ಯಕ್ಕೆ ಈಗೀಗ ಟೈಂ ಎಷ್ಟು ಎಂದು ಕೇಳುವವರು ಹೆಚ್ಚು ಜನ ಇಲ್ಲ. ಒಂದೋ ಅವರ ಹತ್ತಿರವೇ ಮೊಬೈಲಿನಲ್ಲೋ, ಕೈಗಡಿಯಾರದಲ್ಲೋ ವೇಳೆ ತಿಳಿದುಕೊಳ್ಳುತ್ತಾರೆ. ಹಾಗಾಗಿ ನನಗೆ ಈ ಗಡಿಯಾರ ನಡೆದರೂ ಸರಿ, ನಡೆಯದಿದ್ದರೂ ಸರಿ. ಬೋಳು ಕೈಗಿಂತ ವಾಸಿ ಅಲ್ಲವೆ? ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಬೇಕಾದ ಸಮಯ ನನ್ನ ಹತ್ತಿರ ಕೈಗಡಿಯಾರವೇ ಇರಲಿಲ್ಲ. ಅಪ್ಪನಿಂದ ಎರವಲು ಪಡೆದ ಅಷ್ಟಗಲದ ಕೈಗಡಿಯಾರ ಕಟ್ಟಿಕೊಂಡೇ ಹೋಗುತ್ತಿದ್ದೆ. ಗಡಿಯಾರವಿಲ್ಲದಿದ್ದರೇನು! ಸಮಯ ಓಡದೇ ನಿಲ್ಲುವುದೆ?



ನನ್ನ ಮದುವೆಯ ನಂತರ ಪತಿ ನನಗೆ ಹೆಚ್.ಎಮ್.ಟಿ. ಫ್ಯಾಕ್ಟರಿಯಿಂದಲೇ ಸ್ನೇಹಿತರ ಮೂಲಕ ಒಂದು ಪುಟ್ಟ ಕೈಗಡಿಯಾರ ಖರೀದಿಸಿ ಕೊಟ್ಟಿದ್ದರು. ಅದನ್ನು ಅದೆಷ್ಟು ವರ್ಷಗಳು ಜೋಪಾನವಾಗಿ ಕಾಪಾಡಿಕೊಂಡೇ ಬಂದಿದ್ದೆ. ಗಡಿಯಾರಗಳ ಸಂಖ್ಯೆ ಮುಂದಿನ ಹಲವಾರು ವರ್ಷಗಳಲ್ಲಿ ಜಾಸ್ತಿಯಾಗುತ್ತಾ ಹೋಯಿತು. ಈಗ ಕರೋನ ದೆಸೆಯಿಂದ ಹೊರಗಿನ ಓಡಾಟವೇ ಇಲ್ಲದಂತಾಗಿ ನಡೆಯದ ಗಡಿಯಾರಗಳೂ ಉಸಿರುಗಟ್ಟಿ ಪೆಟ್ಟಿಗೆಯೊಳಗೇ ನಿದ್ರೆಗೆ ಜಾರಿವೆ.

ಗಡಿಯಾರದ ವಿಷಯ ಮಾತಾಡಲು ಹೊರಟರೆ ಗಂಟೆಗಳೇ ಸಾಲದು, ಅಷ್ಟು ಸರಕು ಇದೆ. ಸ್ವಿಟ್ಜರ್ಲೆಂಡ್ ಗಡಿಯಾರಗಳು ಜಗತ್ಪ್ರಸಿದ್ಧ ಎಂದು ಗೊತ್ತಿದ್ದರಿಂದ ಅಲ್ಲಿಗೆ ಪ್ರವಾಸ ಹೋದಾಗ ನೆನಪಿಗಾಗಿ ಖರೀದಿಸಿದ್ದೂ ಆಯಿತು. ಕುಕೂ ಗಡಿಯಾರವೊಂದನ್ನು ಜೋಪಾನವಾಗಿ ತಂದು ಗೋಡೆಗೇರಿಸಿ ಗಂಟೆಗೊಮ್ಮೆ, ಅರ್ಧ ಗಂಟೆಗೊಮ್ಮೆ ಕುಕೂ

ಹಕ್ಕಿಯ ಧ್ವನಿ, ಅದರ ಮುದ್ದು ಮುಖ ನೋಡುವಾಗ ಅದೆಷ್ಟು ಹೆಮ್ಮೆ! ಆದರೆ ವಾರಕ್ಕೊಮ್ಮೆ ಅದರ ಸರಪಣಿ ಎಳೆಯದಿದ್ದರೆ ಅದು ಸ್ತಬ್ಧವಾಗಿ ಬಿಡುತ್ತಿತ್ತು. ಕಾಲ ಸರಿದಂತೆ ಗೋಡೆ ಮೇಲಿನ ಆ ಗಡಿಯಾರ ನಡೆಯದೆ ನಿಂತಿದ್ದೇ ಹೆಚ್ಚು.

ಗಡಿಯಾರಗಳು ಈಗ ಮಕ್ಕಳಿಂದ ಹಿಡಿದು ಎಲ್ಲರಿಗೂ ಕೈಗೆಟುವಂತಿದೆ. ಮಿಕ್ಕಿ ಮೌಸ್ ಚಿತ್ರದ ಬಣ್ಣಬಣ್ಣದ ಕೈ ಗಡಿಯಾರಗಳು ಮಕ್ಕಳಿಗೆ ಅತ್ಯಂತ ಪ್ರಿಯ. ರೋಲೆಕ್ಸ್ ಬ್ರಾಂಡಿನ ಕೋಟಿ ರೂಪಾಯಿ ಬೆಲೆ ಬಾಳುವ ಚಿನ್ನ, ವಜ್ರ ಖಚಿತ ಗಡಿಯಾರಗಳು ಶ್ರೀಮಂತರ ಕೈಗಳನ್ನು ಅಲಂಕರಿಸುತ್ತವೆ. ಗಡಿಯಾರದೊಳಗೇ ಸ್ವಿಸ್ ಬ್ಯಾಂಕ್ ಖಾತೆಯ ಲಾಕರ್ ನಂಬರನ್ನು ರಹಸ್ಯವಾಗಿ ಇಟ್ಟುಕೊಂಡ ಭೂಪತಿಗಳೂ ಕಡಿಮೆಯಿಲ್ಲ. ಹೈದರಾಬಾದಿನ ಸಾಲಾರ್ ಜಂಗ್ ಮ್ಯುಸಿಯಂನಲ್ಲಂತೂ ಅದ್ಭುತ ಗಡಿಯಾರಗಳ ಸಂಗ್ರಹವಿದೆ. ಹಾಗೆಯೇ ಅಮೇರಿಕದಲ್ಲೂ ಅಂಥದೊಂದು ಖಾಸಿ ಸಂಗ್ರಹಾಲಯ - ಹೌಸ್ ಆನ್ ದಿ ರಾಕ್ (ವಿಸಕಾನ್‌ಸಿನ್ ರಾಜ್ಯ) ವೊಂದರಲ್ಲಿ ವಿಚಿತ್ರ ವಿನ್ಯಾಸದ ಗಡಿಯಾರಗಳನ್ನು ನೋಡಿದ್ದೆವು.

ಸ್ನೇಹಿತರಿಗೆ, ಪ್ರೀತಿಪಾತ್ರರಿಗೆ ಕೊಡಬಹುದಾದ ಒಂದು ಒಳ್ಳೆಯ ಉಡುಗೊರೆ ಎಂದರೆ ಕೈಗಡಿಯಾರಗಳು. ಹಾಗೆಯೇ ಮದುಮಕ್ಕಳಿಗೆ ಹೆಚ್ಚಾಗಿ ಬರುವ ಉಡುಗೊರೆಗಳ ಪಟ್ಟಿಯಲ್ಲಿ ಗೋಡೆ ಗಡಿಯಾರಗಳೇ ಹೆಚ್ಚು. ಸಮಯ ಪಾಲನೆ ಜೀವನದಲ್ಲಿ ಎಷ್ಟು ಮುಖ್ಯ ಅಲ್ಲವೆ! ಮನೆಯ ಗೋಡೆಗೊಂದು, ಎಡಗೈಗೋ, ಬಲಗೈಗೋ ಒಂದು ಗಡಿಯಾರ ಇದ್ದಾಗ ಜೀವನ ಕ್ರಮಬದ್ಧವಾಗಿ ಸಾಗಬಲ್ಲದು. ಆದರೆ ಆ ಗಡಿಯಾರಗಳು ನಡೆಯುತ್ತಿರಬೇಕು ಅಷ್ಟೆ.

ಪ್ರಪಂಚದ ಎಲ್ಲ ಗಡಿಯಾರಗಳು ಒಂದೇ ಸಮಯ ತೋರಿಸುವುದಿಲ್ಲ ಎಂಬ ಸತ್ಯ ಹೆಚ್ಚಿನವರಿಗೆ ಗೊತ್ತು. ಅಮೇರಿಕ, ಇಂಗ್ಲೆಂಡ್, ರಷ್ಯಾ, ಆಸ್ಟ್ರೇಲಿಯಾ, ಚೀನಾ ಇತ್ಯಾದಿ ದೇಶಗಳ ಸಮಯಕ್ಕೂ, ಭಾರತದ ಸಮಯಕ್ಕೂ ಅನೇಕ ಗಂಟೆಗಳ ವ್ಯತ್ಯಾಸ ಇರುತ್ತದೆ. ಅಂತಾರಾಷ್ಟ್ರೀಯ ಪ್ರಯಾಣಿಕರು ಆಯಾ ದೇಶಗಳಿಗೆ ಭೇಟಿ ಕೊಟ್ಟಾಗ ತಮ್ಮ ಗಡಿಯಾರದ ಮುಳ್ಳುಗಳನ್ನು ಹಿಂದೆ ಮುಂದೆ ತಿರುಗಿಸಿಕೊಳ್ಳುವುದು ಅನಿವಾರ್ಯ. ರಾತ್ರಿ, ಹಗಲುಗಳ ವ್ಯತ್ಯಾಸ ನೋಡಿಕೊಂಡೇ ನಾವು ಅಮೇರಿಕದಲ್ಲಿರುವ ಮಕ್ಕಳಿಗೆ ಕರೆ ಮಾಡುವುದು. ವರ್ಷಕ್ಕೆರಡು ಬಾರಿ ಅವರೂ ಕೂಡ ಗಡಿಯಾರದ ಮುಳ್ಳುಗಳನ್ನು ಹಿಂದೆ ಮುಂದೆ ಮಾಡಿಕೊಳ್ಳುತ್ತಾರೆ. ಇದನ್ನೆಲ್ಲಾ ಗಮನಿಸಿಯೇ ನಾವು ವಿದೇಶ ಗಳಲ್ಲಿರುವ ಬಂಧುಗಳನ್ನು ಸಂಪರ್ಕಿಸಬೇಕಾಗುತ್ತದೆ. ನಮಗೆ ಮಧ್ಯಾಹ್ನ ಎರಡು ಗಂಟೆಗೆ ಮಾತಾಡಬೇಕೆನಿಸಿ ಕರೆ ಮಾಡಿದರೆ ಅಲ್ಲಿನವರು ಮಧ್ಯರಾತ್ರಿ ನಿದ್ದೆಯಲ್ಲಿರುತ್ತಾರೆ, ಜೋಕೆ. ವಿದೇಶ ಪ್ರವಾಸಿಗಳ ಅನುಕೂಲಕ್ಕಾಗಿ ಪ್ರತಿಷ್ಠಿತ ಹೋಟೆಲ್ ಗಳಲ್ಲಿ ಎಲ್ಲಾ ದೇಶಗಳ ಸಮಯ ತೋರಿಸುವ ಗೋಡೆ ಗಡಿಯಾರಗಳನ್ನು ಪ್ರವೇಶದಲ್ಲೇ ಹಾಕಿರುತ್ತಾರೆ.

ನೀವು ಗ್ರೀನ್ ವಿಚ್ ಮೀನ್ ಟೈಂ ಬಗ್ಗೆ ಓದಿರಬಹುದಾದರೆ ಲಂಡನ್ ಬಳಿಯ ಗ್ರೀನ್ ವಿಚ್‌ನ ರಾಯಲ್ ಅಬ್ಸರ್ವೇಟರಿ ಯಲ್ಲಿರುವ ಗಡಿಯಾರ ವರ್ಷಪೂರ್ತಿ ಯಾವುದೇ ಸಮಯದ ವ್ಯತ್ಯಾಸವಿಲ್ಲದೆ ನಿಶ್ಚಿತವಾದ ವೇಳೆಯನ್ನು ತೋರಿಸು ವುದರಿಂದ ಇಲ್ಲಿಂದ ನಾವು ಪ್ರಪಂಚದ ಎಲ್ಲಾ ಭಾಗಗಳ ಸಮಯವನ್ನು ಪರಿಶೀಲಿಸಬಹುದು.

ಪದೇಪದೇ ಕೈಗಡಿಯಾರ ನೋಡಿಕೊಳ್ಳುತ್ತಿದ್ದರೆ ಎದುರಿಗಿದ್ದ ವ್ಯಕ್ತಿಗೆ ಹೊತ್ತಾಯಿತು, ನಿಮ್ಮ ಸಮಯ ಮುಗಿಯಿತು ಎನ್ನುವ ಸೂಚನೆ ರವಾನೆ ಮಾಡಿದಂತೆ. ಈ ಸೂಕ್ಷ್ಮ ತಿಳಿದುಕೊಳ್ಳಬೇಕು. ಕಾಲೇಜು ವಿದ್ಯಾರ್ಥಿಗಳಂತೂ ಬೋರು ಹೊಡೆಸುವ ಉಪನ್ಯಾಸ ಎಷ್ಟು ಬೇಗ ಮುಗಿಯುವುದೋ ಎಂದು ಕೈಗಡಿಯಾರದಲ್ಲೇ ಕಣ್ಣು ನೆಟ್ಟಿರುತ್ತಾರೆ. ಕಛೇರಿ

ಕೆಲಸಕ್ಕೆ ಸಮಯ ಹೊಂದಿಸಿಕೊಳ್ಳಬೇಕಾದರೆ ಮನೆ ಗಡಿಯಾರವನ್ನು ಹತ್ತು ನಿಮಿಷ ಮುಂದಕ್ಕೆ ಮಾಡಿ ಇಟ್ಟರೆ ಒಳ್ಳೆಯದು.

ಈಗಿನ ಕೆಲವು ಬಿಸ್‌ನೆಸ್ ಎಕ್ಸಿಕ್ಯೂಟಿವ್ಸ್ ಗಳಿಗೆ, ವೈದ್ಯರಿಗೆ 'ಟೈಂ ಈಸ್ ಮನಿ, ಮನಿ ಈಸ್ ಟೈಂ' ಎನ್ನುವಷ್ಟು ಕೆಲಸದ ಒತ್ತಡಗಳು. ಅದೇ ರೀತಿ ಸೋಮಾರಿಗಳ ಪಾಲಿಗೆ ಗಡಿಯಾರಗಳು ನಿಂತೇ ಹೋಗಿರುತ್ತವೆ. ನಡೆಯದ ಗಡಿಯಾರಗಳೇ ಇವರ ಆಸ್ತಿ.

ನಾವು ಮಂಗಳೂರಿನಲ್ಲಿದ್ದಾಗ ನಡೆದ ಘಟನೆಯೊಂದು ಈಗ ನೆನಪಿಗೆ ಬರುತ್ತಿದೆ. ನಮ್ಮ ಮನೆಯ ಪಕ್ಕದ ಅಪಾರ್ಟಮೆಂಟ್ ಒಂದರಲ್ಲಿ ಬೆಳಗಿನ ಜಾವ ನಾಲ್ಕರಿಂದ ಅಲಾರಂ ಹೊಡೆದುಕೊಳ್ಳತೊಡಗಿತು. ಬೆಳಗಿನ ಜಾವ ಓದಿಕೊಳ್ಳಲು ವಿದ್ಯಾರ್ಥಿಗಳು ಗಡಿಯಾರದಲ್ಲೋ, ಮೊಬೈಲಿನಲ್ಲೋ ಅಲಾರಾಂ ಇಟ್ಟುಕೊಳ್ಳುವುದು ಸಾಮಾನ್ಯ ಸಂಗತಿ. ಎಚ್ಚರಗೊಂಡ ಮೇಲೆ ಅದನ್ನು ನಿಲ್ಲಿಸಿ ಮತ್ತೆ ಮಲಗಿಕೊಳ್ಳುವ ಭೂಪತಿಗಳೂ ಇದ್ದಾರೆ. ಆದರೆ ಈ ಎಚ್ಚರಿಕೆಯ ಗಂಟೆ ಒಂದೇ ಸಮನೆ ಬೆಳಗಿನ ನಾಲ್ಕರಿಂದ ಐದು ಗಂಟೆಯಾದರೂ ನಿಲ್ಲದೆ ಮೊಳಗುತ್ತಲೇ ಇದ್ದಾಗ, ಇದರಿಂದ ನಿದ್ರೆಗೆಟ್ಟಿದ್ದ ನಮಗೆ ಸಂಶಯವೂ ಆಗತೊಡಗಿತು. ಏನಾದರೂ ಎಮರ್ಜೆನ್ಸಿ ಇದ್ದಿರಬಹುದೇ ಏನೋ ಎಂದುಕೊಂಡು ಪೋಲೀಸ್ ಸ್ಟೇಷನ್‌ಗೇ ಫೋನ್ ಮಾಡಿದೆವು. ಅವರೂ ನಿದ್ದೆಯಿಂದ ಎದ್ದು ಬರಲು ಅರ್ಧ ತಾಸು ಆಗಿರಬಹುದು. ಬೆಳಿಗ್ಗೆ ಗೊತ್ತಾದ ವಿಷಯವೆಂದರೆ ಒಳಗಿದ್ದ ಕುಂಭಕರ್ಣನಿಗೆ ಪೋಲೀಸರು ಬಂದು ಬಾಗಿಲು ಬಡಿದಾಗಲೇ ಎಚ್ಚರವಾಗಿದ್ದಂತೆ, ಅಷ್ಟರಲ್ಲಿ ಅಲಾರಂ ಕೂಡ ಶಕ್ತಿ ಕಳೆದುಕೊಂಡು ಬಾಯಿ ಮುಚ್ಚಿಕೊಂಡಿತ್ತು.

ಒಮ್ಮೆ ಒಂದು ವೃದ್ಧಾಶ್ರಮಕ್ಕೆ ಹೋಗುವ ಪ್ರಮೇಯ ಬಂದಿತ್ತು. ಆಗ ಅಲ್ಲಿನ ವೃದ್ಧ ಮಹಿಳೆಯೊಬ್ಬರು ತಮ್ಮ ಸಂದರ್ಶನದಲ್ಲಿ ಹೇಳಿದ ಮಾತುಗಳು ನನ್ನ ಹೃದಯಕ್ಕೆ ತಟ್ಟಿತು. "ಈಗ ನಾವೆಲ್ಲ ನಡೆಯದ ಗಡಿಯಾರಗಳು. ಕೀಲಿ ಕೊಟ್ಟರಷ್ಟೇ ನಡೆಯುವಂತೆ ಇಲ್ಲಿರುವಷ್ಟು ದಿನ ಇವರು ಕೊಡುವ ಊಟ, ತಿಂಡಿ ತಿಂದು ಓಡಾಡಿಕೊಂಡಿರಲು ಸಾಧ್ಯ. ನಾವು ಅನಾಥರಲ್ಲ, ಆದರೆ ನಮ್ಮ ಅಗತ್ಯ ಈಗ ನಮ್ಮ ಮನೆಯವರರಿತಿಲ್ಲ ಅಷ್ಟೆ" ಎಂದು ನಿಟ್ಟುಸಿರುಬಿಟ್ಟರು. ಕೈಗಡಿಯಾರಗಳು ನಡೆಯದಿದ್ದರೆ ಶೋಪೀಸ್ ಗಳಾಗಿಯೋ, ಹಳೇ ಸಾಮಾನುಗಳ ಗುಜರಿಗೋ ಸುಲಭವಾಗಿ ಸೇರಿಸಿಬಿಡಬಹುದು. ಆದರೆ ಮನುಷ್ಯರನ್ನು? ಮತ್ತೆ ಚಾಲನೆಗೊಳಿಸಿ ನಡೆಸುವುದು, ನುಡಿಸುವುದು ಆ ದೇವರಿಂದ ಮಾತ್ರ ಸಾಧ್ಯ! ಏನಂತೀರಿ?

ಈ ಪುರಾಣ ಬರೆಯಲು ಪ್ರೇರೇಪಣೆ ಸಿಕ್ಕಿದ್ದು ಬಸ್ ಸ್ಟಾಪಿನಲ್ಲಿ ಗೆಳತಿಯರೆಲ್ಲ ಪ್ರವಾಸ ಹೋಗಲು ಟೆಂಪೊ ಟ್ರಾವಲರ್ ಗೆ ಕಾಯುತ್ತಿದ್ದಾಗ. ಕಾಯುವುದೆಂದರೆ ಗೊತ್ತಲ್ಲ. ಪದೇ ಪದೇ ಗಡಿಯಾರ ನೋಡಿಕೊಂಡರೂ ನನ್ನ ಕೈಗಡಿಯಾರದಲ್ಲಿ ಒಂದೇ ಸಮಯ. ಒಂದಿಬ್ಬರು ಗೆಳತಿಯರನ್ನು ನಾಚಿಕೆಯಿಂದಲೇ ಸಮಯ ಎಷ್ಟಾಯಿತು ಎಂದರೆ ಅವರದೂ ಅದೇ ಕತೆ! ನಡೆಯದ ಕೈಗಡಿಯಾರಗಳ ಸಂಖ್ಯೆ ಸಾಕಷ್ಟಿದೆ ಎಂಬ ಸತ್ಯ ಗೊತ್ತಾದ ಮೇಲೆ ಈಗ ನಿರಾಳ!

(ಚಿತ್ರಕೃಪೆ: ಅಂತರ್ಜಾಲ)

ವಾರ್ಧಕ ಷಟ್ಪದಿಯಲ್ಲೊಂದು ಕಥನ ಕವನ

ಚರವಾಣಿ ಚಾಪಲ್ಯ

(ಚರವಾಣಿ = ಮೊಬೈಲ್ ಫೋನ್)

– ಶೀಲಾ ಅರಕಲಗೂಡು

ಬಂದಿಹೆನು ನಾನಿಂದು ನನ್ನೊಲುಮೆ ಮಕ್ಕಳಿರ
ನಿಂದಿಹಿರಿ ನೀವುಗಳು ತವಕದಲಿ ಕಾಯುತ್ತ
ತಂದಿಹೆನು ನಿಮಗಾಗಿ ಹೊಸತೊಂದು ಕಥೆಯನ್ನು ಕೇಳುವಿರಿ ನೀವಲ್ಲವೆ
ಇಂದೆನಗೆ ಸಂತಸವು ನಿಮ್ಮೊಡನೆ ಕೂಡಿರಲು
ಚಂದವಿಹ ಷಟ್ಪದಿಯು ವಾರ್ಧಕವು ಜೊತೆಗಿಹುದು
ಸೌಂದರ್ಯ ತೋರುವುದು ದಿವ್ಯಾನುಭವ ಕೊಡುತ ಅನುಭವಿಸಬೇಕಲ್ಲವೆ ೧

ಅನುದಿನವು ನೀವೆಲ್ಲ ನಗುನಗುತಲೇಳುವಿರಿ
ದಿನಕರಗೆ ನಮಿಸುತ್ತ ತನುಶುಭ್ರಗೊಳಿಸುತ್ತ
ಮನೆಯೊಳಿಹ ಹಿರಿಯರಿಗೆ ದೇವರಿಗೆ ನಮಿಸುವಿರಿ ಶುಭದಿನವು ನಿಮದಲ್ಲವೆ
ದಿನಚರಿಯ ಯೋಜಿಸುತ ತಿಂಡಿಯನು ತಿನ್ನುವಿರಿ
ಮನವನನುಗೊಳಿಸುತಲಿ ಶಾಲೆಕಡೆ ತೆರಳುವಿರಿ
ಕನಸುಗಳ ನೇಯುತ್ತ ಸಂಭ್ರಮದಿ ಕಲಿಯುವಿರಿ ಹೀಗಿರಲು ಒಳಿತಲ್ಲವೆ ೨

ಎಲ್ಲ ಕಡೆ ಶಾಲೆಯಲಿ ಚರವಾಣಿ ನಿರ್ಬಂಧ
ಸಲ್ಲದದರುಪಯೋಗ ಮನೆಹೊರತು ಬೇರೆಕಡೆ
ನಿಲ್ಲಿಸಲು ದುರ್ಬಳಕೆ ಮಕ್ಕಳೊಳಿತಿನ ಹಿತಕೆ ಮಾಡಿದರು ನಿಯಮವನ್ನು
ಒಲ್ಲದಿಹ ನಿಯಮವನು ಕೇಳುತಲೆ ಮಕ್ಕಳಿಗೆ
ತಲ್ಲಣವು ಶುರುವಾಯ್ತು ತಕ್ಷಣವೆ ಮನದಲ್ಲಿ
ಚೆಲ್ಲಿದರು ಬಾಡಿಸಿದ ಮೊಗಗಳನು ಪೆಚ್ಚಾಗಿ ಕಥೆ ಮುಂದೆ ಕೇಳಿರಿನ್ನು ೩

ಅನಿರುದ್ಧನೆಂಬುವನು ಜಾಣನವ ಬಾಲಕನು
ದಿನನಿತ್ಯ ಚರವಾಣಿಯಲಿ ಪಾಠ ಕೇಳುತ್ತ
ತನಗರಿಯದಂತಲೆಯೆ ಚಟಬೆಳೆಸಿಕೊಂಡಿದ್ದ ಚರವಾಣಿಯಾಟದಲ್ಲಿ
ಇನಿತಿನಿತು ಬಳಸುವೆನು ಹೀಗೆಂದ ಮೊದಮೊದಲು
ಮನೆಮಂದಿಯನ್ನೆಲ್ಲ ನಂಬಿಸಿದ ಮಾತಿನಲಿ
ತನಗೆ ತಾ ಮೋಸವನು ಮಾಡುತ್ತಲಾಡುವನು ಮತ್ತೆ ಚರವಾಣಿಯಲ್ಲಿ ೪

ತಗಲಿಕೊಂಡಿಹ ಗೀಳು ಮಿತಿಮೀರಿ ಹೆಚ್ಚಾಗಿ
ತೆಗೆದಿಟ್ಟ ಚರವಾಣಿ ಪುಸ್ತಕದ ನಡುವಿನಲಿ
ಸಿಗದಂತೆ ಗುರುಗಳಿಗೆ ಮತ್ತಿತರ ಗೆಳೆಯರಿಗೆ ಬಿಡುವಿನಲಿ ನೋಡಲೆಂದು
ಬಿಗಿಶಿಸ್ತು ಶಾಲೆಯಲಿ ಪಾಲಿಸಲೆಬೇಕೆಂದು
ನಗುನಗುತ ತಿಳಿಸಿದರು ಮುಖ್ಯಗುರು ಸಭೆಯಲ್ಲಿ
ತೆಗೆದುಕೊಡಿ ಚರವಾಣಿ ತರವಲ್ಲ ಶಾಲೆಯಲಿ ಸಿಕ್ಕಿದರೆ ಶಿಕ್ಷೆಯೆಂದು ೫

ಮುಂದುವರೆದಿದೆ . . .

– ೨ –

ಅನಿರುದ್ಧನೆದೆ ನಡುಗಿ ಮೊಗದಲ್ಲಿ ಬೆವರಿಳಿದು
ಸನಿಹದಲೆ ಚೀಲದಲಿ ಬಚ್ಚಿಟ್ಟ ಬಗೆಯನ್ನು
ನೆನೆದವನು ಹೆದರಿದನು ಮುಂಬರುವ ದುರ್ಗತಿಗೆ ಪರಿತಪಿಸಿ ಮನಸಿನೊಳಗೆ
ತನಗೊದಗಿದಾ ಸ್ಥಿತಿಗೆ ತಾನೆ ಕಾರಣವೆನುತ
ಮನದಲ್ಲಿ ಮರುಮರುಗಿ ತನ್ನ ತಾ ಹಳಿಯುತ್ತ
ದಿನದಲ್ಲೆ ಕತ್ತಲೆಯು ಕವಿದಂತೆ ಮಂಕಾಗಿ ಬಂದನವ ಕ್ಲಾಸಿನೊಳಗೆ ೬

ನಿಲದವನ ಮನಸೀಗ ಪಾಠದಲಿ ನೋಟದಲಿ
ಬಲೆಯಲ್ಲಿ ಸಿಕ್ಕಮೊಲ ವಿಲಪಿಸುವ ತೆರದಲ್ಲಿ
ತಲೆಕೆಟ್ಟು ಹೋಗಿತ್ತು ಮುಂದಾರಿ ಹುಡುಕುತ್ತ ಕುಳಿತನವ ಮೌನದಲ್ಲಿ
ಮೆಲುದನಿಯಲಷ್ಟರಲೆ ರಿಂಗಣಿಸಿ ಚರವಾಣಿ
ಬಲಹೆಚ್ಚಿ ಧ್ವನಿಯಲ್ಲಿ ಮತ್ತಷ್ಟು ರಿಂಗಣಿಸೆ
ಕಲಿಯುತ್ತ ಕುಳಿತವರಿಗಾಶ್ಚರ್ಯ ಮೂಡಿಸಿತು ಗೊಂದಲವು ಮಕ್ಕಳಲಿ ೭

ಮಾಡುತಿಹ ಪಾಠವನು ನಿಲ್ಲಿಸಿದ ಗುರು ತಿರುಗಿ
ನೋಡಿದರು ಚರವಾಣಿ ಧ್ವನಿಸೂಸುತಿರುವೆಡೆಗೆ
ಬಾಡಿ ಬೆದರುತಲಿದ್ದನನಿರುದ್ಧನನು ಕಂಡು ಕ್ಷಣಕಾಲ ನಿಂತರಲ್ಲಿ
ಚಾಡಿಯನು ಹೇಳಲಿಕೆ ನಿಂತ ಕೆಲರನು ಕಂಡು
ಬೇಡವೆಂದರು ಕೋಪ ತಾನುಕ್ಕಿ ಮೇಲ್ಬಂದು
ತಾಡಿಸುತ ಮುಷ್ಠಿಯನು ಬಂದರನಿರುದ್ಧನೆಡೆ ನಡೆಯುತ್ತ ವೇಗದಲ್ಲಿ ೮

ಅನಿರುದ್ಧ ನಿಂತವನು ಬಾಗಿ ಚೀಲದೊಳಿಂದ
ಲನಿವಾರ್ಯವೆಂದೆನಣಿಸಿ ಹೊರತೆಗೆದ ಚರವಾಣಿ
ನೆನೆದು ಮುಂದಿನಗತಿಯ ಕೊಟ್ಟ ತಾ ಗುರುಗಳಿಗೆ ಕಣ್ಣೀರು ಸುರಿಸುತ್ತಲಿ
ಕನಿಕರಿಸಿ ಮನದಲ್ಲಿ ಕಠಿಣಮೊಗ ಮಾಡುತಲಿ
ಸನಿಹಕ್ಕೆ ಕರೆಯುತ್ತ ಗುರು ಹೀಗೆ ಗದರಿದರು
ನಿನಗಿಂದು ಕಾದಿಹುದು ಕಡುಶಿಕ್ಷೆ ನಡಿಹೊರಗೆ ನಾ ಬರುವೆ ನಿಂಜೊತೆಯಲಿ ೯

ಹೊರಗೆ ಹೋದವನನ್ನು ನೋಡಿದುಳಿದವರೆಲ್ಲ
ಮರುಗಿದರು ಬೆದರಿದರು ಗೆಳೆಯನಾ ಸ್ಥಿತಿ ಕಂಡು
ತರಬಾರದೆಂದೆಂದು ಚರವಾಣಿ ಶಾಲೆಯೊಳು ಹೀಗೆಂದು ತಿಳಿದರವರು
ಹೊರಬಂದ ಗುರುವಲ್ಲೆ ನಿಂತನನಿರುದ್ಧನನು
ಕರಪಿಡಿದು ಜತೆಗೆ ಬಾರೆನ್ನುತಲಿ ಮುನ್ನಡೆದು
ಮರು ಮಾತನಾಡದೆಯೆ ಖಾಲಿ ಕೋಣೆಯಲವನ ಕುಳ್ಳಿರಿಸಿ ಹೀಗೆಂದರು ೧೦

ಮುಂದುವರೆದಿದೆ . . .

– ೩ –

ಅನಿರುದ್ಧ ನೀಜಾಣ ನಿನಗೊಳ್ಳೆ ತಿಳಿವುಂಟು
ಮನೆಯಲ್ಲಿ ಹೊಸಚಟವ ನೀ ಕಲಿತುಬಿಟ್ಟಿರುವೆ
ನನಗೀಗಲಾಶ್ಚರ್ಯವಾಗಿಹುದು ನಿಜವಾಗಿ ಮಾತಾಡು ನನ್ನ ಮಗುವೆ
ದನಿತೆಗೆದು ಬಿಕ್ಕಳಿಸಿ ಮತ್ತೆದ್ದು ಕೈ ಮುಗಿದು
ಹನಿದುಂಬಿ ಕಣ್ಣಲ್ಲಿ ಹೀಗೆಂದನನಿರುದ್ಧ
ನನಗೀಗ ತಿಳಿಯುತಿದೆ ತಪ್ಪಾಯ್ತು ನನ್ನಿಂದ ಕ್ಷಮಿಸಿಬಿಡಿ ನನ್ನ ಗುರುವೆ ೧೧

ತಪ್ಪನ್ನು ಮನ್ನಿಸುತ ತಿಳಿಸಿದರು ಗುರು ಹೀಗೆ
ತಪ್ಪನೀನೊಪ್ಪಿರುವೆ ಧೈರ್ಯವಂತನು ನೀನು
ತಪ್ಪಾಗಿ ನಡೆಯದಿರು ಸದ್ಬುದ್ಧಿ ಮರೆಯದಿರು ಚಂದದಲಿ ಬಾಳೆಂದರು
ಒಪ್ಪಿದನು ಗುರು ಮಾತು ಕೈಮುಗಿದನನಿರುದ್ಧ
ಕಪ್ಪಿಟ್ಟು ಹೋಗಿದ್ದ ಮುಖವನೊರೆಸುತ ನುಡಿದ
ತಪ್ಪನ್ನು ತಿದ್ದಿದಿರಿ ನಿಮ್ಮನೆಂದಿಗು ಮರೆಯೆ ನಾ ಬೆಳೆದು ಮುಪ್ಪಾದರು ೧೨

ಮರುದಿನದ ಪಾಠದಲಿ ಗುರು ತಿಳಿಸಿ ಹೇಳಿದರು
ಚರವಾಣಿ ಸೊಗಸಹುದು ಬೇಕಿಹುದು ನಮಗೆಲ್ಲ
ಪರಮವದರುಪಯೋಗ ಬಳಸುವುದು ತಪ್ಪಲ್ಲ ಮತಿಬೇಕು ಬಳಸಲದನು
ಸರಿಯಾಗಿ ಬಳಸುವುದು ನಿಮಗಿನ್ನು ತಿಳಿದಿಲ್ಲ
ಹಿರಿಯರೆಲ್ಲರ ಮಾರ್ಗದರ್ಶನದಿ ಬಳಸುತಿರಿ
ತರಬೇಡಿ ಶಾಲೆಯೊಳು ನಿಯಮವನು ಪಾಲಿಸಿರಿ ಮಿತಿಯಲ್ಲಿ ಬಳಸಿರದನು ೧೩

ಕೇಳಿದಿರ ಮಕ್ಕಳಿರ ಚಂದವೆನಿಸಿತೆ ನಿಮಗೆ
ತಿಳಿಯಿತಲ್ಲವೆ ನೀತಿ ಗೊಂದಲವು ತಿಳಿಯಾಯ್ತೆ
ತಿಳಿವಿರುವ ಮುದ್ದಾದ ಮಕ್ಕಳಿರೆ ನೀವೆಲ್ಲ ಸಂತೋಷ ನಮಗೆಂದಿಗು
ಬಳಿಯಿರಲು ಚರವಾಣಿ ಬಳಸಬೇಕೆಂದಿಲ್ಲ
ಬಳಸಬೇಕಿದೆ ಮೊದಲು ದೈವ ನೀಡಿಹ ಬುದ್ಧಿ
ಬಳಸಿದರೆ ಚರವಾಣಿ ಮೀರದೆಯೆ ಮಿತಿಯನ್ನು ಬಲು ಸೊಗಸು ಬದುಕೆಂದಿಗು ೧೪

ಸಾಹಿತ್ಯ ದಾಸೋಹ ೧೯೪ – ಅಧ್ಯಕ್ಷರ ಅನಿಸಿಕೆಗಳು

ಸೆಪ್ಟೆಂಬರ್ ೨೫, ೨೦೨೧ರಂದು ಶನಿವಾರ ನೋಡಿಯೋ ಸಾಹಿತ್ಯ ದಾಸೋಹ–೧೯೪ರ ಅಧ್ಯಕ್ಷತೆ ವಹಿಸಿದ್ದ ಶ್ರೀ ಮನೋಹರ ಗೋಖಲೆಯವರು ಆಡಿದ ಮಾತುಗಳು ಮತ್ತು ಸಾಹಿತ್ಯ ಪ್ರಸ್ತುತಿಗಳ ಕುರಿತಾದ ಅಭಿಪ್ರಾಯಗಳು :

ನೋಡಿಯೋ ಸಾಹಿತ್ಯ ದಾಸೋಹದ ಎಲ್ಲ ಸದಸ್ಯರಿಗೂ ಆತ್ಮೀಯ ನಮಸ್ಕಾರ ಮತ್ತು ನನ್ನ ಜೀವನದ ೬೫ನೇ ವರ್ಷಕ್ಕೆ ಕಾಲಿಡುತ್ತಿರುವ ಶುಭದಾಯಕ ವಿಶೇಷ ದಿನವಾಗಿರುವ ಇಂದು ತಮ್ಮೆಲ್ಲರ ಮನದಾಳದ ಶುಭಾಶಯ ಮತ್ತು ಹಾರೈಕೆಗಳಿಗೆ ಧನ್ಯವಾದ. ೨೦೧೭ರಿಂದೀಚೆಗೆ ಸಮನ್ವಯ ಸಮಿತಿ ಆಯೋಜಿಸುತ್ತಿರುವ ಸಾಹಿತ್ಯ ದಾಸೋಹ ಸೇರಿದಂತೆ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ ಬಂದಿದ್ದೇನೆ. ಈ ಬಳಗದಲ್ಲಿ ನನ್ನ ಸಾಹಿತ್ಯಾಸಕ್ತಿಗೆ ಇನ್ನಷ್ಟು ಬಲ ಸಿಕ್ಕಿತು, ಸಾಹಿತ್ಯ ಸಂಗೀತಾಸಕ್ತ ಗೆಳೆಯರು ಸಿಕ್ಕಿದರು, ನನ್ನ ಅರೆಬರೆ ಬರಹಗಳಿಗೆ ಪ್ರೋತ್ಸಾಹ ಲಭಿಸಿತು, ಮಾನ್ಯ ಎಚ್ಚೆಸ್ಕೆ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ನನ್ನ ಮೊದಲ ಕೃತಿಯೂ ಪ್ರಕಟವಾಗಿ ಬಿಡುಗಡೆಯಾಯಿತು. ಅನಿವಾರ್ಯ ಕಾರಣಗಳಿಂದಾಗಿ, ನೋಡಿಯೋ ಸಾಹಿತ್ಯ ದಾಸೋಹ ಪ್ರಾರಂಭವಾದ ನಂತರ, ಸಾಹಿತ್ಯ ದಾಸೋಹದ ವ್ಯಾಪ್ತಿ ವಿಸ್ತಾರವಾಗಿ, ದೂರದೂರದ ಊರುಗಳ ಸಾಹಿತ್ಯಾಸಕ್ತ ಗೆಳೆಯರ ಸ್ನೇಹ–ಪರಿಚಯ, ಪ್ರೀತಿ–ವಿಶ್ವಾಸ ಲಭಿಸಲು ಸಾಧ್ಯವಾಗಿದೆ. ಆದ್ದರಿಂದ ಇಲ್ಲಿ ದಕ್ಕಿಸಿಕೊಂಡಿದ್ದು ಬಹಳ ಕೊಟ್ಟದ್ದು ಅಲ್ಪ ಮಾತ್ರ.

ಇಂದು ನಡೆಯುತ್ತಿರುವುದು ದಾಖಲೆಯ ೧೯೪ನೆಯ ಸಾಹಿತ್ಯ ದಾಸೋಹ. ಮುಂದೆ ಬರುವ ಮಾರ್ಚ್ ತಿಂಗಳಲ್ಲಿ ೨೦೦ನೆಯ ನೋಡಿಯೋ ಸಾಹಿತ್ಯ ದಾಸೋಹವನ್ನು ನಾವೆಲ್ಲರೂ ಒಂದೆಡೆ ಸೇರಿಕೊಂಡು "ಸಾಹಿತ್ಯ ಹಬ್ಬ"ವಾಗಿ ಆಚರಿಸುವಂತಹ ದಿನ ನಮ್ಮದಾಗಲಿ ಎಂದು ಹಾರೈಸುತ್ತೇನೆ.

ಈ ಬಳಗದಲ್ಲಿ ಅನೇಕ ಹಿರಿಯ ಸಾಹಿತಿಗಳಿದ್ದೀರಿ, ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿರುವವರಿದ್ದೀರಿ. ನನ್ನಂತಹ ಕಿರಿಯ ಸಾಹಿತ್ಯಪ್ರೇಮಿಗಳಿಗೆ ಪ್ರೀತಿ ಪ್ರೋತ್ಸಾಹ ತೋರಿಸುತ್ತಿದ್ದೀರಿ. ಇಂದಿನ ದಿನ ಈ ಸಾಹಿತ್ಯ ಗೋಷ್ಠಿಗೆ ನನ್ನನ್ನು "ಅಧ್ಯಕ್ಷತೆ" ಸ್ಥಾನಮಾನಕ್ಕೆ ಏರಿಸಿಬಿಟ್ಟಿದ್ದೀರಿ. ನೀವೆಲ್ಲರೂ ತೋರಿಸುತ್ತಿರುವ ಹಾದಿಯಲ್ಲಿ ಕ್ರಮಿಸುವುದೊಂದೇ ನನ್ನ ಕರ್ತವ್ಯ ಎಂದು ಭಾವಿಸುತ್ತೇನೆ.

ನೋಡಿಯೋ ಸಾಹಿತ್ಯ ದಾಸೋಹಗಳು ಮತ್ತು ಸಸಕಸ ಹಮ್ಮಿಕೊಳ್ಳುತ್ತಿರುವ ಅನೇಕ ಯೋಜನೆಗಳ ಯಶಸ್ಸಿನ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರ ವಹಿಸಿ ಇವುಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬರುತ್ತಿರುವ ಶ್ರೀಯುತರಾದ ಬೆಂ.ಶ್ರೀ.ರವೀಂದ್ರ, ಕೆ.ಎನ್.ಮಹಾಬಲ, ಹಾಲ್ಕುರಿಕೆ ಗುರುಪ್ರಸಾದ್, ಗುರುರಾಜ ಶಾಸ್ತ್ರಿ, ಹು.ವಾ.ಶ್ರೀಪ್ರಕಾಶ್, ಶೃಂಗೇಶ್ವರ ಶರ್ಮ ಮತ್ತು ಶ್ರೀಮತಿ ರೇಣುಕಾ ದೇಸಾಯಿ ಇವರೆಲ್ಲರ ನಿರಂತರ ಶ್ರಮ ಮತ್ತು ಉತ್ಸಾಹಗಳಿಗೆ ಶರಣು.

ಸಾಹಿತ್ಯ ಕ್ಷೇತ್ರದ ವಿವಿಧ ಮಜಲುಗಳನ್ನು ಪರಿಚಯಿಸುವ, ಭೂತ–ವರ್ತಮಾನ–ಭವಿಷ್ಯತ್ ಕಾಣ್ಕೆಗಳನ್ನು ಹುಡುಕುವ ತಿಳಿಯುವ ವಿಮರ್ಶೆಗಳಿಗೆ ಒಳಪಡಿಸುವ ಕೆಲಸ ನಮ್ಮ ವೇದಿಕೆಯಲ್ಲಿ ಮುಕ್ತವಾಗಿ ನಡೆಯುತ್ತಿದೆ. ಇದು ಹೀಗೇ ಮುಂದುವರಿಯಬೇಕು, ಎಲ್ಲರೂ ಸೇರಿ ಸಾಹಿತ್ಯರಥವನ್ನು ಮುನ್ನಡೆಸೋಣ.

ಈಗ ಇಂದಿನ ನೋಡಿಯೋ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಲಾಗಿರುವ ಕಥೆ–ಕವನ–ಲೇಖನಗಳ ಕುರಿತು ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕೆಂದರೆ ಇಂದು ಒಂದು ಕಥೆ, ಒಂಬತ್ತು ಕವನಗಳು, ಒಂಬತ್ತು ಲೇಖನಗಳು, ನಾಲ್ಕು ನಗೆಬರಹಗಳನ್ನು (ಒಟ್ಟು ೨೪) ಸದಸ್ಯರು ಪ್ರಸ್ತುತಪಡಿಸಿದ್ದಾರೆ. ಇವುಗಳ ವಿಮರ್ಶೆಯಲ್ಲಿ ನಾನು ವ್ಯಕ್ತಪಡಿಸುವ ನೇರ ಅಭಿಪ್ರಾಯಗಳಲ್ಲಿ ಇದ್ದಿರಬಹುದಾದ ತಪ್ಪುಗಳ ಬಗ್ಗೆ ಕ್ಷಮೆ ಇರಲಿ.

ಶ್ರೀ ಕೆ.ಆರ್.ವೆಂಕಟೇಶ್ – ಕವನ : "ಗಾನಗಂಧರ್ವ ಎಸ್.ಪಿ.ಬಿ. ನೆನಪು"

"ಮನೋಹಂಸ" ಕಾವ್ಯನಾಮದಿಂದ ತಮ್ಮ ಕೃತಿಗಳನ್ನು ಪ್ರಸ್ತುತಪಡಿಸುತ್ತಿರುವ ಶ್ರೀ ಕೆ.ಆರ್.ವೆಂಕಟೇಶ್ ಇವರು, ಗಾನಗಂಧರ್ವ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಮೊದಲ ಪುಣ್ಯತಿಥಿಯಾಗಿರುವ ಇಂದು ಅವರ ನೆನಪುಗಳನ್ನು ಕಾವ್ಯಮಯವಾಗಿ ಬಣ್ಣಿಸುವ ಕವನ ಓದಿದ್ದಾರೆ. ನಮ್ಮ ದೇಶ ಕಂಡ ಅಪ್ರತಿಮ ಗಾಯಕರಾಗಿದ್ದ ಎಸ್‌ಪಿಬಿ ದಕ್ಷಿಣ ಭಾರತ ಮಾತ್ರವಲ್ಲದೆ ಉತ್ತರದಲ್ಲೂ ತಮ್ಮ ಗಾನಸುಧಾರಸವನ್ನು ಹರಿಸಿ ಅಸಂಖ್ಯ ಅಭಿಮಾನಿ ಬಳಗವನ್ನು ಹೊಂದಿದ್ದವರಾಗಿದ್ದರು. ರಾಜ್ಯ, ರಾಷ್ಟ್ರಮಟ್ಟದಲ್ಲಿ ಅನೇಕ ಪ್ರಶಸ್ತಿಗಳು ಇವರನ್ನು ಹುಡುಕಿಕೊಂಡು ಬಂದಿವೆ. ಎಷ್ಟೇ ಎತ್ತರಕ್ಕೆ ಏರಿದರೂ ಇವರ ವಿನಯ ವಿನೀತ ವ್ಯಕ್ತಿತ್ವದಿಂದ ಅಭಿಮಾನಿಗಳ ಹೃದಯದಲ್ಲಿ ಚಿರಸ್ಥಾಯಿಯಾಗಿ ನಿಂತಿದ್ದಾರೆ. ಕನ್ನಡದ ಸಂಗೀತ ರಿಯಾಲಿಟಿ ಶೋಗಳಲ್ಲಿ ಇವರ ಕನ್ನಡ ಪ್ರೇಮ, ಗಾಯಕರಿಗೆ ತೋರಿಸುತ್ತಿದ್ದ ಪ್ರೋತ್ಸಾಹ ಅನುಕರಣೀಯ. ಚಿತ್ರರಂಗದ ಅನೇಕ ನಾಯಕನಟರುಗಳ ಧ್ವನಿಗೆ ಹೊಂದಿಕೊಳ್ಳುವಂತೆ ತಮ್ಮ ಧ್ವನಿಯನ್ನು ಬದಲಾಯಿಸಿ ಹಾಡುತ್ತಿದ್ದ ಎಸ್ಪಿಬಿ ಅವರ ಗಾಯನಕಲೆ ವಿಶಿಷ್ಟವಾದುದಾಗಿತ್ತು. 'ಮನೋಹಂಸ' ಅವರ ಸಂಗೀತಾಸಕ್ತಿ, ಗಾಯನ ಸಾಧನೆ ಸಾಹಿತ್ಯಯಾನಗಳಿಗೆ ಶುಭ ಹಾರೈಕೆಗಳು.

ಶ್ರೀ ಬಿ.ಆರ್.ರವೀಂದ್ರನಾಥ್ : ಕಥೆ "ಲಾಸ್ಟ್ ಲಾಫ್"

ಶ್ರೀ ಬಿ.ಆರ್.ರವೀಂದ್ರನಾಥ್ ಅವರು ಓದಿದ ಕಥೆ "ಲಾಸ್ಟ್ ಲಾಫ್". ಒಂದು ದೊಡ್ಡ ಸಂಸ್ಥೆಯ ಉದ್ಯೋಗಿಗಳು ರಚಿಸಿಕೊಂಡಿರುವ ಪತ್ತಿನ ಸಹಕಾರಿ ಸಂಘಕ್ಕಾಗಿ ನಡೆಯುವ ಚುನಾವಣೆ, ಮಹಿಳಾ ಮೀಸಲಾತಿ ಸ್ಥಾನ, ಚುನಾವಣೆಯಲ್ಲಿ ಗೆದ್ದವರ ಭ್ರಮನಿರಸನ, ಪರಸ್ಪರ ವಿರೋಧಿ ಬಣಗಳ ಮಾತ್ಸರ್ಯ–ಛಲ ಹೋರಾಟ, ಚುನಾವಣಾ ಸಂದರ್ಭದ ಕಾವು, ತಂತ್ರ–ಪ್ರತಿತಂತ್ರ–ಕುತಂತ್ರಗಳ ಕಥನವನ್ನು ಇಲ್ಲಿ ವಿವರಿಸಲಾಗಿದೆ. ಕುತೂಹಲವನ್ನು ಕಾಯ್ದುಕೊಂಡು ಓದಿಸಿಕೊಂಡು ಹೋಗುವ ಕಥೆಯ ಅಂತ್ಯದಲ್ಲಿ, ಲತಾ ಗೆದ್ದು ಸೋತಿದ್ದಾಳೆಯೇ ಅಥವಾ ಆಶಾ ಸೋತು ಗೆದ್ದಿದ್ದಾಳೆಯೇ ಎಂಬುದು ಊಹೆಗೆ ಬಿಟ್ಟಿದ್ದರೂ 'ಲಾಸ್ಟ್ ಲಾಫ್' ಯಾರದ್ದು ಎಂಬುದು ಓದುಗನನ್ನು ಗೊಂದಲಕ್ಕೀಡುಮಾಡುತ್ತದೆ. ಶ್ರಿ ಬಿ.ಆರ್.ರವೀಂದ್ರನಾಥ್ ಅವರಿಗೆ ಅಭಿನಂದನೆಗಳು.

ಶ್ರೀಮತಿ ಶಾಂತಿ ವಾಸು 'ಶಾವಾತ್ಮ' ಅವರ ಕವನ "ಅಧ್ಯಾತ್ಮ ಕಿರಣ"

ಶ್ರೀಮತಿ ಶಾಂತಿ ವಾಸು–'ಶಾವಾತ್ಮ' ಅವರು "ಅಧ್ಯಾತ್ಮ ಕಿರಣ" ಎಂಬ ಕವನವನ್ನು ಪ್ರಸ್ತುತಪಡಿಸಿದ್ದಾರೆ. ವಿಶ್ವಲೀಲೆಯ ಆರೋಗ್ಯಪೂರ್ಣ ಮುಂದುವರಿಕೆಯಲ್ಲಿ ಸೂರ್ಯನ ಕಿರಣಗಳು ಮುಖ್ಯಪಾತ್ರ ವಹಿಸುತ್ತವೆ. ಇಂತಹ ಕಿರಣಗಳಿಂದಾಗಿ ಜೀವಜಂತುಗಳ ನಿರಂತರ ಬೆಳವಣಿಗೆ ಸಾಧ್ಯವಾಗಿದೆ. ಇದೇ ರೀತಿಯಲ್ಲಿ ನಮ್ಮ ಮನಸ್ಸಿನೊಳಗಿನ ಅಂಧತ್ವ ಮತ್ತು ಕಶ್ಮಲಗಳನ್ನು ಹೋಗಲಾಡಿಸಿ ಜೀವನವನ್ನು ಸಾರ್ಥಕಪಡಿಸಿಕೊಳ್ಳಲು "ಅಧ್ಯಾತ್ಮ ಕಿರಣ" ನಮಗೆ ಬೇಕು ಎಂಬ ಸದಾಶಯದ ಕವನ ಚೆನ್ನಾಗಿ ಮೂಡಿ ಬಂದಿದೆ. ಶ್ರೀಮತಿ ಶಾಂತಿ ವಾಸು ಅವರಿಗೆ ವಂದನೆಗಳು.

ಶ್ರೀಮತಿ ನಾಗರತ್ನ ಎಂ,ಜಿ.– ಕವನ : "ಹೆಸರಿಗಷ್ಟೇ"

ಶ್ರೀಮತಿ ನಾಗರತ್ನ ಎಂ,ಜಿ. ಅವರು "ಹೆಸರಿಗಷ್ಟೇ" ಕವನವನ್ನು ಪ್ರಸ್ತುತಪಡಿಸಿದ್ದಾರೆ. ಇದರಲ್ಲಿ ಬೆಂಗಳೂರಿನ ಇಂದಿನ ಪರಿಸ್ಥಿತಿ ಚಿತ್ರಿತವಾಗಿದ್ದು ಕನ್ನಡಿಗರ ಪಾಡಿನ ಹಾಡು ಇದಾಗಿದೆ. ಕರ್ನಾಟಕದ ರಾಜಧಾನಿಯಾಗಿ ಬೆಂಗಳೂರು ಐಟಿ–ಬಿಟಿ ಕ್ರಾಂತಿಯಿಂದಾಗಿ, ಕನ್ನಡಿಗರ ಕೈತಪ್ಪುತ್ತಿದೆ. ಕನ್ನಡಿಗರಲ್ಲಿ ಆತ್ಮಗೌರವ ಮತ್ತು ಭಾಷಾಭಿಮಾನದ ಕೊರತೆ, ಜನಪ್ರತಿನಿಧಿಗಳ ಉದಾಸೀನ ಮತ್ತು ಔದಾರ್ಯ ಮನೋಭಾವದಲ್ಲಿ ಕನ್ನಡ ಮರೆಯಾಗುವ ಆತಂಕವಿದೆ. "ವ್ಯಾಮೋಹ ಬಿಡದು – ಇದು ನಮ್ಮ ಬೆಂಗಳೂರು – ಉಳಿದಿರಲಿ ಕನ್ನಡಿಗರ ಪಾಲಿಗೆ" ಎಂಬ ಕವಿವಾಣಿಯಲ್ಲಿ ನೋವಿನಲ್ಲೂ ಆಶಾಭಾವನೆಯೊಂದು ಕಾಣುತ್ತದೆ.

ಶ್ರೀ ವಿಠಲ ಇಜೇರಿ ಅವರ "ಪಂಚತಂತ್ರ ಕಥೆಗಳ ಪ್ರವೇಶಿಕೆ"

ಸಸಕಸ ವೇದಿಕೆಯ ಸ್ಥಾಪಕ ಸದಸ್ಯರಲ್ಲಿ ಪ್ರಮುಖರಾಗಿರುವ ಶ್ರೀ ವಿಠಲ ಇಜೇರಿಯವರು ಎಲ್ಲರಿಗೂ ಸುಪರಿಚಿತರು. ಸದಸ್ಯರೆಲ್ಲರ ನಿತ್ಯ ಪ್ರಸ್ತುತಿಗಳಿಗೆ ಪ್ರತಿದಿನವೂ ಪ್ರತಿಸ್ಪಂದಿಸುತ್ತ ಪ್ರೋತ್ಸಾಹಿಸುತ್ತಿರುವ ಇಜೇರಿಯವರು ಸರ್ವಮಾನ್ಯರು. ವಡ್ಡರಾಧನೆ, ಕಥಾಸರಿತ್ಸಾಗರ, ಜಾತಕ ಕಥೆಗಳನ್ನು ವೇದಿಕೆಯಲ್ಲಿ ಪರಿಚಯಿಸಿದ್ದಾರೆ. ಅಂತೆಯೇ, ಸಿದ್ದಣ್ಣ–ಮುದ್ದಣ್ಣ ನಾಯಕದ್ವಯರ ಮೂಲಕ ಹಾಸ್ಯಕಥನಗಳನ್ನು ಹಂಚಿಕೊಳ್ಳುತ್ತ ಓದುಗರ ಮನಸ್ಸುಗಳನ್ನು ಮುದಗೊಳಿಸುತ್ತಿದ್ದಾರೆ. ಇಂದಿನ "ಪಂಚತಂತ್ರ ಕಥಾಸರಣಿ"ಯ ಪ್ರವೇಶಿಕೆಯನ್ನು ಇಜೇರಿಯವರು ಪ್ರಸ್ತುತಪಡಿಸಿದ್ದಾರೆ. ಕ್ರಿ.ಪೂ. ೩ನೆಯ ಶತಮಾನದಲ್ಲಿ ವಿಷ್ಣುಶರ್ಮ ವಿರಚಿತ ಪಂಚತಂತ್ರ ಕಥೆಗಳು ಜಗತ್ತಿನ ಹಲವು ಭಾಷೆಗಳಿಗೆ ಅನುವಾದವಾಗಿ ವಿಶ್ವ ದಾಖಲೆ ಗಳಿಸಿವೆ. ಕ್ರಿ.ಶ. ೧೧೩೦ರಲ್ಲಿ ದುರ್ಗಸಿಂಹ ಎಂಬವನು ಕನ್ನಡಕ್ಕೆ ಇವುಗಳನ್ನು ಪರಿಚಯಿಸಿದ್ದಾನೆ. ಮಕ್ಕಳಿಗೂ ಸರಳ ಸುಲಭ ರೀತಿಯಲ್ಲಿ ಅರ್ಥವಾಗುವ ನೀತಿಕಥೆಗಳಲ್ಲಿ ಐದು ತಂತ್ರಗಳು ಅಡಕವಾಗಿವೆ. ಅಪಾರ ಜೀವನಾನುಭವ, ಬಹುಮುಖ ಓದಿನ ಹರಹು ಹೊಂದಿರುವ ಶ್ರೀ ಇಜೇರಿಯವರ ಮೂಲಕ ಮಿತ್ರಭೇದ, ಮಿತ್ರಲಾಭ, ಕಾಕೋಲೂಕೀಯ, ಲಬ್ಧಪ್ರಣಾಶನಮ್, ಅಪರೇಕ್ಷಿತಕಾರಕಮ್ ತಂತ್ರಗಳ ಪಂಚತಂತ್ರ ಕಥಾಸರಣಿ ಓದುಗರನ್ನು ಮುದಗೊಳಿಸಲಿ ಎಂದು ಹಾರೈಸುತ್ತೇನೆ.

ಶ್ರೀ ಗುರುರಾಜ ಶಾಸ್ತ್ರಿ – ಲೇಖನ : "ಅಮೂರ್ ಫಾಲ್ಕನ್"

ನಮ್ಮ ನೋಡಿಯೋ ಸಾಹಿತ್ಯ ದಾಸೋಹಕ್ಕೆ ತಾಂತ್ರಿಕ ಸಹಕಾರ ಒದಗಿಸುತ್ತಿರುವ ಶ್ರೀ ಗುರುರಾಜ ಶಾಸ್ತ್ರಿಯವರದು ಬಹುಮುಖ ಪ್ರತಿಭೆ. ಪಕ್ಷಿ ವೀಕ್ಷಣೆ ಮತ್ತು ಫೋಟೊಗ್ರಫಿಗಳಲ್ಲಿ ಆಸಕ್ತಿಯನ್ನು ಹೊಂದಿರುವ ಶಾಸ್ತ್ರಿಗಳು ಅಮೂರ್ ಫಾಲ್ಕನ್ ಹಕ್ಕಿಗಳ ವಲಸೆಯ ಮಾರ್ಗಮಧ್ಯೆ ಎದುರಾದ ಅಪಾಯ ಮತ್ತು ಜನರ ಮನಪರಿವರ್ತನೆಯಿಂದ ಪಕ್ಷಿಸಂತತಿಗೆ ಆದ ಲಾಭದ ಕುರಿತು ಕುತೂಹಲದಾಯಕ ಲೇಖನ ಪ್ರಸ್ತುತಪಡಿಸಿದ್ದಾರೆ. ೨೦೧೨ರಲ್ಲಿ ನಾಗಾಲ್ಯಾಂಡಿನಲ್ಲಿ ವಲಸೆ ಹಕ್ಕಿಗಳ ಮೇಲೆ ಮನುಷ್ಯನ ಕ್ರೌರ್ಯದಿಂದಾಗಿ ಫಾಲ್ಕನ್ ಹಕ್ಕಿಗಳ ಮಾರಣ ಹೋಮ ಆಗುತ್ತದೆ. ಇದು ಜಗತ್ತಿನಾದ್ಯಂತ ದೊಡ್ಡ ಸುದ್ದಿಯಾಗುತ್ತದೆ. ಮಂಗೋಲಿಯಾದಿಂದ ಸೋಮಾಲಿಯಾಕ್ಕೆ ವಲಸೆ ಹೋಗುವ ಫಾಲ್ಕನ್ ಹಕ್ಕಿಗಳು ಮಾರ್ಗ ಮಧ್ಯದಲ್ಲಿ ನಾಗಾಲ್ಯಾಂಡಿನಲ್ಲಿ ನೆಲೆಸಿದ ಸಂದರ್ಭದಲ್ಲಿ ಮನುಷ್ಯನ ಸ್ವಾರ್ಥದಾಸೆಗೆ ಒಳಪಟ್ಟು ನಾಶವಾಗುವುದನ್ನು ತಪ್ಪಿಸಲು ಪಕ್ಷಿಪ್ರೇಮಿಗಳು, ಪ್ರಕೃತಿಪ್ರಿಯ ಸಂಸ್ಥೆಗಳು, ಟಿವಿ ವಾಹಿನಿಗಳು, ಎನ್.ಜಿ.ಒ.ಗಳು ಒಗ್ಗಟ್ಟಾಗಿ ಹೋರಾಟ ಮಾಡುತ್ತಾರೆ. ವಲಸೆ ಹಕ್ಕಿಗಳ ಮಾರಣಹೋಮವನ್ನು ತಪ್ಪಿಸಲು ಅನೇಕ ರೀತಿಯಲ್ಲಿ ಜನರ ಮನಪರಿವರ್ತನೆಗೆ ಪ್ರಯತ್ನಿಸುತ್ತವೆ. ಧಾರ್ಮಿಕ ಗುರುಗಳ ಮೂಲಕ ಜನರಿಗೆ ಪಕ್ಷಿಪ್ರೀತಿ ಬೆಳೆಯುವಂತಾಗುತ್ತದೆ. ವಿಶ್ವದಾದ್ಯಂತ ಹಳ್ಳಿಗೆ ಕೀರ್ತಿ

ಲಭ್ಯವಾಗುತ್ತದೆ. ಈ ಲೇಖನದಲ್ಲಿ ಪಕ್ಷಿ ವಲಸೆಯ ಕುರಿತಾದ ಇತಿಹಾಸ, ವಿಜ್ಞಾನ, ಹವಾಮಾನ ಬದಲಾವಣೆ, ಮನುಷ್ಯನ ದುರಾಸೆ, ಅವನಲ್ಲಿ ಇರಬೇಕಾದ ಪ್ರಕೃತಿ ಪ್ರಜ್ಞೆಯ ವಿವರಗಳಿವೆ. ಶಾಸ್ತ್ರಿಯವರಿಗೆ ಅಭಿನಂದನೆಗಳು.

ಶ್ರೀಮತಿ ಶೀಲಾ ಅರಕಲಗೂಡು – ಕವನ : "ಚರವಾಣಿ ಚಾಪಲ್ಯ"

ವಾರ್ಧಕ ಷಟ್ಪದಿಯಲ್ಲಿ ಬರೆದಿರುವ ಕವನದಲ್ಲಿ 'ಚರವಾಣಿ ಸೊಗಸಹುದು–ಬೇಕಿಹುದು ನಮಗೆಲ್ಲ–ಪರಮವಹುದದರುಪಯೋಗ–ಬಳಸುವುದು ತಪ್ಪಲ್ಲ–ಮತಿಬೇಕು ಬಳಸಲದನು– ಸರಿಯಾಗಿ ಬಳಸುವುದು–ನಿಮಗಿದುವು ತಿಳಿದಿಲ್ಲ–ಹಿರಿಯರ ಮಾರ್ಗದರ್ಶನದಿ ಬಳಸುತಿರಿ– ತರಬೇಡಿ ಶಾಲೆಯೊಳು–ನಿಯಮದಲಿ ಪಾಲಿಸಿರಿ–ಮಿತಿಯಲ್ಲಿ ಬಳಸಿರಿದನು" ಮಕ್ಕಳಿಗೆ ಹಿತವಚನ ಸಾರವಿರುವ ಕವನವಿದು. ಪ್ರಯತ್ನಕ್ಕೆ ಕವಯಿತ್ರಿಗೆ ಅಭಿನಂದನೆಗಳು. ಆದರೆ ಶಿಶುಗೀತೆ, ಪ್ರಾಸಬದ್ಧ ಗೀತೆಗಳನ್ನು ಆಲಿಸುವ, ಇಷ್ಟಪಡುವ ಮಕ್ಕಳಿಗೆ ಇದು ತಲುಪೀತೇ? ಇಂತಹ ಸುದೀರ್ಘ ಕಥನ ಮಕ್ಕಳಿಗೆ ತಲುಪುವುದು ಕಷ್ಟ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಕವನದ ವಿಷಯವನ್ನು ಹೆತ್ತವರಿಗೆ, ಪೋಷಕರಿಗೆ ಮತ್ತು ಶಿಕ್ಷಕ ವೃಂದದವರಿಗೆ ತಲುಪಿಸಿ, ಅವರವರ ಜವಾಬ್ದಾರಿಯನ್ನು ಅರುಹಿ ಮಕ್ಕಳ ವಯೋಸಹಜ ಚಾಪಲ್ಯಕ್ಕೆ ಕಡಿವಾಣ ಹಾಕಿಸುವಂತೆ ಕವನ ರೂಪಾಂತರಿಸಲು ಸಾಧ್ಯವೇ ಪ್ರಯತ್ನಿಸಿ ಎಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಗೋಪೀನಾಥ್ – ನಗೆಬರಹ : "ಕರೋನ ಹೇರ್ ಸ್ಟೈಲ್"

ಶ್ರೀ ಗೋಪೀನಾಥ ಅವರು ನಮ್ಮ ಸಸಕಸ ವೇದಿಕೆಯ ನಗೆಬರಹಗಾರರು. ವೇದಿಕೆಯಲ್ಲಿ ತಮ್ಮ ಬರಹಗಳ ಮೂಲಕ ನಗೆಯಲೆಗಳನ್ನು ಹರಿಸುತ್ತಿರುತ್ತಾರೆ. ಯಾವುದೇ ವಸ್ತು ಅಥವಾ ವಿಷಯ ಸಿಕ್ಕಿದರೆ ಸಾಕು, ಅದನ್ನು ಹೋಳುಹೋಳಾಗಿ ಕತ್ತರಿಸಿ, ಅದಕ್ಕೆ ಉಪ್ಪು ಹುಳಿ ಖಾರ ಸೇರಿಸಿ ಒಳ್ಳೆಯ ಹಾಸ್ಯಪಾಕದಲ್ಲಿ ಬೇಯಿಸಿ ನಮಗೆಲ್ಲರಿಗೆ ಹಂಚುತ್ತಾರೆ. ನಗುವೆಂಬ ತೇಗು ಬರಿಸಿ ತಾವೂ ನಕ್ಕು ಹಗುರಾಗುವ ಗುಣ ಇವರದ್ದು. ಈ ಸಲ ಕರೋನ ಕಾಲದಲ್ಲಿ ಬೆಳೆದಿರುವ ಕೇಶರಾಶಿಯೊಂದಿಗೆ ಪ್ರವೇಶಿಸಿ, ಅದಕ್ಕೆ ಧೋನಿ ಹೇರ್ ಸ್ಟೈಲ್ ಎಂದು ನಾಮಕರಣ ಮಾಡಿದ್ದಾರೆ. ಸಾಹಿತ್ಯ ದಾಸೋಹ ಎರಡು ನೂರರ ಗಡಿಯಂಚಿಗೆ ತಲುಪುವ ಹೊತ್ತಿನಲ್ಲಿ ತಮ್ಮ ನಗೆಬರಹಗಳ ದ್ವಿಶತಕ ಪೂರೈಸಲು ಸಿದ್ಧರಾಗಿದ್ದಾರೆ, ಗೋಪೀನಾಥರು. ಇವರ ಬರಹಗಳು ಕಾಂತಾಸಮ್ಮಿತ ಮತ್ತು ಮಿತ್ರಸಮ್ಮಿತ ಪ್ರಕಾರದಲ್ಲಿರುತ್ತವೆ ಎಂಬುದು ವಿಶೇಷ. ಗೋಪೀನಾಥರಿಗೆ ಗೋವಿಂದ ನಮನಗಳು.

ಶ್ರೀಮತಿ ರಾಧಿಕಾ – ಕವನ : "ರೇಖೆಗಳು"

ಶ್ರೀಮತಿ ರಾಧಿಕಾ ಅವರು ತಮ್ಮ "ರೇಖೆಗಳು" ಕವನದಲ್ಲಿ ಮನುಷ್ಯನ ಹಸ್ತರೇಖೆಗಳ ಬಗ್ಗೆ ಬರೆದಿದ್ದಾರೆ. ಹಸ್ತರೇಖೆಗಳು ಪ್ರತಿ ವ್ಯಕ್ತಿಯಲ್ಲೂ ವಿಭಿನ್ನ ವಿಶೇಷ ಮತ್ತು ವಿಶಿಷ್ಟವಾಗಿರುತ್ತವೆ. ಹಸ್ತಸಾಮುದ್ರಿಕಾ ಎಂಬ ಶಾಸ್ತ್ರವೇ ಇದೆ. ಕ್ರಿಮಿನಲ್ ಕೇಸುಗಳಲ್ಲಂತೂ ಆರೋಪಿಗಳ ಪತ್ತೆಗೆ ಹಸ್ತರೇಖೆಗಳು ಸಹಾಯಮಾಡುತ್ತವೆ. ಇಂದಿನ ಡಿಜಿಟಲ್ ಯುಗದಲ್ಲೂ ವ್ಯಕ್ತಿಯ ಗುರುತು ಪತ್ತೆಗೆ, ಆಧಾರ್ ಕಾರ್ಡಿನಲ್ಲೂ ಅಂಗೈಮೇಲಿನ ರೇಖೆಗಳೇ ಆಧಾರವಾಗಿವೆಯಲ್ಲವೇ. ಕವಯಿತ್ರಿ ಹೇಳುತ್ತಾರೆ : "ಜಯವದು ಕೈಗೂಡಲು ರೇಖೆಗಳು ಸವೆಯಬೇಕು". ಈ ಆಶಯದೊಂದಿಗೆ ಶ್ರಮಿಕನಿಗೆ ಬೆಂಬಲ ಗುರುವಿನ ಬಲ ಎಂಬ ಸಾಲಿನಲ್ಲಿ ಕೈಕೆಸರಾದರೆ ಬಾಯಿ ಮೊಸರು ಎಂಬ ಹಿರಿಯರ ಮಾತನ್ನು ನೆನಪಿಸುತ್ತಾರೆ. ಶ್ರೀಮತಿ ರಾಧಿಕಾ ಅವರ ಸಾಹಿತ್ಯ ಕೃಷಿ ಮುಂದುವರಿಯಲಿ ಎಂದು ಹಾರೈಸುತ್ತೇನೆ.

ಶ್ರೀಮತಿ ರೇಣುಕಾ ದೇಸಾಯಿ – ಲೇಖನ : "ಆತ್ಮವಿಶ್ವಾಸ ಹೆಚ್ಚಿಸಿದ ಕರೋನಾ"

ಶ್ರೀಮತಿ ರೇಣುಕಾ ದೇಸಾಯಿಯವರು ನಮ್ಮ ನೋಡಿಯೋ ಸಾಹಿತ್ಯ ದಾಸೋಹದಲ್ಲಿ ಜಿ–ಮೀಟ್ ಆತಿಥ್ಯ ವಹಿಸಿಕೊಂಡು ತಮ್ಮ ನಗುಮುಖ ಮತ್ತು ಆತ್ಮೀಯ ಸ್ವಾಗತ ಮಾತುಗಳಿಂದಾಗಿ ಎಲ್ಲರಿಗೂ ಚಿರಪರಿಚಿತರು. ನಮ್ಮನ್ನು ಕಾಡಿದ ವಿಶ್ವಮಾರಿ ಕರೋನಾ ಪಿಡುಗಿನ ಕಾರಣದಿಂದಾದ ಜೀವನದಲ್ಲಿ ಬದಲಾವಣೆಯನ್ನು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಕಷ್ಟ ನಷ್ಟ ಸಂಕಷ್ಟಗಳು, ಸಾವು–ನೋವುಗಳ ಮಧ್ಯೆಯೂ ಮನುಷ್ಯನ ಜೀವನದಲ್ಲಿ ಕರೋನಾ ಮತ್ತೊಂದು ರೀತಿಯಲ್ಲಿ ಆರೋಗ್ಯಪೂರ್ಣ ಪರಿಣಾಮಕ್ಕೆ ಕಾರಣವಾಗಿರುವುದನ್ನು ಇಲ್ಲಿ ವಿವರಿಸಿದ್ದಾರೆ. ಅಂತರಂಗ ಬಹಿರಂಗಗಳಲ್ಲಿ ಮಾನವ ಮೌಲ್ಯ, ಸ್ವಚ್ಛತೆ, ಆಹಾರ ಶೈಲಿ, ಪ್ರಕೃತಿ ಪ್ರೇಮ, ಪರಿಸರ ಜಾಗೃತಿ, ಆತ್ಮನಿರ್ಭರತೆ, ದುಂದುವೆಚ್ಚಕ್ಕೆ ಕಡಿವಾಣ, ಆನ್ಲೈನ್ ಶಿಕ್ಷಣ ವಿಧಾನ, ಮನೆಯಿಂದಲೇ ಕಛೇರಿ ಕೆಲಸ, ನೋಡಿಯೋ ಸಾಹಿತ್ಯ ದಾಸೋಹ – ಎಷ್ಟೆಲ್ಲ ಬದಲಾವಣೆಗಳು. ಆಗೋದೆಲ್ಲವೂ ಒಳ್ಳೆಯದಕ್ಕೇ ಅಲ್ಲವೇ? ರೇಣುಕಾ ಅವರಿಗೆ ಅಭಿನಂದನೆಗಳು.

ಶ್ರೀಮತಿ ಗಿರಿಜಾ ರಾವ್ ಎಲ್. – ಲೇಖನ: "ಆಧುನಿಕ ಸಮಾಜದ ಶೈಕ್ಷಣಿಕ ಪರಿಸರ–ಚಿಂತನೆ"

ಅನೇಕ ದಶಕಗಳ ನಂತರ ಭಾರತದ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಜಾರಿಯಾಗುತ್ತಿರುವ ಸಂದರ್ಭದಲ್ಲಿ ಗಿರಿಜಾರಾವ್ ಅವರ ಚಿಂತನಾರ್ಹ ಬರಹ ಪ್ರಾಮುಖ್ಯತೆ ಪಡೆದಿದೆ. ಸನಾತನ ಭಾರತದಲ್ಲಿದ್ದ ಶಿಕ್ಷಣ ಪದ್ಧತಿ ಯಾವ ರೀತಿಯಲ್ಲಿ ಬದುಕಿಗೆ ಭದ್ರ ಬುನಾದಿ ಒದಗಿಸುತ್ತಿತ್ತು. ಆದರೆ ಈಗಿನ ಶಿಕ್ಷಣ ಪಾಶ್ಚಿಮಾತ್ಯ ಪ್ರಭಾವದಿಂದಾಗಿ ಜೀವನ ಮೌಲ್ಯ ಕುಸಿದುಹೋಗುವ ಆತಂಕ ಎದುರಾಗಿದೆ. ಕೇವಲ ಭೌತಿಕ ಲೌಕಿಕ ಸುಖವೇ ಮುಖ್ಯವೆಂದು ಪ್ರತಿಪಾದಿಸುವ ಶಿಕ್ಷಣ ನೀತಿ ಮನುಷ್ಯ ಜೀವನದ ಅಧಃಪತನಕ್ಕೂ ಕಾರಣವಾಗುತ್ತಿದೆ. "ಎಲ್ಲವೂ ಇದೆ ಆದರೆ ಏನೂ ಇಲ್ಲ" ಎಂಬ ಹಂತಕ್ಕೆ ಮುಟ್ಟಿದ ಮನುಷ್ಯನಿಗೆ ಶಿಕ್ಷಣ ಪದ್ಧತಿಯ ಅವ್ಯವಸ್ಥೆ ಬಗ್ಗೆ ಈಗ ಅರಿವಾಗುತ್ತಿದೆ. **"Education is the manifestation of perfection already present in man"** ಎಂಬ ವಿವೇಕವಾಣಿ ಮತ್ತು **"Education without character is a social crime"** ಎಂಬ ಮಹಾತ್ಮವಾಣಿಗಳನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. "ಕಳ್ಳರು ಅಪಹರಿಸಲಾಗದ, ರಾಜರು ವಶಪಡಿಸಿಕೊಳ್ಳಲಾಗದ, ಸೋದರರು ಭಾಗಮಾಡಿಕೊಳ್ಳಲಾಗದ ಆದರೆ ಪ್ರತಿದಿನವೂ ಹೆಚ್ಚುತ್ತಲೇ ಹೋಗುವ ಸಂಪತ್ತೆಂದರೆ ಅದು ವಿದ್ಯೆ" ಎಷ್ಟೊಂದು ಅರ್ಥಪೂರ್ಣ ಶ್ಲೋಕಾರ್ಥ. ಉತ್ತಮ ಚಿಂತನಾರ್ಹ ಲೇಖನವನ್ನು ಪ್ರಸ್ತುತಪಡಿಸಿದುದಕ್ಕಾಗಿ ಶ್ರೀಮತಿ ಗಿರಿಜಾರಾವ್ ಅವರಿಗೆ ಧನ್ಯವಾದಗಳು.

ಶ್ರೀಮತಿ ಪಾರ್ವತಿ ವಿ.ಹೆಗಡೆ – ಕವನ : "ಆಸೆ ಬೇಕು"

ಈ ಜಗತ್ತಿನಲ್ಲಿ ಪ್ರತಿಯೊಂದು ಜೀವಿಯ ಪರಸ್ಪರ 'ಆಸೆ' ಎಂಬ ಭಾವನೆಯಿಂದಾಗಿ ವಿಶ್ವಲೀಲೆ ಸಾಗುತ್ತಿದೆ. ಹುಟ್ಟಿದಾರಭ್ಯ ಮಗುವಿನ ಆಸೆ, ಅಪ್ಪ–ಅಮ್ಮಂದಿರ ಆಸೆ, ಪ್ರಕೃತಿಯಲ್ಲಿ ಪರಸ್ಪರ ಜೀವಜಗತ್ತಿನ ಅವಲಂಬನದಲ್ಲಿ ಅಡಗಿರುವ ಅನ್ಯೋನ್ಯ ಪ್ರೀತಿ, ಹಸಿದವನ, ರಸಿಕನ, ರಸಕವಿಯ, ಯತಿಮುನಿಗಳ ಸುಪ್ತ ಆಸೆಗಳನ್ನು ಮನಮುಟ್ಟುವಂತೆ ಕವನದಲ್ಲಿ ಕವಿಯತ್ರಿ ಬರೆದಿದ್ದಾರೆ. ಸಾತ್ವಿಕ ಆಸೆಯೊಡನೆ ರಾಜಸ, ತಾಮಸ, ಆಸೆಗಳು, ದುರಾಸೆ, ಅತಿಯಾಸೆಗಳಿಂದುಂಟಾಗುವ ವಿಪರೀತಗಳನ್ನೂ ಇಲ್ಲಿ ಬಣ್ಣಿಸಿದ್ದಾರೆ. ಈ ಕವನ ಓದುವಾಗ ಕೆ.ಎಸ್.ನ.ಅವರ "ಹಕ್ಕಿಯ ಹಾಡಿಗೆ ತಲೆದೂಗುವ ಹೂ ನಾನಾಗುವ ಆಸೆ" ನೆನಪಿಗೆ ಬರುತ್ತದೆ. ರಾಗಬದ್ಧವಾಗಿ ತಮ್ಮ ಕವನವನ್ನು ಹಾಡಿ ಪ್ರಸ್ತುತಿ ಮಾಡಿದ ಶ್ರೀಮತಿ ಪಾರ್ವತಿ ವಿ.ಹೆಗಡೆ ಅವರಿಗೆ ಅಭಿನಂದನೆಗಳು.

ಶ್ರೀ ಹು.ವಾ.ಶ್ರೀಪ್ರಕಾಶ್ – ಲೇಖನ : "ಕಾಗೆಗಳ ದಿನಾಚರಣೆ"

ನಮ್ಮ ವೇದಿಕೆಯ ಕ್ಷಿಪ್ರ ವರದಿಗಾರರೆಂದೇ ಹೆಸರು ಮಾಡಿರುವ ಶ್ರೀ ಹು.ವಾ.ಶ್ರೀಪ್ರಕಾಶ್ ಅವರು ವಿಶೇಷ ವರದಿಯನ್ನೇ ಪ್ರಸ್ತುತಪಡಿಸಿ ಎಲ್ಲರನ್ನು ಆಶ್ಚರ್ಯಚಕಿತರನ್ನಾಗಿಸಿದ್ದಾರೆ. ಅವರು ಆರಿಸಿಕೊಂಡ ವಿಷಯ 'ಕಾಕಪುರಾಣ'. ಕೆಲವು ದಿನಗಳ ಹಿಂದೆ ನಮ್ಮ ವೇದಿಕೆಯಲ್ಲಿ ಪ್ರಸ್ತುತವಾಗಿದ್ದ ಕಾಗೆ ವಿಷಯದ ಮೇಲೆ ಅನೇಕ ದಿನಗಳ ಕಾಲ ಪ್ರತಿಲೇಖನ, ಕವನಗಳು ಹರಿದಾಡಿ, ಕಾಗೆಯ ಇತಿಹಾಸ, ಪುರಾಣ, ಭೂಗೋಳ, ಹಿನ್ನಲೆ, ಮುನ್ನಲೆ, ಸ್ವರಮಾಧುರ್ಯ, ಪಿತೃ ಪ್ರತಿನಿಧಿ ಇತ್ಯಾದಿ ಚರ್ಚೆಯ ಬಿಸಿಯೇರಿತ್ತು. ಇವುಗಳನ್ನು ಒಟ್ಟು ಸೇರಿಸಿ ವರದಿಯ ರೂಪದಲ್ಲಿ ಪ್ರಸ್ತುತಿ ಮಾಡಿರುವ ಹುವಾಶ್ರೀ ಅವರಿಗೆ ಭಲೇ ಎನ್ನಲೇ, ಶಹಬ್ಬಾಸ್ ಎನ್ನಲೇ? ವಸ್ತುನಿಷ್ಠ, ವಿಷಯ ಸ್ಪಷ್ಟ ವರದಿಗಾಗಿ ಅಭಿನಂದನೆಗಳು. ನಿಮ್ಮ ನಿತ್ಯನೂತನ ವರದಿಗಳಿಗಾಗಿ ನಾವೆಲ್ಲರೂ ಕಾಯುತ್ತಿರುತ್ತೇವೆ.

ಶ್ರೀ ಜಿ.ವಿ.ಅರುಣ – ಪುಸ್ತಕ ಪರಿಚಯ : "ರಾಮಾಯಣ ಮಿತ್ರ"

ಶ್ರೀ ಜಿ.ವಿ.ಅರುಣ ಅವರು ನಮ್ಮ ವೇದಿಕೆಯ ಹಿರಿಯ ಸದಸ್ಯರು. ವೃತ್ತಿಯಲ್ಲಿ ವಿಜ್ಞಾನಿಯಾಗಿದ್ದರೂ ನಿವೃತ್ತಿಯ ನಂತರ ಸಾಹಿತ್ಯ ಕೃಷಿಯಲ್ಲಿ ಪ್ರವೃತ್ತರಾಗಿದ್ದಾರೆ. ವಿವಿಧ ರೀತಿಯ ಸಾಹಿತ್ಯ ಬರಹಗಳನ್ನು ನಮ್ಮೊಡನೆ ಹಂಚಿಕೊಳ್ಳುತ್ತಿದ್ದಾರೆ. ಶ್ರೀ ಅ,ರಾ,ಮಿತ್ರ ಅವರು ನಮ್ಮ ಕನ್ನಡದ ಹಿರಿಯ ಸಾಹಿತಿಯಾಗಿದ್ದು ಹಾಸ್ಯ ಭಾಷಣಕಾರರೂ ಹೌದು. "ಛಂದೋಮಿತ್ರ" ಎಂಬುದು ಅವರ ಕನ್ನಡ ವ್ಯಾಕರಣ ಪುಸ್ತಕ. ಈಗ "ರಾಮಾಯಣ ಮಿತ್ರ" ಎಂಬ ಪುಸ್ತಕ ಪ್ರಕಟಿಸಿ, ರಾಮಾಯಣದ ಅನೇಕ ಪಾತ್ರಗಳು ಸಂಗತಿಗಳನ್ನು ವಿವರಿಸಿರುವ ಪುಸ್ತಕದ ಪರಿಚಯವನ್ನು ಇಂದು ಶ್ರೀ ಅರುಣ ಅವರು ನಮಗೆ ಮಾಡಿದ್ದಾರೆ. ಈ ಕೃತಿಯಲ್ಲಿ ೧೪೭ ಲೇಖನಗಳಿವೆ. ರಾಮಾಯಣದಲ್ಲಿ ಕಾಣುವ ವೈವಿಧ್ಯಮಯ ಪಾತ್ರ ವಿಮರ್ಶೆಗಳು, ಗುರು–ಶಿಷ್ಯ ಸಂಬಂಧಗಳು, ದಾಂಪತ್ಯ, ಅಸ್ತ್ರಶಸ್ತ್ರಗಳು, ಗಾಯಗಳು–ಔಷಧಗಳು, ವಿಶ್ಲೇಷಣಾತ್ಮಕ ಲೇಖನಗಳು ಇದರಲ್ಲಿವೆ ಎಂದು ತಿಳಿಸುತ್ತಾರೆ. ಶ್ರೀ ಮಿತ್ರ ಅವರ ವಿಭಿನ್ನ ದೃಷ್ಟಿಕೋನದಲ್ಲಿ ರಾಮಾಯಣದ ಮರುಓದು ಸಾಧ್ಯವಾಗಿದ್ದು, ಈ ಕೃತಿ ಆಕರ ಗ್ರಂಥ ವಾಗಿಯೂ ಉಳಿಯುವಂತಹುದು ಎಂದು ಶ್ರೀ ಅರುಣ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ನೋಡಿಯೋ ಸಾಹಿತ್ಯ ದಾಸೋಹಗಳಲ್ಲಿ ಅರುಣಪ್ರಭೆ ಇನ್ನಷ್ಟು ಮತ್ತಷ್ಟು ಬೆಳಕು ಚೆಲ್ಲುತ್ತಿರಲಿ ಎಂದು ಶುಭಹಾರೈಸುತ್ತೇನೆ.

ಶ್ರೀಮತಿ ಮಾಲತಿ ಶ್ರೀನಿವಾಸನ್ – ಲೇಖನ : "ಅವರಿಲ್ಲದ ಅಡುಗೆ"

ನಿತ್ಯ ಬದುಕಿನುದ್ದಕ್ಕೂ ಹಾಸ್ಯವನ್ನು ಕಾಣಬಹುದು ಅನ್ನುವುದನ್ನು ಶ್ರೀಮತಿ ಮಾಲತಿಯವರು ದೃಢೀಕರಿಸುತ್ತಾ ಈ ಲೇಖನವನ್ನು ಬರೆದಿದ್ದಾರೆ. ಅಡಿಗೆಯೋ ಅಡುಗೆಯೋ ಮಾಲತಿಯವರು ಪತಿರಾಯರು ಮನೆಯಲ್ಲಿ ಇಲ್ಲದ ಸಂದರ್ಭದಲ್ಲಿ ಪ್ರತಿಮನೆಗಳಲ್ಲೂ ಆಗಬಹುದಾದ ಅಡುಗೆ ಪುರಾಣದ ರಸನಿಮಿಷಗಳನ್ನು ಸಾದ್ಯಂತವಾಗಿ ವಿವರಿಸುತ್ತಾರೆ. ಅಪ್ಪನ ಮನೆ, ಅತ್ತೆ ಮನೆಯಲ್ಲೂ "ಅವರಿಲ್ಲದಾಗ" ನಡೆಯುತ್ತಿದ್ದ ರಸಪಾಕ ಸಂಭ್ರಮವನ್ನು ಉದ್ಗರಿಸುತ್ತಾರೆ. ಹೌದು, ಸಂಬಂಧಗಳನ್ನು ಹೊಸೆಯುವ ಬೆಸೆಯುವ ಅಡುಗೆಮನೆ ನಿಜವಾಗಿಯೂ ಸಂತೋಷ ಸಂಭ್ರಮದ ಕ್ಷೇತ್ರ. ಮಾತು, ಹರಟೆ, ಲೋಕಾಭಿರಾಮ ಸಮಾಚಾರ, ಸುದ್ದಿ ವಿಶ್ಲೇಷಣೆ, ವಿಚಾರ ವಿಮರ್ಶೆಗಳು ನಡೆಯುವ ಈ ಅಡುಗೆಮನೆಯಲ್ಲಿ ಹಬ್ಬಹರಿದಿನ, ಶುಭ ಸಮಾರಂಭ ಸಂದರ್ಭಗಳಲ್ಲಂತೂ ಯೋಚನೆ ಯೋಜನೆಗಳ ಕಾರ್ಯತಂತ್ರ ರೂಪಿತವಾಗಿ ಶುಚಿರುಚಿಯಾದ ತಿಂಡಿಗಳು ತಯಾರಾಗುತ್ತವೆ. ಭೀಮಪಾಕ, ನಳಪಾಕ, ರಸಪಾಕಗಳೂ ಇಲ್ಲೇ ತಾನೆ ಸಿದ್ಧವಾಗುವುದು! ಶ್ರೀಮತಿ ಮಾಲತಿ ಅವರ "ಅವರಿಲ್ಲದ ಅಡುಗೆ"ಗೆ ಧನ್ಯವಾದಗಳು.

ಶ್ರೀಮತಿ ನಾಗರತ್ನಾ ಚಂದ್ರಶೇಖರ್– ಲೇಖನ : “ನಡೆಯದ ಗಡಿಯಾರಗಳು”

ಮೊಬೈಲ್ ಎಂಬ ಪುಟ್ಟ ಸಾಧನ ಬಂದ ಮೇಲೆ, ಸ್ಮಾರ್ಟ್ ವಾಚ್ ಎಂಬುದು ಆವಿಷ್ಕಾರಗೊಂಡ ಮೇಲೆ ಟೆಲಿಫೋನ್, ಟೆಲಿಗ್ರಾಮ್, ರೇಡಿಯೋ, ಗಡಿಯಾರ, ವಾಚ್, ಗ್ರಾಮಫೋನ್, ಕ್ಯಾಸೆಟ್ ಪ್ಲೇಯರ್, ಸಿಡಿ ಪ್ಲೇಯರುಗಳು ಕಾಣೆಯಾಗಿವೆ, ಮೂಲೆ ಸೇರಿವೆ. ಕಳೆದ ನಲವತ್ತು ವರ್ಷಗಳಿಂದೀಚೆಗೆ ಸುವ್ಯವಸ್ಥಿತವಾಗಿ ನಡೆಯುತ್ತಿದ್ದ ಗಡಿಯಾರದ ಅಂಗಡಿಗಳು ಖಾಯಂ ಆಗಿ ಬಾಗಿಲು ಮುಚ್ಚುತ್ತಿರುವುದನ್ನು ಕೇಳುತ್ತಿದ್ದೇವೆ, ನೋಡುತ್ತಿದ್ದೇವೆ. ಇಂದಿನ ವಿಜ್ಞಾನ ಯುಗದಲ್ಲಿ ಪ್ರತಿದಿನ ಪ್ರತಿಕ್ಷಣ ಹೊಚ್ಚಹೊಸ ಆವಿಷ್ಕಾರಗಳು ಜನಸಾಮಾನ್ಯರಿಗೂ ತಲುಪುತ್ತಿರುವ ಈ ಸಂದರ್ಭದಲ್ಲಿ ಗೋಡೆ ಯಾ ಕೈ ಗಡಿಯಾರಗಳನ್ನು ಲಕ್ಷಿಸುವವರು ಯಾರು? ಒಂದು ಕಾಲದಲ್ಲಿ ಘನತೆ ಗೌರವದ ಸಂಕೇತವಾಗಿ ವಿದೇಶೀ ನಿರ್ಮಿತ ಕೈಗಡಿಯಾರಗಳನ್ನು ಕಟ್ಟಿಕೊಳ್ಳುತ್ತಿದ್ದರು. “ದೇಶದ ಸಮಯ ಪಾಲಕರು ನಾವು” ಎಂಬುದಾಗಿ ಜಾಹೀರಾತುಗಳಲ್ಲಿ ಘೋಷಿಸಿಕೊಳ್ಳುತ್ತಿದ್ದ ನಮ್ಮ ಬೆಂಗಳೂರಿನದೇ ಆದ ಕೈಗಡಿಯಾರ ಕಾರ್ಖಾನೆ ಈಗ ಮುಚ್ಚಿಹೋಗಿದೆ. ಕೆಟ್ಟು ಹೋಗಿರುವ ಗಡಿಯಾರ ಕೂಡ ದಿನದಲ್ಲಿ ಎರಡು ಬಾರಿ ನಿಖರವಾದ ಸಮಯವನ್ನು ತೋರಿಸುತ್ತದೆ ಎಂಬ ಮಾತಿದೆ. ಕೇವಲ ಅಲಂಕಾರಿಕ ವಸ್ತುಗಳಾಗಿ ಗಡಿಯಾರಗಳು ಈಗ ಸ್ಥಾನ ಪಡೆಯುತ್ತಿವೆ. ಶ್ರೀಮತಿ ನಾಗರತ್ನಾ ಅವರು ವಿವರಣಾತ್ಮಕ ಲೇಖನ ಓದುವಾಗ ಇಷ್ಟೆಲ್ಲ ಹೇಳಬೇಕಾಯಿತು. ಶ್ರೀಮತಿ ನಾಗರತ್ನಾ ಅವರಿಗೆ ಅಭಿನಂದನೆಗಳು.

ಶ್ರೀ ಎನ್.ವಿ.ರಘುರಾಮ್ – ಲೇಖನ : “ಮೊದಲ ಗಣಿತ ಪರೀಕ್ಷೆ”

ಚಿಕ್ಕ ಚೊಕ್ಕ ಅನುಭವಾಮೃತ ಬರಹ. ನೋಡಿಯೋ ದಾಸೋಹದಲ್ಲಿ ಪ್ರಸ್ತುತ ಪಡಿಸಿದ ಮೊತ್ತ ಮೊದಲನೆಯ ಪ್ರಸ್ತುತಿ ಎಂದು ಶ್ರೀ ರಘುರಾಮ್ ಹೇಳಿದ್ದಾರೆ. ಹಳ್ಳಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿ ಪಾಸಾದ ವಿದ್ಯಾರ್ಥಿ, ನಗರಕ್ಕೆ ಬಂದು ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಓದಿ, ಮೊದಲ ಸೆಮಿಸ್ಟರ್‌ನ ಗಣಿತ ಪರೀಕ್ಷೆಯನ್ನು ಆತಂಕ ಮತ್ತು ಭಯದ ವಾತಾವರಣದಲ್ಲಿ ಎದುರಿಸಿ ಉತ್ತೀರ್ಣನಾದ ಅನುಭವವನ್ನು ಸೊಗಸಾಗಿ ಹೇಳಿಕೊಂಡಿದ್ದಾರೆ. ಆ ಒಂದು ಗಣಿತ ಪರೀಕ್ಷೆಯ ಪಾಸ್ ಫಲಿತಾಂಶ ಜೀವನಕ್ಕೊಂದು ಪಾಠ ಕಲಿಸಿತ್ತು. ಮನೋಬಲವನ್ನು ಹೆಚ್ಚಿಸಿತು ಎಂದು ತಿಳಿಸುತ್ತಾರೆ. ಇಂತಹ ಸ್ವಾರಸ್ಯಕರ ಬರಹಗಳನ್ನು ಬರೆಯುವ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಿಪಡಿಸುವ ಅಭ್ಯಾಸ ಶ್ರೀ ರಘುರಾಮ್ ಅವರಿಗೆ ಒದಗಿ ಬರಲಿ. ಅವರಿಗೆ ಶುಭಾಶಯಗಳು.

ಶ್ರೀ ಜಿ.ಬಿ.ಕೋಟೆ ಅನಂತ – ನಗೆ ಬರಹ : “ಮೇಡ್ ಫಾರ್ ಈಚ್ ಅದರ್”

ಪಶು ವೈದ್ಯಶಾಲೆಯಲ್ಲಿ ನಾಯಿಯನ್ನು ಕರೆದುಕೊಂಡು ಬಂದ ನಾಯಿ ಮಾಲೀಕಳು ಮತ್ತು ಪಶುವೈದ್ಯ ಸಹಾಯಕರ ಮಧ್ಯೆ ನಡೆಯುವ ಮಾತುಕತೆಯಲ್ಲಿ ಪ್ರಾರಂಭವಾಗುವ ಲೇಖನ ಓದುಗರಲ್ಲಿ ನಗೆಬುಗ್ಗೆ ಹೊಮ್ಮಿಸುತ್ತದೆ. ಕೊನೆಯವರೆಗೂ ಇದೇ ರೀತಿಯಲ್ಲಿ ಪರಸ್ಪರ ನಡೆಯುವ ಮಾತುಕತೆ ಈರ್ವರಲ್ಲೂ ಅರ್ಥಮಾಡಿಕೊಳ್ಳುವಲ್ಲಿ ವಿರೋಧಾಭಾಸಗಳಿಂದ ಕೂಡಿದೆ. ಲೇಖನದಲ್ಲಿ ಬಳಸಲಾದ ರಾಣಿ, ಸಾಮ್ರಾಟ್, ರಾಗಿಣಿ, ರಾಕೇಶ್ ಹೆಸರುಗಳೂ ಚೆನ್ನಾಗಿ ಬಳಕೆಯಾಗಿವೆ. ಅನಂತ್ ಅವರೇ, ಇದೇ ರೀತಿ ಸಾಹಿತ್ಯ ಕೃಷಿ ಮುಂದುವರಿಯಲಿ. ಅಭಿನಂದನೆಗಳು.

ಶ್ರೀಮತಿ ಶಾಂತಾ ನಾಗಮಂಗಲ – ಕವನ : "ಪುರಂದರದಾಸರು"

ಶ್ರೀಮತಿ ಶಾಂತಾ ನಾಗಮಂಗಲ ಅವರು ನಮ್ಮ ವೇದಿಕೆಯಲ್ಲಿ ಚಿರಪರಿಚಿತರು. ಪುರಾಣ ಪ್ರವಚನಕಾರರು. ಈಗ್ಗೆ ಬಿಹಾರಿಲಾಲರ ದೋಹೆಗಳನ್ನು ಪರಿಚಯಿಸುತ್ತ ಕನ್ನಡಕ್ಕೆ ಅನುವಾದಿಸಿ ಉತ್ತರ ಭಾರತದ ಕಾವ್ಯ ಸೌಂದರ್ಯ ವಿಶೇಷಗಳನ್ನು ಆಸ್ವಾದಿಸಲು ಅನುವು ಮಾಡಿಕೊಟ್ಟಿದ್ದಾರೆ. ಇಂದಿನ ದಾಸೋಹದಲ್ಲಿ ಭಾಮಿನಿ ಷಟ್ಪದಿಮಾಲೆಯಲ್ಲಿ ಕನ್ನಡದ ದಾಸಶ್ರೇಷ್ಠರಾದ ಪುರಂದರದಾಸರ ಜೀವನ ವೃತ್ತಾಂತವನ್ನು ಬರೆದಿದ್ದಾರೆ. ಪುರಂದರರ ಅವತರಣ, ಲೌಕಿಕ ಜೀವನ, ಅಧ್ಯಾತ್ಮ ಪರಿವರ್ತನ, ಪುರಂದರ ವಿಠಲ ನಾಮ ಸಂಕೀರ್ತನ ಹಾಗು ಅವರ ನಿರ್ವಾಣ ಹಂತಗಳನ್ನು ಭಾಮಿನಿ ಷಟ್ಪದಿ ಸರಣಿಯಲ್ಲಿ ಸುಂದರವಾಗಿ ಪ್ರಸ್ತುತಪಡಿಸಿದ್ದಾರೆ. ಛಂದೋಬದ್ಧತೆಯ ಕಾರಣದಿಂದ ಅನೇಕ ಹೊಸ ಕನ್ನಡ ಪದಗಳನ್ನು ಇಲ್ಲಿ ಕಾಣಬಹುದು. ಭಾಷೆಯ ಬೆಳವಣಿಗೆ, ಅದರ ಸತ್ವ ಸೊಗಡುಗಳನ್ನು ಅರಿಯಲು ಇಂತಹ ರಚನೆಗಳು ನಮಗೆ ಸಹಾಯಕ. ಶಾಂತಾ ಅವರಂತಹ ವಿದ್ವನ್ಮಣಿಗಳ ಸಾಹಿತ್ಯಯಾನ ಮುಂದುವರಿಯುತ್ತಿರಲಿ ಎಂದು ಹಾರೈಸುತ್ತೇನೆ.

ಶ್ರೀ ಗಣಪತಿ ಹೆಗಡೆ ವಿ. – ಲೇಖನ : "ಭಾಷಾ ಕಲಿಕೆ"

ಶ್ರೀ ಗಣಪತಿ ಹೆಗಡೆಯವರು ವೇದಿಕೆಯಲ್ಲಿ ಪುರಾಣ ಪಾತ್ರಗಳನ್ನು ಪರಿಚಯಿಸುವ ಮೂಲಕ ಎಲ್ಲರಿಗೂ ತಿಳಿದವರೇ ಆಗಿದ್ದಾರೆ. ನೋಡಿಯೋ ದಾಸೋಹದಲ್ಲಿ ಯಕ್ಷಗಾನ ತಾಳಮದ್ದಲೆಯನ್ನು ಪ್ರದರ್ಶಿಸಿದ್ದಾರೆ. ಅವರು ಇಂದು ಪ್ರಸ್ತುತಪಡಿಸಿರುವ "ಭಾಷಾ ಕಲಿಕೆ" ಪ್ರಬಂಧ ಶೀರ್ಷಿಕೆಯಿಂದಲೇ ಗಮನ ಸೆಳೆಯಿತು. ಪೂರ್ಣವಾಗಿ ಓದಿದ ನಂತರ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ನಶಿಸುತ್ತಿರುವ ದೃಶ್ಯ ನೋಡಿ ಮನಸ್ಸಿನಲ್ಲಿ ಖೇದ ಉಂಟಾಯಿತು. ಹೌದು, ಬೆಂಗಳೂರು ಸರ್ವಧರ್ಮ, ಸರ್ವಭಾಷಾ, ಸರ್ವಜನ ಸಮನ್ವಯದಿಂದ ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿದೆ. ಕನ್ನಡಿಗರಲ್ಲಿ ಮಾತ್ರ ಭಾಷಾಭಿಮಾನದ ಕೊರತೆ ಕಾಣುತ್ತದೆ. ಜನರಿಗೇ ಬೇಡವಾಗಿರುವ ಕನ್ನಡ ಭಾಷೆಯಲ್ಲಿ ಮಾತನಾಡುವ ವಾತಾವರಣವನ್ನು ಸರಕಾರದ ನೀತಿನಿಯಮಗಳು ಖಂಡಿತವಾಗಿಯೂ ಸೃಷ್ಟಿಸಲಾರವು. ಇದು ದುರಂತ. ಇತರ ರಾಜ್ಯಗಳಲ್ಲಿ ಅಲ್ಲಿನ ಜನರ ಭಾಷಾಭಿಮಾನ, ಭಾಷೆಯ ಬಗ್ಗೆ ಗೌರವ, ಪ್ರೀತಿ, ಹೆಮ್ಮೆಯನ್ನು ನೋಡಿಯಾದರೂ ಬೆಂಗಳೂರಿನಲ್ಲಿರುವ ಕನ್ನಡಿಗರು ಕಲಿಯಬೇಕಾದುದು ಸಾಕಷ್ಟಿದೆ. ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಬೆಕ್ಕು ಯಾವುದು, ಎಲ್ಲಿದೆ?. ಶ್ರೀ ಗಣಪತಿ ಹೆಗಡೆ ಅವರಿಗೆ ಧನ್ಯವಾದಗಳು.

ಶ್ರೀ ಕೆ.ಎನ್.ಮಹಾಬಲ – ಲೇಖನ : "ಭಾಷೆಯ ಅವಸ್ಥಾಂತರ"

ಶ್ರೀ ಕೆ.ಎನ್.ಮಹಾಬಲ ಅವರ ಬಹುಮುಖ ಸಾಹಿತ್ಯದ ಒಲವು, ಅವರ ಓದಿನ ಹರಹು, ಲೌಕಿಕ ಜೀವನಾನುಭವದ ವ್ಯಾಪ್ತಿ, ನೋಡಿಯೋ ಸಾಹಿತ್ಯ ದಾಸೋಹವನ್ನು ಪ್ರತಿ ತಿಂಗಳೂ ನಿರ್ವಹಿಸಿಕೊಂಡು ಬರುತ್ತಿರುವ ರೀತಿ ಅನನ್ಯವಾದುದು. ಅವರು ಪ್ರಸ್ತುತಪಡಿಸಿರುವ ಇಂದಿನ ಬರಹ ಒಂದು ಸಂಶೋಧನಾ ಪ್ರಬಂಧ ಎನ್ನಬಹುದು. ಕಾಲ ಗತಿಸಿದಂತೆ ಕನ್ನಡ ಭಾಷೆಯ ಶಬ್ದಗಳು ತಮ್ಮ ಮೂಲ ಅರ್ಥವನ್ನು ಕಳೆದುಕೊಂಡು ಉತ್ತಮಾರ್ಥ, ವಿರುದ್ಧಾರ್ಥ, ಹೀನಾರ್ಥಗಳನ್ನು ಹೊಮ್ಮಿಸುವ ಪರಿಯನ್ನು ಇಂದಿನ ಲೇಖನದಲ್ಲಿ ಶ್ರೀ ಮಹಾಬಲ ಅವರು ಉದಾಹರಣೆ ಸಹಿತ ವಿವರಿಸಿದ್ದಾರೆ. ಭಾಷಾ ಬೆಳವಣಿಗೆಯ ಹಂತದಲ್ಲಿ ಅಂದಂದಿನ ವಿದ್ಯಮಾನಕ್ಕೆ ತಕ್ಕಂತೆ ಇದು ಸರಿಯಾಗಿಯೇ ಇರಬಹುದು ಎಂದು ಒಪ್ಪಬಹುದಾದರೂ, ಇಂದಿನ ವಿಶ್ವಗ್ರಾಮ ಪ್ರಜ್ಞೆಯಲ್ಲಿ, ಒಂದು ಭಾಷೆಯ ಮೇಲೆ ಹಲವು ಭಾಷೆಗಳ ಪ್ರಭಾವದ ಕಾರಣದಿಂದಾಗಿ ಮೂಲ ಶಬ್ದಾರ್ಥಗಳ ಸೊಗಸು ಮರೆಯಾಗುತ್ತಿವೆ. 'ರಾಜಕೀಯ' ಎಂಬ ಪದದ ಅರ್ಥ ಮೂಲದಲ್ಲಿ 'ರಾಜ್ಯ ಆಡಳಿತದ ನಿರ್ವಹಣೆ' ಎಂದಾಗಿದ್ದರೆ, ಇತ್ತೀಚೆಗೆ ಎಲ್ಲ ಕುಟಿಲೋಪಾಯ ಕೃತ್ಯಗಳಿಗೆ, ಮೋಸ ದಂಧೆಗಳಿಗೆ

ಬಳಕೆಯಾಗುವುದನ್ನು ಕಾಣಬಹುದು. ಡಿಜಿಟಲ್ ಕ್ರಾಂತಿಯಿಂದ ಸರಳ ಸುಲಭ ಹೊಸ 'ಇಮೋಜಿ' ಸಂಕೇತ ಭಾಷೆಯೂ ಬಳಕೆಗೆ ಬಂದುಬಿಟ್ಟಿದೆ. ತುಳುಭಾಷೆಯಲ್ಲಿ ಈಗಲೂ ತಂದೆಗೆ 'ಅಮ್ಮ' ಎಂದೂ ತಾಯಿಗೆ 'ಅಪ್ಪ' ಎಂದೂ ಕರೆಯುವ ರೂಢಿಯಿದೆ. ಶ್ರೀ ಮಹಾಬಲ ಅವರು ನಮ್ಮ ವೇದಿಕೆಯ ಬಲ. ಅವರಿಗೆ ಶುಭಾಶಯಗಳು.

ಶ್ರೀ ರಾಜೇಂದ್ರ ಪ್ರಸಾದ್ – ಕವನ : "ಅರವತ್ತು ತುಂಬಿತಲ್ಲೋ ಗೆಳೆಯ"

ವಯಸ್ಸು ಅರವತ್ತು ತುಂಬಿ ನಿವೃತ್ತಿಯಾದವನ ಸ್ವಗತವನ್ನು ಜಾನಪದ ಧಾಟಿಗೆ ಹೊಂದುವಂತೆ ಕವನವನ್ನಾಗಿಸಿದ್ದಾರೆ ಶ್ರೀ ರಾಜೇಂದ್ರ ಪ್ರಸಾದ್ ಅವರು. ಕವನವನ್ನು ಹಾಡಿ ಕೇಳುಗರನ್ನು ರಂಜಿಸಿದ್ದಾರೆ. ಅರವತ್ತು ಕಳೆದಿದುದಕ್ಕೆ ನಿರಾಶೆ ಸಲ್ಲದು. ಇಷ್ಟು ವರ್ಷಗಳ ಜೀವನಾನುಭವ, ಜೀವನಪಾಠದ ಬುನಾದಿಯಲ್ಲಿ ಮುಂದಿನ ಆಯುಷ್ಯಾವಧಿಯನ್ನು ಸಂತೋಷದಿಂದ ಸ್ವೀಕರಿಸಿ ನೆಮ್ಮದಿಯಿಂದ ಮುನ್ನಡೆಯುವುದೇ ಜೀವನ ಧರ್ಮ. ಹಳೆಯ ಸವಿನೆನಪುಗಳು ಬೇಕು ಸವಿಯಲೀ ಬದುಕು. ಸಮಯದ ಸದ್ವಿನಿಯೋಗ ನಮ್ಮ ಕೈಯಲ್ಲೇ ಇದೆ. ಹೌದು, ಕವನದ ಕೊನೆಯಲ್ಲಿ ಹೇಳಿರುವ "ವಾನಪ್ರಸ್ಥವಿಂದು ತಿಳಿವು ಮೂಡಿದೊಡನೆ ಮನಕೆ ಶಾಂತಿ" ಎಂಬಂತೆ ಖುಷಿಯಿಂದಿರೋಣ ಅಲ್ಲವೇ, ರಾಜೇಂದ್ರ ಪ್ರಸಾದ್ ಅವರೇ.

ಶ್ರೀ ಶ್ರೀನಿವಾಸ ಗಟ್ಟು – ಗಝಲ್ : "ನಮಗೇನೂ ಆಗಿಲ್ಲ"

"ನಮಗೇನೂ ಆಗಿಲ್ಲ" ಎನ್ನುತ್ತಲೇ ಮನುಷ್ಯನ ಜೀವನ ದರ್ಶನವನ್ನು ತೆರೆದಿಟ್ಟಿದ್ದಾರೆ ಶ್ರೀ ಗಟ್ಟು ಅವರು ತಮ್ಮ ಗಝಲ್‌ಗಳಲ್ಲಿ. ಅಂತಸ್ಥವಾಗಿ ಹಿರಿದರ್ಥವನ್ನು ಒಳಗೊಂಡಿರುವ ಗಝಲ್‌ಗಳಲ್ಲಿ ಶಬ್ದ ಬಳಕೆಯ ಅಲಂಕಾರಿಕ ವಿಧಾನ ವಿಶಿಷ್ಟ ವಿನೂತನ ಅಂತೆಯೇ ಆಕರ್ಷಕ. ಶ್ರೀನಿವಾಸ ಗಟ್ಟು ಅವರಿಗೆ ಅಭಿನಂದನೆಗಳು.

ನೋಡಿಯೋ ಸಾಹಿತ್ಯ ದಾಸೋಹದ ಇಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಎಲ್ಲರಿಗೂ ಮತ್ತೊಮ್ಮೆ ಧನ್ಯವಾದಗಳು ಮತ್ತು ನಮಸ್ಕಾರಗಳು.



ಸಾಹಿತ್ಯ ದಾಸೋಹ ವೇದಿಕೆಯ ಎಲ್ಲಾ ಸದಸ್ಯರಿಗೂ

ದಸರಾ ಶುಭಾಶಯಗಳು